# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್, ೨೦೧೪ ಸಂಪುಟ: ೩ ಸಂಚಿಕೆ ೧೧

ಸಂಪಾದಕ : ಡಿ.ಎಸ್.ನಾಗಭೂಷಣ

ಚಂದಾ : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೨೦/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕನ ಟಿಪ್ಪಣಿಗಳು



ಪ್ರಿಯ ಓದುಗರೇ,

ಅಂತೂ ಚುನಾವಣೆಗಳು ಮುಗಿದಿವೆ. ಹೊಸ ಸರ್ಕಾರವೂ ಅಸ್ತಿತ್ವಕ್ಕೆ ಬಂದಿದೆ. ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ನೂತನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್.ಡಿ.ಎ) ಸಚಿವ ಸಂಪುಟದ ವಿವರ ಮತ್ತು ಸ್ವರೂಪಗಳು ಗೊತ್ತಾಗಿರುತ್ತದೆ. ನಿರೀಕ್ಷೆಯಂತೆಯೇ, ಸಮೀಕ್ಷೆಗಳು ಸೂಚಿಸುತ್ತಿದ್ದಂತೆಯೇ ೬೪ ವರ್ಷ ವಯಸ್ಸಿನ ನರೇಂದ್ರ ದಾಮೋದರ ದಾಸ್ ಮೋದಿಯವರು ರಾಷ್ಟ್ರ ಹದಿನೈದನೆಯ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಆದರೆ ನಿರೀಕ್ಷಿತವಲ್ಲದ್ದು ಏನೆಂದರೆ ಅವರ ಪಕ್ಷ ಮತ್ತು ಅದರ ನೇತೃತ್ವದ ಮೈತ್ರಿಕೂಟ ಪಡೆದ ಭಾರಿ ಬಹುಮತ.

ಮೋದಿ ವಿರುದ್ಧ ಏನೆಲ್ಲ ವಾದ ಮಂಡನೆಗಳಾದರೂ, ಏನೆಲ್ಲ ಮಾಹಿತಿ ಒಟ್ಟಲಾಯಿತಾದರೂ, ಏನೆಲ್ಲ ಪ್ರತಿಕೂಲ ಪ್ರಚಾರ ನಡೆಸಲಾಯಿತಾದರೂ, ಮತದಾರ ಅದನ್ನೆಲ್ಲ ನಿರ್ಲಕ್ಷಿಸಿ ಮೋದಿಯವರಿಗೆ ಅಧಿಕಾರ ದಂಡ ನೀಡಿದ್ದಾರೆ. ಸುಮಾರು ಎರಡು ತಿಂಗಳುಗಳ ಕಾಲ ದೇಶಾದ್ಯಂತ ಸಾವಿರಾರು ಕಿ. ಮೀ. ಸುತ್ತಿ ನೂರಾರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿ, ಚುನಾವಣಾ ಪ್ರಚಾರದ ವಿಷಯದಲ್ಲಿ ಒಂದು ರಾಷ್ಟ್ರೀಯ ದಾಖಲೆಯನ್ನೇ ನಿರ್ಮಿಸಿರುವ ಅವರ ಪರಿಶ್ರಮಕ್ಕೆ ಜನ ತಕ್ಕ ಪ್ರತಿಫಲ ನೀಡಿದ್ದಾರೆ. ಮೋದಿಯವರಿಗೂ ಸಹಜವಾಗಿಯೇ ಖುಷಿಯಾಗಿ ಜನಕ್ಕೆ 'ಒಳ್ಳೆಯ ದಿನಗಳು ಬರಲಿವೆ!' ಎಂದು ಭರವಸೆ ನೀಡಿದ್ದಾರೆ.

ಈ ಒಳ್ಳೆಯ ದಿನಗಳಿಗಾಗಿ ಇನ್ನು ನಿಜವಾದ ಜನಹಿತದ, ರಾಷ್ಟ್ರ ನಿರ್ಮಾಣದ ಕೆಲಸಗಳನ್ನು ಅವರು ಆರಂಭಿಸಬೇಕಿದೆ. ಇದನ್ನು ಅವರು ಹೇಗೆಗು ಮಾಡಬಲ್ಲರೋ ಕುತೂಹಲದಿಂದ ಕಾದು ನೋಡಬೇಕಿದೆ. ಏಕೆಂದರೆ, ಯಾವುದನ್ನು ಈಗ ಜನ ಅತೀವ ಸಿಟ್ಟಿನಿಂದ ತಿರಸ್ಕರಿಸಿದ್ದಾರೋ ಆ ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗೂ, ಇವರ ಆರ್ಥಿಕ ನೀತಿಗೂ ಒಂದೆರಡು ಸಣ್ಣ ವಿವರಗಳ ಹೊರತಾಗಿ-ಉದಾ: ಚಿಲ್ಲರೆ ಮಾರಾಟ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ- ಅಂತಹ ವ್ಯತ್ಯಾಸಗಳೇನೂ ಇಲ್ಲ. ಸ್ವಜನ ಪಕ್ಷಪಾತ, ಭ್ರಷ್ಟಾಚಾರಗಳಿಗೆ ಅವಕಾಶವಿಲ್ಲದ ದಕ್ಷ ಮತ್ತು ಕಟ್ಟುನಿಟ್ಟಿನ ಆಡಳಿತ ನಡೆಸಿದರೂ ಅದೇ ಆರ್ಥಿಕ ನೀತಿಯ ಮುಂದುವರಿಕೆ ಎಷ್ಟು ಜನಹಿತ ಪರಿಣಾಮಗಳನ್ನು ಉಂಟು ಮಾಡುವವೋ ಕಾದು ನೋಡಬೇಕು. ಏಕೆಂದರೆ, ಆಡಳಿತ ಪ್ರಜಾಸತ್ತಾತ್ಮಕವೂ, ಪಾರದರ್ಶಕವೂ ಆಗಿರಬೇಕಾಗಿದ್ದು, ಈ ವಿಷಯದಲ್ಲಿ ಮೋದಿಯವರ ದಾಖಲೆ ಅಷ್ಟೇನೂ ಪ್ರೋತ್ಸಾಹಕರವಾಗಿಲ್ಲ. ಅಲ್ಲದೆ, ಗುಜರಾತ್‌ನಲ್ಲಿ ಅವರು ನಡೆಸಬಹುದಾಗಿದ್ದ 'ಕಬ್ಬಿಣದ ಕೈ'ಗಳ ಆಡಳಿತ ಹಲವು ಕಾರಣಗಳಿಂದಾಗಿ ಅಖಿಲ ಭಾರತ ಮಟ್ಟದಲ್ಲಿ ಅಷ್ಟು ಸುಲಭವಲ್ಲ. ಜೊತೆಗೆ ಕಾಂಗ್ರೆಸ್ ಸರ್ಕಾರ ತನ್ನ ದುರಾಡಳಿತದ ದೋಷಗಳನ್ನು ಮುಚ್ಚಿಕೊಳ್ಳಲು ಜಾರಿಗೆ ತಂದ 'ಸಹಾಯಧನ' ಆಧಾರಿತ ಬೃಹತ್ ಜನಪ್ರಿಯ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಬಿಡದೆ ಅಥವಾ ಸೀಮಿತಗೊಳಿಸದೆ, ಯಾವುದಕ್ಕಾಗಿ ಕಾಂಗ್ರೆಸ್ಸನ್ನು ದೂಷಿಸಲಾಗುತ್ತಿತ್ತೋ ಆ ಹಣಕಾಸು ಅವ್ಯವಸ್ಥೆಯನ್ನು ಸರಿಪಡಿಸಲಾದಿತೋ? ಹಾಗೆ ಕೈಬಿಟ್ಟಲ್ಲಿ ಅಥವಾ ಮೊಟಕುಗೊಳಿಸಿದಲ್ಲಿ' ಜನತೆಯ ಆಕ್ರೋಶವನ್ನು ನಿಭಾಯಿಸುವ ಬಗೆಗಳು ಯಾವುವು? ಈ ಎಲ್ಲ ಸಂಗತಿಗಳು ಮುಂದಿನ ದಿನಗಳಲ್ಲಿ ಅವರು ಅನುಸರಿಸುವ ರಾಜಕಾರಣವನ್ನು ಕುತೂಹಲದಿಂದ ನೋಡುವಂತಾಗಿದೆ. ಆದರೆ ಅವರ ಪ್ರಮಾಣ ವಚನ ಸಮಾರಂಭಕ್ಕಾಗಿ ನಡೆದಿರುವ ವ್ಯಾಪಕ ಸಿದ್ಧತೆ, ಅದರ ಅದ್ದೂರಿ, ಅದಕ್ಕಾಗಿ ಉದ್ದೇಶಿಸಿರುವ ಸರ್ಪಗಾವಲಿಗಾಗಿ ಯುದ್ದೋಪಾದಿಯಲ್ಲಿ ನಡೆದಿರುವ ಭದ್ರತಾ ಕ್ರಮಗಳನ್ನು ನೋಡಿದರೆ ಕೊಂಚ ಆತಂಕವೂ ಆಗುತ್ತಿದೆ ಎಂಬುದನ್ನೂ ಇಲ್ಲಿ ಹೇಳಿಬಿಡಬೇಕು.

ಅದೇನೇ ಇರಲಿ, ಮೋದಿಯವರ ಬಗ್ಗೆ ನಿಸ್ಸಂದೇಹವಾಗಿ ಹೆಮ್ಮೆಯಿಂದ ಹೇಳಬಹುದಾದ ಒಂದು ಸಂಗತಿ ಎಂದರೆ, ಅವರು ಇಂಗ್ಲಿಷ್ ಮಾತನಾಡಲಾಗದ ಮತ್ತು ಆ ಬಗ್ಗೆ ಯಾವ ಕೀಳರಿಮೆಯೇನೂ ಇದ್ದಂತಿಲ್ಲದ ಭಾರತದ ಮೊದಲ ಪ್ರಧಾನ ಮಂತ್ರಿ. ಆದರೂ ಅವರು ದೇಶವನ್ನು ಹಿಂದೆಂದೂ ಕಾಣದಂತಹ ಪ್ರಗತಿಯೆಡೆಗೆ ಕೊಂಡೊಯ್ಯುವರು ಎಂಬ ಭರವಸೆಯೊಂದಿಗೆ ಭಾರತ ಅವರನ್ನು ತನ್ನ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದೆ! ಮೋದಿಯವರಿಗೆ ನಮ್ಮ ಶುಭಾಶಯಗಳು!

## ಮನಮೋಹನ ಸಿಂಗ್‌ರಿಗೆ ವಿದಾಯ!



ಇನ್ನು ನೆಹರೂ ನಂತರ ನಿರಂತರವಾಗಿ ದೇಶದ ಪ್ರಧಾನ ಮಂತ್ರಿಯಾಗಿದ್ದರೆಂಬ ಹೆಗ್ಗಳಿಕೆ ಗಳಿಸಿದ ಮನಮೋಹನ ಸಿಂಗ್ ಅವರು ತಮ್ಮ ಪಕ್ಷದ ತುಂಬ ಅವಮಾನಕರ ಸೋಲಿನ ಬೆನ್ನಲ್ಲಿ ಅಧಿಕಾರ ತ್ಯಜಿಸಬೇಕಾಗಿಬಂದಿರುವುದು ತೀರಾ ವಿಷಾದದ ಸಂಗತಿಯೇ ಆಗಿದೆ. ಹಾಗೆ ನೋಡಿದರೆ ಕಾಂಗ್ರೆಸ್ ಈ ಬಾರಿ ವಿರೋಧ ಪಕ್ಷದ ಸ್ಥಾನಮಾನಕ್ಕೂ ಅರ್ಹವಾಗದಷ್ಟು ಹೀನಾಯ ಸೋಲು ಅನುಭವಿಸಲು ಒಂದು ಕಾರಣ ಈ ಮನಮೋಹನ ಸಿಂಗ್ ಎಂದೂ ಹೇಳಬಹುದು. ಈತ ಜನತೆಯ ನೇರ ಆದೇಶವಿಲ್ಲದೆಯೇ-ರಾಜ್ಯ ಸಭೆಯ ಸದಸ್ಯರಾಗಿ-ಹತ್ತು ವರ್ಷ ದೇಶವನ್ನು ಆಳಿದ್ದು, ಸಾಂವಿಧಾನಿಕವಾಗಿ ಸಕ್ರಮವೇ ಆದರೂ ಪ್ರಜಾಪ್ರಭುತ್ವದ ಭಾವನೆಯ ದೃಷ್ಟಿಯಿಂದ ಅಕ್ರಮವೆಂದೇಎಂದು ಹೇಳಬೇಕು. ಅದೂ ಇವರು ಮೊದಲ ಬಾರಿಗೆ ಸಂಸತ್ತನ್ನು ಪ್ರವೇಶಿಸಿದ್ದೂ, ತಾನು ಅಸ್ಸಾಂ ರಾಜ್ಯದ ಪ್ರಜೆ ಎಂಬ ಅನುಮಾನಾಸ್ಪದ ಅಫಿಡವಿಟ್ ಸಲ್ಲಿಸುವ ಮೂಲಕ. ಇವರನ್ನು ನಮ್ಮ ದೇಶದ ಮೇಲೆ ಆರ್ಥಿಕ ಮಂತ್ರಿಯಾಗಿ ಹೇರಿ ನಂತರ ಪ್ರಧಾನಿಯಾಗಲು ಅವಕಾಶ ಮಾಡಿಕೊಟ್ಟಿದ್ದರ ಹಿಂದೆ ಒದೆ ಒಂದು ಅಂತಾರಾಷ್ಟ್ರೀಯ ಯೋಜನೆಯೇ ಇತ್ತೆಂಬ ಮಾತೂ ಇದೆ.

ಅದೇನೇ ಇದ್ದರೂ, ಜನನಾಯಕನಲ್ಲದವರೊಬ್ಬರನ್ನು ದೇಶದ ಪ್ರಧಾನ ಮಂತ್ರಿಯಾಗಿ ಮಾಡಿ ಅವರ ಮೂಲಕ ರಾಜಕಾರಣ ಮಾಡಹೊರಟ ಕಾಂಗ್ರೆಸ್ ಪಕ್ಷ ಆತ್ಯಂತಿಕವಾಗಿ ಮಾರಣಾಂತಿಕ ಪೆಟ್ಟು ತಿಂದಿರುವುದು ಪ್ರಜಾಪ್ರಭುತ್ವದ ದೃಷ್ಟಿಯಿಂದ ನ್ಯಾಯಬದ್ಧವಾಗಿಯೇ ಇದೆ.

ಹಾಗೆ ನೋಡಿದರೆ, ಕಾಂಗ್ರೆಸ್ ೧೯೯೦ರ ದಶಕದಲ್ಲಿ ಮುಳುಗುವ ಸ್ಥಿತಿಯಲ್ಲಿದ್ದಾಗ ಎಲ್ಲಿಂದಲೋ ಇಳಿದುಬಂದಂತೆ ಈ ದೇಶದ ಅರ್ಥ ಮಂತ್ರಿಯಾಗಿ ತನ್ನೊಡನೆ ತಂದಿದ್ದ ವಿಶ್ವ ಬ್ಯಾಂಕಿನ 'ಆರ್ಥಿಕ ಚೀಲ'ದಿಂದ ದೇಶದ ಮುಂದೆ ತೆಗೆದಿಟ್ಟ ಹಣಕಾಸಿನ ಮಿಠಾಯಿಗಳ ಲಾಭದಾಯಕ ವ್ಯಾಪಾರ-ವ್ಯವಹಾರದ ಮೂಲಕ ಆ ಪಕ್ಷಕ್ಕೆ ಮರುಜೀವ ನೀಡಿದ್ದು ಮನಮೋಹನ ಸಿಂಗ್‌ರೇ. ಆದರೆ ಈ ವ್ಯವಹಾರ ಭಾರತದಂತಹ ಕೃಷಿಮೂಲ ಗ್ರಾಮ ಸಂಸ್ಕೃತಿಯ ದೇಶದಲ್ಲಿ ಒಂದು ರಾಜಕೀಯ ಕಾರ್ಯಚರಣೆಯಾಗಿ ಬಹುಕಾಲ ಲಾಭದಾಯಕವಾಗಿ ನಡೆಯಲಾಗದ್ದು. ಅದನ್ನರಿತ ಅವರು ದೇಶವನ್ನೇ ವ್ಯಾಪಾರಾಧಾರಿತ ನಗರೀಕರಣಕ್ಕೆ ಒಳಪಡಿಸಲೆತ್ನಿಸಿ ಅದು ಸೃಷ್ಟಿಸಿದ ಹಲವು-ರಾಜಕೀಯ ನಿರ್ಧಾರದ ಶಕ್ತಿಯ ಕೊರತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿ-ಸಮಸ್ಯೆಗಳಲ್ಲಿ ಸಿಕ್ಕಿ ಹಾಕಿಕೊಂಡು ಬಸವಳಿದು ಹೋದರು. ದುರಂತವೆಂದರೆ ಅವರು ತಮ್ಮ ಈ ರಾಜಕಾರಣದ ಆರಂಭದ ದಿನಗಳಲ್ಲಿ ಈ ದೇಶದ ಮಧ್ಯಮ ವರ್ಗಕ್ಕೆ ಹತ್ತಿಸಿದ 'ಸುಲಭ ಸುಖ'ದ ರುಚಿ ಈಗ ಅವರನ್ನೇ ಆಹುತಿ ತೆಗೆದುಕೊಂಡಿದೆ. ಮನಮೋಹನ ಸಿಂಗ್ ಈಗ ನಮ್ಮ ನವ ಮಧ್ಯಮ ವರ್ಗವನ್ನು ಅತ್ಯಂತ ಕೃತಘ್ನ ವರ್ಗವೆಂದು ದೂಷಿಸುತ್ತಿದ್ದಲ್ಲಿ ಅದು ಸರಿ ಮತ್ತು ಸಹಜವೇ ಆಗಿದೆ. ಆದರೆ ಇದೆಲ್ಲದರ ಅತ್ಯಂತ ಕೆಟ್ಟ ಪರಿಣಾಮವೆಂದರೆ, ಜಗತ್ಪ್ರಸಿದ್ಧ ಅರ್ಥಶಾಸ್ತ್ರಜ್ಞ ಎಂದು ಹೇಳಲಾಗುವ ಮನಮೋಹನ ಸಿಂಗ್ ಎಂಬ ಈ ಮನುಷ್ಯ ಕೊನೆಗೆ ಅಪ್ಪಟ ಮೊದ್ದುಮಣಿಯಂತಿರುವ ರಾಹುಲ್ ಗಾಂಧಿ ಕೈಕೆಳಗೆ ಕೆಲಸ ಮಾಡಲು ತಾನು ಸಿದ್ಧ ಎಂದು ಹೇಳುವ ಸ್ಥಿತಿ ತಲುಪಿದ್ದು. ಇಂತಹ ಪರಿಸ್ಥಿತಿಯಲ್ಲಿ ಈಗ ಈ ಮನುಷ್ಯನ ಬಗೆಗಾದರೂ, ಆತನ ಪಕ್ಷದ ಬಗೆಗಾದರೂ ಹೇಳಲು ಏನು ಉಳಿದಿದೆ? ಪಕ್ಷವಂತೂ ಮುಟ್ಟಬೇಕಾದ ಗತಿಯನ್ನೇ ಮುಟ್ಟಿದೆ.

ಆದರೆ ಈ ದೇಶಕ್ಕೆ ಕಾಂಗ್ರೆಸ್ ಬೇಕು. ಅದಕ್ಕೊಂದು ಪರಂಪರೆ ಇದೆ. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಹುಟ್ಟಿ ಈ ಪಕ್ಷ ಭಾರತದ ಸಾಮಾನ್ಯ ಜನತೆಯೊಂದಿಗೆ ಸಹಜವಾಗಿ ಗುರುತಿಸಿಕೊಳ್ಳಬಲ್ಲ ಗುಣವನ್ನು ಇತ್ತೀಚಿನವರೆಗೂ-ಮುಕ್ತ ಮಾರುಕಟ್ಟೆ ನೀತಿಗೆ ವಿಮರ್ಶಾತೀತವಾಗಿ ತನ್ನನ್ನು ಒಪ್ಪಿಸಿಕೊಳ್ಳುವವರೆಗೆ-ಆಂತರಿಕವಾಗಿ ಹೊಂದಿದ್ದ ಪಕ್ಷ. ಇಂದಿರಾ ಗಾಂಧಿಯವರ ಆಡಳಿತದ ಒಂದು ಸಣ್ಣ ಕೆಟ್ಟ ಅವಧಿಯ ಹೊರತಾಗಿ ಉದಾರ ಪ್ರಜಾಪ್ರಭುತ್ವಕ್ಕೆ ಬದ್ಧವಾದ ಪಕ್ಷವಿದು. ಅದು ಈಗ ಅಷ್ಟೇನೂ ಪ್ರತಿಭಾಶಾಲಿಯೂ, ಸೃಜನಶೀಲವಾಗಿಯೂ ಇರದ ಕುಟುಂಬ ರಾಜಕಾರಣದ ಹೊರೆಯನ್ನು ಇಳಿಸಿಕೊಂಡು ತನ್ನ ಸ್ವಂತ ಕಾಲುಗಳ ಮೇಲೆ ನಿಲ್ಲಬಲ್ಲ ಸ್ವಾಭಿಮಾನವನ್ನೂ, ಪರಿಶ್ರಮವನ್ನೂ, ಜಾಣತನವನ್ನೂ, ಸಂಘಟನಾ ಸಾಮರ್ಥ್ಯವನ್ನೂ ತೋರಿಸಬಲ್ಲುದಾದರೆ, ಜನತೆ ಬಹುಬೇಗ ಅದರತ್ತ ಮತ್ತೆ ನೋಡುವುದರಲ್ಲಿ ಸಂಶಯವಿಲ್ಲ. ಈ ವಿಷಯಗಳಲ್ಲಿ ಅದು ಬಿಜೆಪಿಯಿಂದ ಕಲಿಯಬೇಕಾದ್ದು ಸಾಕಷ್ಟಿದೆ. ಕಾಂಗ್ರೆಸ್ಸಿಗೆ ನೆನಪಿರಲಿ: ಈ ಚುನಾವಣೆಗಳಲ್ಲಿ ಮೇಲ್ನೋಟಕ್ಕೆ ಬಿಜೆಪಿಯ ಬಿರುಗಾಳಿ ಬೀಸಿದಂತೆ ಕಂಡಿದ್ದರೂ, ಅದಕ್ಕೆ ಬಿದ್ದಿರುವ ಮತ ಶೇ ೩೧ಕ್ಕೂ ಕಡಿಮೆ!

## ಸಿದ್ಧರಾಮಯ್ಯನವರಿಗೆ ಎಚ್ಚರಿಕೆಯ ಘಂಟೆ!

ಇನ್ನು ನಮ್ಮ ಸಿದ್ಧರಾಮಯ್ಯನವರ ಸ್ಥಿತಿ ನೋಡಿ. ೨೮ರಲ್ಲಿ ಕನಿಷ್ಟ ೧೮-೨೦ ಸ್ಥಾನಗಳನ್ನು ಗೆಲ್ಲುವ ಭರವಸೆ ಹೊಂದಿದ್ದ ಅವರು ಕೇವಲ ೯ನ್ನು ಗೆದ್ದು ಚುನಾವಣಾ ಪೂರ್ವ ಪರಿಸ್ಥಿತಿಗೇ ಹಿಂದಿರುಗಿದ್ದಾರೆ! ಅವರ ಅನ್ನ ಭಾಗ್ಯ, ಕ್ಷೀರಭಾಗ್ಯ, ಅಹಿಂದ ಕಲ್ಯಾಣ ಕಾರ್ಯಕ್ರಮಗಳಾವುವೂ ಅವರ ಕೈಹಿಡಿದಿಲ್ಲ. ಹೀಗೇಕೆ ಎಂದು ಅವರು ಯೋಚಿಸಬೇಕಿದೆ. ಸಿದ್ಧರಾಮಯ್ಯ ಒಂದು ವರ್ಷದ ಹಿಂದೆ ಮುಖ್ಯ ಮಂತ್ರಿಯಾದಾಗ ನಾವೆಲ್ಲ ಹಿಗ್ಗಿದ್ದೆವು. ಕರ್ನಾಟಕದ ರಾಜಕಾರಣ ಮತ್ತು ಆಡಳಿತದಲ್ಲಿ ಹೊಸ ಶಕೆ ಆರಂಭವಾಗುವುದೆಂದು ಭಾವಿಸಿದ್ದೆವು. ಆದರೆ ಈ ಒಂದು ವರ್ಷದಲ್ಲಿ, ಲೋಹಿಯಾ ರಾಜಕಾರಣದಿಂದ ಸ್ಫೂರ್ತಿ ಪಡೆದಿರುವುದಾಗಿ ಹೇಳಿಕೊಳ್ಳುವ ಈ ಮನುಷ್ಯ ಕೆಟ್ಟ ಅನ್ನಲಾಗದಿದ್ದರೂ, ಕಲ್ಪನಾಶೀಲತೆ ಎಂಬುದಿಂದಷ್ಟೂ ಇಲ್ಲದ ಜಡ ಸರ್ಕಾರವನ್ನಷ್ಟೇ ನೀಡಿ ನಿರಾಶೆ ಉಂಟು ಮಾಡಿದ್ದಾರೆ. ಚುನಾವಣಾ ಫಲಿತಾಂಶ ಅದನ್ನು ಸಾಬೀತುಪಡಿಸಿದೆ.



ಸಿದ್ಧರಾಮಯ್ಯ ತಾನು ಭಿನ್ನ ರಾಜಕಾರಣಿ ಎಂಬುದನ್ನು ಅಲ್ಪಾವಧಿ ಕ್ರಮಗಳ ಮೂಲಕವಾಗಲೀ, ಅಥವಾ ದೀರ್ಘಾವಧಿ ಕ್ರಮಗಳ ಮೂಲಕವಾಗಲೀ, ಈವರೆಗೆ ತೋರಿಸಲಾಗಿಲ್ಲ. ತಾನು ಜನತೆಯ ಮುಖ್ಯಮಂತ್ರಿ ಎಂಬ ಯಾವ ಸೂಚನೆಯನ್ನೂ ಅವರು ನೀಡಲಾಗಿಲ್ಲ. ಅದೇ ಕಾವಲು ಪಡೆ, ಅದೇ ವಾಹನ ಸಾಲು, ಅದೇ ದರ್ಬಾರು! ಮತ್ತು ಅದೇ ಹಳೇ ತುಕ್ಕು ಹಿಡಿದು ಹೋಗಿರುವ ಸಾಮಾಜಿಕ ನ್ಯಾಯ ರಾಜಕಾರಣದ ಜನಪ್ರಿಯ ಕಾರ್ಯಕ್ರಮಗಳು. ಆದರೆ ಜನಸಾಮಾನ್ಯರು ದಿನನಿತ್ಯ ಸರ್ಕಾರದೊಡನೆ ಸಂಪರ್ಕಕ್ಕೆ ಬರುವ ಸರ್ಕಾರಿ ಕಛೇರಿಗಳು, ಪೋಲೀಸ್ ಠಾಣೆಗಳು ಜನತೆಯ ವೈರಿಗಳಂತೆಯೇ ಉಳಿದಿವೆ. ಸಾಮಾನ್ಯ ಜನವೂ ಇವರ ಅನ್ನಭಾಗ್ಯ, ಇವರ ಪಕ್ಷದ ಉದ್ಯೋಗ ಖಾತರಿ ಯೋಜನೆಗಳ ಬಗ್ಗೆ, ಅವು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿರುವ ಬಗ್ಗೆ ತೀವ್ರ ಅಸಮಧಾನದಿಂದ ಮಾತನಾಡುತ್ತಿದ್ದಾರೆ. ಈ ಬಗ್ಗೆ ಒಂದು ವಸ್ತುನಿಷ್ಠ ವಿಮರ್ಶೆ ತುರ್ತು ಅಗತ್ಯವಾಗಿದೆ. ಹಾಗೇ ಅಕ್ರಮ ಗಣಿಗಾರಿಕೆ, ಭೂಕಬಳಿಕೆ, ಕೆ.ಪಿ.ಎಸ್.ಸಿ. ಮತ್ತು ಕಾಮೆಡ್.ಕೆ ಹಗರಣಗಳ ಬಗ್ಗೆ ನಿಮ್ಮದು ನಿಧಾನ ದ್ರೋಹದ ನೀತಿ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಸಿದ್ಧರಾಮಯ್ಯನವರೇ ಎಚ್ಚರಗೊಳ್ಳಿ!

ಸಿದ್ಧರಾಮಯ್ಯ ಈ ಚುನಾವಣೆಗಳಿಂದ ಕಲಿಯಬೇಕಾದ ಮೊದಲ ಪಾಠವೆಂದರೆ, ಮತದಾರರ ಹಳೆಯ ಸಾಮಾಜಿಕ ವಿಂಗಡಣಾ ಗೆರೆಗಳು ಈಗ ಮಸುಕಾಗುತ್ತಿವೆ, ಅವರ ನಿರೀಕ್ಷೆಗಳು ಬದಲಾಗುತ್ತಿವೆ. ಅದಕ್ಕೆ ತಕ್ಕಂತೆ ಅವರು ತಮ್ಮ ರಾಜಕಾರಣದ ರೀತಿ ನೀತಿಗಳನ್ನು ಬದಲಿಸಿಕೊಳ್ಳಬೇಕಿದೆ. ಆದರೆ ಸಿದ್ಧರಾಮಯ್ಯನವರ ಸಮಸ್ಯೆಯೆಂದರೆ, ಅವರ ಸುತ್ತ ಯಾವುದೇ ವಿಶೇಷ ಪ್ರತಿಭೆ ತೋರದ ಹೌದಪ್ಪ ಮತ್ತು ಚೇಲಾಗಳೇ ತುಂಬಿಹೋಗಿದ್ದಾರೆ. ಅವರು ತಪ್ಪು ಹೆಜ್ಜೆ ಇಟ್ಟಾಗ ನಿಷ್ಠುರವಾಗಿ ಅದನ್ನು ಹೇಳಿ ಸರಿ ದಾರಿ ಇದಿರಬಹುದು ಎಂದು ಹೇಳಬಲ್ಲ ಛಾತಿ ಮತ್ತು ಪ್ರತಿಭೆ ಇರುವ ಒಬ್ಬ ಪ್ರಾಣಿಯೂ ಅವರ ಸುತ್ತಮುತ್ತ ಕಾಣುತ್ತಿಲ್ಲ. ಆದಷ್ಟು ಬೇಗ ಮುಖ್ಯಮಂತ್ರಿಗಳು ತಮ್ಮ ಔಪಚಾರಿಕ ಮತ್ತು ಅನೌಪಚಾರಿಕ ಸಲಹಾಕಾರರನ್ನು ಬದಲಾಯಿಸಿಕೊಳ್ಳದಿದ್ದರೆ ಅವರ ರಾಜಕೀಯ ಇನ್ನಷ್ಟು ಇಳಿಮುಖವಾಗುತ್ತಾ ಹೋಗುವುದು ಖಚಿತ. ಖಜಾನೆ ಹಣ ಖರ್ಚು ಮಾಡಿ ಎಷ್ಟು ಪತ್ರಿಕಾ ಜಾಹೀರಾತುಗಳನ್ನು ನೀಡಿದರೂ ಯಾವ ಪ್ರಯೋಜನವೂ ಆಗಲಾರದು. ಬದಲಿಗೆ, ಬರಲಿರುವ ವಿಧಾನ ಪರಿಷತ್ ಮತ್ತು ರಾಜ್ಯಸಭಾ ಚುನಾವಣೆಗಳಲ್ಲಿ ಪಕ್ಷ ರಾಜಕೀಯವನ್ನು ಮೀರಿ ಯೋಚಿಸಿ ತಮ್ಮ ಸರ್ಕಾರ ಮತ್ತು ಪಕ್ಷಕ್ಕೆ ಒಂದು ಹೊಸ ಘನತೆಯನ್ನು ತಂದುಕೊಡಬಲ್ಲ ವಿವಿಧ ಕ್ಷೇತ್ರಗಳ ಪ್ರತಿಭೆಗಳನ್ನು ಗುರುತಿಸುವ ಕೆಲಸವನ್ನು ಅವರು ಮಾಡಬೇಕು.

ಸಿದ್ಧರಾಮಯ್ಯ ಒಮ್ಮೆ ತಮಿಳ್ನಾಡು, ಒರಿಸ್ಸಾ, ಪಶ್ಚಿಮ ಬಂಗಾಳದತ್ತಲೂ, ಇನ್ನೊಮ್ಮೆ ಉತ್ತರ ಪ್ರದೇಶ, ಬಿಹಾರಗಳತ್ತಲೂ ನೋಡಬೇಕು. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಜಾತಿ ರಾಜಕಾರಣ ಒಂದು ಸಹನೀಯ ಮಟ್ಟದಲ್ಲಿ ಮತ್ತು ಹಂತದವರೆಗೆ ಮಾತ್ರ ನಡೆದೀತು. ಅದರಾಚೆಗೆ ಜನತೆಗೆ ಅರ್ಪಿತವಾದ ಸಮರ್ಥ ನಾಯಕತ್ವವಷ್ಟೇ ಉಳಿದು ಬಾಳುವುದು. ಸಿದ್ಧರಾಮಯ್ಯ ಮುಖ್ಯಮಂತ್ರಿಯಾಗಲು ಆಸೆ ಪಟ್ಟರು. ಆದರು ಕೂಡ. ಆದರೆ ಅಷ್ಟೇ ಸಾಕೆ? ಅವರು ಯೋಚಿಸಲಿ.

**-ಸಂಪಾದಕ**

## ನಮ್ಮ ಸಮಾಜವಾದಿಗಳು

# ಸರಳ ಸಭ್ಯ ಸಮಾಜವಾದಿ ಮೂಡುಬಾಗಿಲು ರಾಮಪ್ಪ



ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ೧೯೫೨ರಲ್ಲಿ ಶಾಂತವೇರಿ ಗೋಪಾಲಗೌಡರು ಚುನಾವಣಗೆ ನಂತಾಗ ಅವರ ಪರಿಚಯವೇ ಇಲ್ಲದ ಹುಡುಗನೊಬ್ಬ ತನ್ನದೇ ಸೈಕಲ್‌ನಲ್ಲಿ ಓಡಾಡಿ ಮೇಗರವಳ್ಳಿ ಸೀಮೆಯಲ್ಲಿ ಸೋಷಲಿಸ್ಟ್ ಪಕ್ಷದ ಪರ ನಿರಂತರ ಪ್ರಚಾರ ನಡೆಸುತ್ತಿದ್ದ. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬದರಿನಾರಾಯಣ ಅವರನ್ನು ಗೆಲ್ಲಿಸಲೇಬೇಕೆಂದು ಕಡಿದಾಳು ಮಂಜಪ್ಪನವರು ಹತ್ತಿರದ ಸಂಬಂಧಿ ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್‌ರೊಂದಿಗೆ (ಆಗ ವಕೀಲರು) ಬಿರುಸಿನ ಪ್ರಚಾರ ನಡೆಸುತ್ತಿದ್ದರು. ಅವರು ಕಾರಿನಲ್ಲಿ ಹೋದಲ್ಲೆಲ್ಲ ಈ ಹುಡುಗನೂ ಎದುರಾಗುತ್ತಿದ್ದ. ಕೆಂದಾಳಬೈಲು, ನಾಲೂರು, ಮೇಗರವಳ್ಳಿ, ಕಮ್ಮರಡಿ ಇಲ್ಲೆಲ್ಲ ಕಾಣಿಸಿದಾಗ ಈತನ ಬಗ್ಗೆ ಕುತೂಹಲ ತಾಳಿದ ಎನ್.ಡಿ. ವೆಂಕಟೇಶ್ 'ಯಾಕೆ ನೀನು ಗೋಪಾಲನ ಪರವಾಗಿ ಪ್ರಚಾರ ಮಾಡುತ್ತೀ?' ಎಂದು ಕೇಳಿದರು. ಅದಕ್ಕೆ ಪ್ರತಿಯಾಗಿ 'ಗೋಪಾಲಗೌಡರು ಏನು ಅಪರಾಧ ಮಾಡಿದ್ದಾರೆ ಹೇಳಿ!' ಎಂದು ಹುಡುಗ ಪ್ರಶ್ನೆ ಮಾಡಿದ. ರಾತ್ರಿ ಕಾಂಗ್ರೆಸ್ ಪ್ರಚಾರ ತಂಡ ಉಳಿದುಕೊಂಡಿದ್ದ ಮೇಗರವಳ್ಳಿ ಬೊಮ್ಮಯ್ಯ ಹೆಗ್ಗಡೆಯವರ ಮನೆಗೆ ಊಟಕ್ಕೆ ಈತನನ್ನೂ ಒತ್ತಾಯಿಸಿ ಕರೆದರು. ಸಂಕೋಚದಿಂದ ಈತ ಹೋದಾಗ ಸಂತೋಷದಿಂದ ಮಾತನಾಡಿ 'ಗೋಪಾಲನ ಪುಣ್ಯ ಕಣಯ್ಯ ನಿನ್ನಂಥ ಕಾರ್ಯಕರ್ತರಿದ್ದಾರೆ. ಗೋಪಾಲ ಗೆಲ್ಲಬೇಕು. ನೀನು ಪ್ರಚಾರ ಮಾಡು.' ಎಂದರಂತೆ!

ಆಗಷ್ಟೆ ಎಸ್.ಎಸ್.ಎಲ್.ಸಿ. ಮುಗಿಸಿದ್ದ ಆ ಹರೆಯದ ಹುಡುಗನೇ ಈಗ ಎಂಭತ್ತಮೂರು ವರ್ಷದ ವಯೋವೃದ್ಧರಾಗಿರುವ ಎಂ.ವಿ. ರಾಮಪ್ಪ. ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಇವರಿಗಿಂತ ತುಸುವೇ ಹಿರಿಯ ವಿದ್ಯಾರ್ಥಿಯಾಗಿದ್ದ ಗೋಪಾಲಗೌಡರ ಸಾರ್ವಜನಿಕ ಭಾಷಣಗಳು, ಖಾಸಗಿ ಚರ್ಚೆಗಳಿಂದ ಪ್ರಭಾವಿತನಾಗಿದ್ದ ಯುವಕ. ಸಾವಿರಾರು ಜನ ಗೌಡರ ಭಾಷಣಕ್ಕೆ ಆಗಲೇ ನೆರೆಯುತ್ತಿದ್ದುದು ನೋಡಿ ಬೆರಗಾಗಿದ್ದ ರಾಮಪ್ಪ, ತಾನೂ ಒಳ್ಳೆಯ ಮಾತುಗಾರನಾಗಿ ಅವರ ಪರ ಪ್ರಚಾರದಲ್ಲಿ ತೊಡಗಿಕೊಂಡರು. ಸಮಾಜವಾದಿ ತತ್ವ ನಿಷ್ಠೆ ಮತ್ತು ಗೌಡರ ಪರವಾದ ವ್ಯಕ್ತಿ ನಿಷ್ಠೆಗಳನ್ನು ಬೆಳೆಸಿಕೊಂಡರು. ಜೀವಮಾನವೆಲ್ಲ ಸಮಾಜವಾದಿ ಕಾರ್ಯಕರ್ತನಾಗಿ ಗೌಡರ ಅನುಯಾಯಿಯಾಗಿ ಉಳಿದುಕೊಂಡಿದ್ದಾರೆ. ಗೌಡರ ನಂತರ ಕೋಣಂದೂರು ಲಿಂಗಪ್ಪನವರು ೧೯೭೨ ರಲ್ಲಿ ಚುನಾವಣಾ ಅಭ್ಯರ್ಥಿಯಾದಾಗಲೂ ಅವರ ಪರವಾಗಿ ಮುಖ್ಯ ಪ್ರಚಾರಕರಾಗಿ ದುಡಿದರು.

ರಾಮಪ್ಪನವರು ಓದಿದ್ದು ಸ್ವಲ್ಪವೇ. ತಂದೆ ತಾಯಿ ಚಿಕ್ಕಂದಿನಲ್ಲೇ ತೀರಿಕೊಂಡಿದ್ದರಿಂದ ಸೋದರತ್ತೆಯ ಆಶ್ರಯದಲ್ಲಿ ಬೆಳೆಯಬೇಕಾಗಿ ಬಂತು. ಹುಡುಗ ಬುದ್ಧಿವಂತನಾಗಿದ್ದ. ಒಮ್ಮೆ ನಾಲೂರಿನಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದ ಈತನನ್ನು ಮನೆಯಲ್ಲಿ ಕುಳಿತಿದ್ದ ಚಿನ್ನಪ್ಪಗೌಡರು ಕರೆದು ವಿಚಾರಿಸಿ ತಾನು ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದಾಗಿ ಹೇಳಿದರು. (ಮಲೆನಾಡು ಭಾಗದ ಹಲವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ ಮಹನೀಯರು ಈ ಚಿನ್ನಪ್ಪಗೌಡರು. ಪ್ರಸಿದ್ಧ ಸಾಹಿತಿ ಹಾ.ಮಾ. ನಾಯಕರಿಗೂ ಸಹಾಯ ಮಾಡಿದ್ದ ಬಂಧು). ಆದರೆ ಮನೆಯಲ್ಲಿ ಒಪ್ಪಿಗೆ ದೊರೆಯಲಿಲ್ಲವಾದ್ದರಿಂದ ರಾಮಪ್ಪನ ಓದು ಅಲ್ಲಿಗೇ ಮುಕ್ತಾಯವಾಯಿತು. ಆದರೆ ಅವರ ರಾಜಕೀಯ ಸಿದ್ಧಾಂತಗಳ ಪರಿಜ್ಞಾನ ವಿಶೇಷವಾದದ್ದು. ಈಗಲೂ ಅವರೊಂದಿಗೆ ಮಾತಿಗಳಿದರೆ ಅವರ ಸೊಗಸಾದ ಮಾತುಗಾರಿಕೆ ಅರಿವಿಗೆ ಬರುತ್ತದೆ.

ರಾಮಪ್ಪನವರ ಇಂಥ ವ್ಯಕ್ತಿತ್ವಕ್ಕೆ ಮಹತ್ವಪೂರ್ಣ ಕುಟುಂಬದ ಹಿನ್ನೆಲೆ ಇದೆ. ತಂದೆ ವೆಂಕಪ್ಪಗೌಡರು ಪ್ರಮುಖ ದೇಶಭಕ್ತರಾಗಿದ್ದ ಗಾಂಧಿ ಅನುಯಾಯಿ. ೧೯೨೪ರ ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ಚಿಕ್ಕಪ್ಪ ಗಿರಿಯಪ್ಪಗೌಡರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ಒಂದು ವರ್ಷ ಎಂಟು ತಿಂಗಳು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಸೆರೆವಾಸ ಅನುಭವಿಸಿದ್ದರು. ಸಹಜವಾಗಿ ಕಾಂಗ್ರೆಸಿಗರೇ ಆಗಿದ್ದ ರಾಮಪ್ಪಗೌಡರು ಗೋಪಾಲಗೌಡರ ವರ್ಚಸ್ವೀ ವ್ಯಕ್ತಿತ್ವದಿಂದ ಸೆಳೆಯಲ್ಪಟ್ಟು ಸೋಷಲಿಸ್ಟರಾದರು. ಗೋಪಾಲಗೌಡರು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಈ ಭಾಗಕ್ಕೆ ಬಂದರೆ ಮೂಡುಬಾಗಿಲು ರಾಮಪ್ಪನ ಮನೆಯಲ್ಲೇ ಮೊಕ್ಕಾಂ ಹಾಕುತ್ತಿದ್ದರು. ರಾಮಪ್ಪ ಓಟು ಕೊಡಿಸುತ್ತಿದ್ದುದಷ್ಟೇ ಅಲ್ಲ, ಪಕ್ಷಕ್ಕಾಗಿ ಧನಸಂಗ್ರಹಣೆಯನ್ನೂ ಮಾಡಿಕೊಡುತ್ತಿದ್ದರು.

ಮೂಡುಬಾಗಿಲು ರಾಮಪ್ಪ, ರೈತ ಚಳುವಳಿಯ ಅಂಗವಾದ ನರಗುಂದ ನವಲಗುಂದ ಘಟನಾವಳಿಗಳ ಪ್ರತಿಭಟನೆಯಲ್ಲಿ ಭಾಗಿಯಾಗಿ ತೀರ್ಥಹಳ್ಳಿ ತಾಲ್ಲೂಕು ಕಛೇರಿ ಎದುರು ಸತ್ಯಾಗ್ರಹ ಮಾಡಿ ಬಂಧನಕ್ಕೊಳಗಾಗಿದ್ದರು. ಗೋಪಾಲಗೌಡರ ನೇತೃತ್ವದಲ್ಲಿ ನಡೆದ ಭೂ ಆಕ್ರಮಣ ಚಳುವಳಿಯಲ್ಲಿ ಭಾಗವಹಿಸಿ ರಾಜ್ಯಾದ್ಯಂತ ಭೂಮಿ ಇಲ್ಲದವರು ಭೂಮಿ ಆಕ್ರಮಿಸಲು ಪ್ರಚೋದಿಸಿದರು.

೧೯೬೧ರ ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ರಾಮಪ್ಪ ಸ್ಪರ್ಧಿಸಿ ಕಾಸರವಳ್ಳಿ ಗಣೇಶ್‌ರಾವ್ ಅವರ ಎದುರು ಜಯಗಳಿಸಿದರು. ಪ್ರಭಾವಿ ಶ್ರೀಮಂತ ಬ್ರಾಹ್ಮಣರೊಬ್ಬರು ಸ್ಪರ್ಧಿಸಿದ್ದಾಗ್ಯೂ ಬ್ರಾಹ್ಮಣರೇ ರಾಮಪ್ಪನವರಿಗೆ ಹೆಚ್ಚಾಗಿ ಮತ ನೀಡಿದರು. ಇದಕ್ಕೆ ಕಾರಣ ತೀರ್ಥಮುತ್ತೂರು ಮಠ ಮತ್ತು ಅದರ ಸ್ವಾಮಿಗಳು ಎಂದು ರಾಮಪ್ಪ ಹೇಳುತ್ತಾರೆ. ಆ ಕಾಲಕ್ಕೆ ಮಠ ಸಮಾಜವಾದ ಚಳುವಳಿಯ ಕೇಂದ್ರ ಸ್ಥಳವಾಗಿತ್ತು. ಗೋಪಾಲಗೌಡರು ಮಠಕ್ಕೆ ಬಂದರೆ ರೇಷ್ಮೆ ವಸ್ತ್ರ ಹಾಸಿ ಅದರ ಮೇಲೆ ಕೂರಿಸಿ ಸ್ವಾಮಿಗಳು ಮಾತನಾಡಿಸುತ್ತಿದ್ದರಂತೆ. ಬ್ರಾಹ್ಮಣರು ಅದರಲ್ಲೂ ಪಂಚ ಗ್ರಾಮ ಸಮುದಾಯದವರು ತನು-ಮನ-ಧನಗಳಿಂದ ಸಮಾಜವಾದಿ ಪಕ್ಷವನ್ನು ಬೆಂಬಲಿಸಿದರು. ಆ ಅವಧಿಯ ತಾಲ್ಲೂಕು ಬೋರ್ಡ್ ಸದಸ್ಯರೆಲ್ಲ ಘನತೆವೆತ್ತವರೇ ಆಗಿದ್ದು,, ಪ್ರತಿಯೊಬ್ಬರೂ ತಾಲ್ಲೂಕಿನ ಅಭಿವೃದ್ಧಿ ಮಾಡಿದರು. ನಂತರದಲ್ಲಿ ರಾಮಪ್ಪ ಹೊನ್ನೇತಾಳು ಮಂಡಲ್ ಪಂಚಾಯ್ತಿಗೆ ಉಪಾಧ್ಯಕ್ಷರಾಗಿ ಗ್ರಾಮದ ಏಳ್ಗೆಗೆ ಶ್ರಮಿಸಿದರು. ಈಗಲೂ ಈ ಗ್ರಾಮದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ.

ಗಂಡುಮಕ್ಕಳಿಲ್ಲದ ರಾಮಪ್ಪನವರು ಮನೋವಿಕಲ ಕಿರಿಯ ಮಗಳು ಮತ್ತು ಮಡದಿಯೊಂದಿಗೆ ಮೂಡುಬಾಗಿಲಿನಲ್ಲಿ ವಾಸಿಸುತ್ತಿದ್ದಾರೆ. ಅವರ ಮನೆ ಎದುರಿಗೆ ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಅತ್ಯಂತ ಎತ್ತರದ ಶಿಖರವಾಗಿರುವ ಕುಂದಾದ್ರಿ ಬೆಟ್ಟ ದುತ್ತೆಂದು ಚಾಚಿಕೊಂಡಂತಿದೆ. ಪೂರ್ವದಿಕ್ಕಿನಿಂದ ಬೆಟ್ಟಕ್ಕೆ ಹೋಗುವ ಹಾದಿ ಇಲ್ಲಿಂದ ತೊಡಗುತ್ತದಂತೆ. ಆದ್ದರಿಂದಾಗಿಯೇ ಮೂಡುಬಾಗಿಲೆಂಬ ಹೆಸರು ಊರಿಗೆ ಬಂದಿದ್ದೀತು. ಕುವೆಂಪು ಕೃತಿಗಳನ್ನು ಓದಿಕೊಂಡಿರುವ ರಾಮಪ್ಪನವರು ಸುಂದರ ಪರಿಸರದಲ್ಲಿ ಪ್ರಕೃತಿಯನ್ನು ಆರಾಧಿಸುತ್ತಾ, ಇಳಿ ವಯಸ್ಸಿನಲ್ಲಿ ಗದ್ದೆ ತೋಟಗಳಲ್ಲಿ ಸ್ವತಃ ದುಡಿಯುತ್ತಾ, ಸಭ್ಯ, ಸರಳ, ಸುಸಂಸ್ಕೃತ ಜೀವನ ನಡೆಸಿದ್ದಾರೆ.

**-ಡಾ. ಜೆ. ಕೆ. ರಮೇಶ್**

# ಸಮಾಜವಾದಿ ಗೆಳೆಯ ಸುನೀಲ್‌ಗೆ ಒಂದು ವಿದಾಯ...



ಸಮಾಜವಾದಿ ಗೆಳೆಯ ಸುನೀಲ್(ಗುಪ್ತ) ಇನ್ನಿಲ್ಲ ಎಂದು ಮೊನ್ನೆ ನನ್ನ ಇನ್ನೊರ್ವ ಸಮಾಜವಾದಿ ಗೆಳೆಯ ಜಸ್ವೀರ್ ಸಿಂಗ್ ಕರೆ ಮಾಡಿ ಹೇಳಿದಾಗ ನಾನು ದಿಗ್ಭ್ರಾಂತನಾಗಿ ಹೋದೆ. ಅದೂ ಆತ ಮೆದುಳು ಸ್ರಾವಕ್ಕೆ ಈಡಾಗಿ ಕೊನೆಯುಸಿರು ಎಳೆಯ ಬೇಕಾಯಿತು ಎಂದು ಕೇಳಿದಾಗ. ಸುನೀಲ್ ನಾನು ಕಂಡ ಅತ್ಯಂತ ಸಾತ್ವಿಕ ಸಮಾಜವಾದಿ–ತನ್ನ ಗುರು ಕಿಷನ್ ಪಟ್ನಾಯಕ್‌ರಂತೆಯೇ. ಅಂತಹವನಿಗೂ, ಅದೂ ೫೪ರ ವಯಸ್ಸಿಗೇ ಮೆದುಳು ಸ್ರಾವವಾಗುತ್ತದೆಂದರೆ? ನಿಜ, ಈಗ ಸಮಾಜವಾದಿಗಳಿಗೆ ಕಷ್ಟ ಕಾಲ. ವಿಶೇಷವಾಗಿ ಬಡ ಜನರ ಮಧ್ಯೆ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸುವ ಸುನೀಲ್‌ನಂತಹ ನಿಜ ಸಮಾಜವಾದಿಗಳಿಗೆ.

೧೯೮೦ರಲ್ಲಿ ಕಿಷನ್ ಪಟ್ನಾಯಕ್‌ರ ಮುಂದಾಳತ್ವದಲ್ಲಿ ನಾವು ಕೆಲವರು ಕಟ್ಟಿ ಹೊರಟ ಸಮತಾ ಸಂಘಟನೆಯೆಂಬ ಹೊಸ ಸಮಾಜವಾದಿ ಪಕ್ಷದ ಸಂಸ್ಥಾಪನಾ ಸಮಾರಂಭಕ್ಕೆ ಬೆಂಗಳೂರಿಗೆ ಯುವ ಸಮಾಜವಾದಿಯಾಗಿ ಬಂದಾಗಿನಿಂದಲೂ ಹಲವು ಬಾರಿ ಸುನೀಲ್ ಕರ್ನಾಟಕಕ್ಕೆ ಬಂದಿದ್ದನಾದರೂ, ಇಲ್ಲಿನ ಸಮಾಜವಾದಿ ಗೆಳೆಯರ ಚಾಲೂ ಚಹರೆಗಳೊಂದಿಗೆ ಆಪ್ತವಾಗಿ ಗುರುತಿಸಿಕೊಳ್ಳಲಾರದೇ ಅವರ ಮಧ್ಯೆ ಅಪರಿಚಿತನಾಗಿ ಉಳಿದುಹೋದ. ಮಧ್ಯಪ್ರದೇಶದ ಹೊಶಂಗಾಬಾದ್ ಬಳಿಯ ಕೇಸ್ಲಾ ಪ್ರದೇಶದಲ್ಲಿ ತನ್ನ ಪತ್ನಿ ಸ್ಮಿತಾರೊಂದಿಗೆ ರೈತರು, ಮಹಿಳೆಯರು, ಆದಿವಾಸಿ ಮೀನುಗಾರರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹಲವು ಹೋರಾಟಗಳನ್ನು ನಡೆಸಿದ್ದ ಸುನೀಲ್ ಇದಕ್ಕಾಗಿ ಹಲವು ಬಾರಿ ಸೆರೆಮನೆಗೂ ಹೋಗಿ ಬಂದಿದ್ದ. ಒಮ್ಮೆ ಚುನಾವಣಾ ಕಣಕ್ಕೂ ಇಳಿದು ಸೋತಿದ್ದ.

ಸುನೀಲ್ ನನ್ನ ಗೆಳೆಯನಾದದ್ದು ೧೯೭೦–೮೦ರ ದಶಕಗಳಲ್ಲಿ ನಾನು ದೆಹಲಿಯಲ್ಲಿದ್ದಾಗ. ಆಗ ಆತ ಜವಹರಲಾಲ್ ನೆಹ್ರೂ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಸ್ನಾತಕೋತ್ತರ ಪದವಿಯ ಪ್ರತಿಭಾವಂತ ವಿದ್ಯಾರ್ಥಿ. ತುರ್ತು ಪರಿಸ್ಥಿತಿ ವೇಳೆಯಲ್ಲಿ ಕಿಷನ್ ಪಟ್ನಾಯಕ್‌ರ ಪ್ರಭಾವಕ್ಕೆ ಒಳಗಾದ ಆ ವಿಶ್ವವಿದ್ಯಾಲಯದ ಹಲವು ವಿದ್ಯಾರ್ಥಿಗಳಲ್ಲಿ ಈತನೂ ಒಬ್ಬ. ಈತ ಮತ್ತು ಈತನ ಸಮಾಜವಾದಿ ಗೆಳೆಯರೆಲ್ಲ ಸೇರಿ ಸಮಾಜವಾದಿ ಯುವಜನ ಸಭಾ ಮೂಲಕ ವಿಶ್ವವಿದ್ಯಾಲಯದ ವಿದ್ಯಾರ್ಥಿ ಚುನವಣೆಗಳಲ್ಲಿ ಅಲ್ಲಿ ಹಲವು ವರ್ಷಗಳಿಂದ ಅಜೇಯ ವೆನಿಸಿದ್ದ ಸಿಪಿಎಂ ಪಕ್ಷದ ವಿದ್ಯಾರ್ಥಿ ಶಾಖೆ ಎಸ್.ಎಫ್.ಐ.ನ್ನು ಮಣಿಸಿ ಅಧಿಕಾರ ಹಿಡಿದಿತ್ತು. ಆ ಸಂದರ್ಭದಲ್ಲಿ ನನಗೆ ಪರಿಚಯವಾದ ಸುನೀಲ್ ನಾನು ದೆಹಲಿಯಲ್ಲಿದ್ದ ನಂತರದ ಐದಾರು ವರ್ಷಗಳ ಕಾಲ ನನ್ನೊಂದಿಗೆ ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ನನ್ನ ಆಪ್ತ ಗೆಳೆಯರಲ್ಲೊಬ್ಬನಾದ. ಹಾಗೇ, ಕಿಷನ್ ಪಟ್ನಾಯಕರ ಪಟ್ಟ ಶಿಷ್ಯನಾದ. ಹಾಗಾಗಿಯೇ ಆತ ಪಂಜಾಬ್ ಮತ್ತು ಅಸ್ಸಾಂಗಳು ಕೇಂದ್ರದ ದುರಾಡಳಿತದಿಂದಾಗಿ ತೀವ್ರ ಅಶಾಂತಿಯಲ್ಲಿ ತೋಳಲಾಡುತ್ತಿದ್ದಾಗ ದೆಹಲಿಯಿಂದ ಅಲ್ಲಿಗೆ ಯುವ ಸಮಾಜವಾದಿಗಳ ಸೈಕಲ್ ಶಾಂತಿ ಯಾತ್ರೆಯನ್ನು ಆಯೋಜಿಸಿ ತನ್ನ ಸಂಘಟನಾ ಸಾಮರ್ಥ್ಯವನ್ನು ಮೆರೆದಿದ್ದ.

ತನ್ನ ಸ್ನಾತಕೋತ್ತರ ಪದವಿಯನ್ನು ಮೊದಲ ರ‍್ಯಾಂಕ್ ಗಳಿಸಿ ಮುಗಿಸಿದ ಸುನೀಲ್ ಓರ್ವ ಅಧ್ಯಾಪಕನ ಮಗನಾಗಿ ಅಂತಹ ಆರ್ಥಿಕ ಭದ್ರತೆಯಿಲ್ಲದ ಕುಟುಂಬದಿಂದ ಬಂದಿದ್ದರೂ, ಎಂದೂ ಉದ್ಯೋಗದ ಯೋಚನೆ ಮಾಡಲಿಲ್ಲ. ಆತ ನೇರವಾಗಿ ಹೋಗಿದ್ದು ತನ್ನೂರು ಹೊಶಂಗಾಬಾದ್ ಬಳಿಯ ಹಳ್ಳಿಗೆ. ಶೋಷಿತರ ಮಧ್ಯೆ ಬದುಕಿ ತನ್ನ ಸಮಾಜವಾದಿ ತತ್ವ ಮತ್ತು ಆದರ್ಶಗಳನ್ನು ಅನುಭವದ ನಿಕಷಕ್ಕೆ ಒಡ್ಡಲು. ಅಲ್ಲಿ ಕೆಲಸ ಮಾಡುತ್ತಿರುವಾಗಲೇ ಸುನೀಲ್ ತಮ್ಮ ಗುರು ಕಿಷನ್ ಪಟ್ನಾಯಕರು ನಿಧನರಾದಾಗ ಅವರು ಸಂಪಾದಿಸುತ್ತಿದ್ದ ಇಂಗ್ಲಿಷ್‌ನ 'ಸಮತಾ ಎರಾ' ಮತ್ತು ಹಿಂದಿಯ 'ಸಾಮಯಿಕ ವಾರ್ತಾ' ಪತ್ರಿಕೆಗಳ ಸಂಪಾದಕನ ಜವಾಬ್ದಾರಿಯನ್ನೂ ವಹಿಸಿಕೊಂಡ. ಅರ್ಥಶಾಸ್ತ್ರದ ವಿದ್ವಾಂಸನಾಗಿದ್ದ ಆತ ಹಲವಾರು ಹಿಂದಿ ಮತ್ತು ಇಂಗ್ಲಿಷ್ ಪತ್ರಿಕೆಗಳಿಗೆ ವಿದ್ವತ್ಪೂರ್ಣ ಲೇಖನಗಳನ್ನು ಬರೆದ. ಇತ್ತೀಚೆಗೆ ಕಿಷನ್ ಪಟ್ನಾಯಕ್ ಕಟ್ಟಿದ್ದ ಸಮಾಜವಾದಿ ಜನ ಪರಿಷದ್‌ನ ರಾಷ್ಟ್ರೀಯ ಕಾರ್ಯದರ್ಶಿಯಾಗಿ ರಾಷ್ಟ್ರವ್ಯಾಪಿ ಸಂಘಟನೆಯಲ್ಲಿ ತೊಡಗಿದ್ದ.

ಈ ಸುನೀಲ್‌ನೊಂದಿಗೆ ನನ್ನ ಸಂಬಂಧಕ್ಕೆ ಒಂದು ವಿಶೇಷ ವೈಯುಕ್ತಿಕ ನೆಲೆಯೂ ಇದೆ. ಗಂಗಾವತಿ ಬಳಿ ನವೋದಯ ಶಾಲೆಯಲ್ಲಿ ಓದುತ್ತಿದ್ದ ಇಬ್ಬರು ದಲಿತ ಬಾಲಕಿಯರು ಆ ಶಾಲೆಯ 'ಶೈಕ್ಷಣಿಕ' ವಿನಿಮಯ ಕಾರ್ಯಕ್ರಮಡಿ ಹೊಶಂಗಾಬಾದ್ ಬಳಿಯ ನವೋದಯ ಶಾಲೆಗೆ ಹೋದರು. ಅಲ್ಲಿ ಇವರಿಗೆ ಸುನೀಲ್ ಮಕ್ಕಳು ಆಪ್ತ ಸಂಗಾತಿಗಳಾದರು. ಹೀಗೇ ಗೆಳೆತನದ ಮಾತುಕತೆಯಲ್ಲಿ ಈ ದಲಿತ ಬಾಲಕಿಯರು ಕಡುಬಡತನದಿಂದಾಗಿ ಆಸಕ್ತಿಯಿದ್ದರೂ ಉನ್ನತ ಶಿಕ್ಷಣ ಪಡೆಯಲಾಗದ ತಮ್ಮ ಕಷ್ಟವನ್ನು ಹೇಳಿಕೊಂಡರು. ತಮ್ಮ ತಂದೆಗೆ ಕರ್ನಾಟಕದ ಸಂಪರ್ಕವಿದೆಯೆಂದು ಗೊತ್ತಿದ್ದ ಸುನೀಲ್‌ನ ಮಕ್ಕಳು ತಮ್ಮ ಸಂಗಾತಿಗಳಿಗೆ ಸಹಾಯ ಮಾಡಲು ತಂದೆಯನ್ನು ಕೋರಿದರು. ಸುನೀಲ್ ನನಗೂ ಸೇರಿದಂತೆ ಕರ್ನಾಟಕದ ಹಲವು ಸಮಾಜವಾದಿ ಗೆಳೆಯರಿಗೆ ಈ ಕುರಿತು ಪತ್ರ ಬರೆದ. ನನಗೆ ತಿಳಿದಂತೆ ಒಬ್ಬರೋ ಇಬ್ಬರೋ ಹಣಕಾಸಿನ ಸಹಾಯದ ವಾಗ್ದಾನ ಮಾಡಿದರು. ನಾನು, ನಮ್ಮ ಮನೆಗೇ ಆ ಬಾಲಕಿಯರನ್ನು ಕಳಿಸಬಹುದೆಂದು ಸುನೀಲ್‌ಗೆ ಹೇಳಿದೆ.

ಸುನೀಲ್ ಸೂಚನೆ ಮೇರೆಗೆ ಆ ಮಕ್ಕಳು ನಮ್ಮ ಮನೆಗೆ ಬಂದರು. ಇಬ್ಬರೂ ಪಿಯುಸಿ ಮುಗಿಸಿದ್ದರು. ಬುದ್ಧಿವಂತೆಯರು. ಹಿರಿಯಳು ಲಕ್ಷ್ಮಿ. ಅವಳು ಬಿಎಸ್ಸಿ ಸೇರಿದಳು. ಕಿರಿಯಳು ಮಂಜುಳಾ ಅವಳು ಬಿಬಿಎಂಗೆ ಸೇರಿಕೊಂಡಳು. ಲಕ್ಷ್ಮಿ ಮನೆ ಕಡೆಯ ಕಡುಬಡತನದಿಂದಾಗಿ ತನಗೆ ಬೇಗ ಉದ್ಯೋಗ ಸಿಕ್ಕರೆ ಒಳ್ಳೆಯದೆಂದು ಹೇಳಿದಾಗ ನನ್ನ ಪತ್ನಿ ಅವಳಿಗೆ ಗೆಳೆಯ ಬಿ. ಶಿವಕುಮಾರ್‌ರ ಬಳಿ ಬ್ಯಾಂಕಿಂಗ್ ಪರೀಕ್ಷೆಯ ತರಬೇತಿ ಕೊಡಿಸಿದಳು. ಅದೋ, ಲಕ್ಷ್ಮಿ ಮೊದಲ ಬಿಎಸ್ಸಿ ಮುಗಿಸುವ ಹೊತ್ತಿಗೇ ಮೊದಲ ಪ್ರಯತ್ನದಲ್ಲೇ ಲಿಖಿತ ಪರೀಕ್ಷೆ ಮತ್ತು ಸಂದರ್ಶನಗಳೆರಡರಲ್ಲೂ ಉತ್ತೀರ್ಣಳಾಗಿ ಸ್ಟೇಟ್ ಬ್ಯಾಂಕ್ ಇಂಡಿಯಾದಲ್ಲಿ ಒಳ್ಳೆಯ ಉದ್ಯೋಗ ಗಿಟ್ಟಿಸಿಯೇ ಬಿಟ್ಟಳು! ಅವಳೀಗ ನಂತರದ ಕೆಲವು ಬ್ಯಾಂಕ್ ಪರೀಕ್ಷೆಗಳನ್ನು ಪಾಸು ಮಾಡಿ ತನ್ನ ವೃತ್ತಿ ಜೀವನದ ಯಶಸ್ಸಿನ ಹಾದಿಯಲ್ಲಿದ್ದಾಳೆ. ಜೊತೆಗೆ ತನ್ನ ಪದವಿಯನ್ನೂ ಮುಗಿಸಿಕೊಂಡಿದ್ದಾಳೆ. ಇನ್ನು ಮಂಜುಳಾ ಬಿಬಿಎಂನ್ನು ಒಳ್ಳೆಯ ಶ್ರೇಣಿಯಲ್ಲೇ ಮುಗಿಸಿ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಎಂ.ಕಾಂ.ನ್ನೂ ಕಳೆದ ವರ್ಷವಷ್ಟೇ ಯಶಸ್ವಿಯಾಗಿ ಮುಗಿಸಿ ಈಗ ತನ್ನೂರಿನಲ್ಲಿಯೇ ಉಪನ್ಯಾಸಕಿಯಾಗಿದ್ದಾಳೆ. ಇವರಿಬ್ಬರೂ ಈಗಲೂ ನಮ್ಮ ಕುಟುಂಬದ ಸದಸ್ಯೆಯರಂತೆಯೇ ಇದ್ದು ನಮ್ಮಲ್ಲಿ ಧನ್ಯತೆಯ ಭಾವವನ್ನು ಮೂಡಿಸಿದ್ದಾರೆ. ಇದಕ್ಕಾಗಿ ನಾವು ಕೃತಜ್ಞರಾಗಿರಬೇಕಾದ್ದೂ ಸುನೀಲ್‌ಗೇ.

ಸಮಾಜವಾದಿಗಳೆಂದರೆ ಜನ ಸಿನಿಕತೆಯಿಂದ ನೋಡತೊಡಗಿರುವ ಈ ಕಾಲದಲ್ಲಿ ಸುನೀಲ್‌ನದು ನಾನು ಕಂಡ ಬಹು ಅಪರೂಪದ ಬದುಕು. ಅವನಗೆ ಭಾರವಾದ ಹೃದಯದಿಂದ ವಿದಾಯ ಹೇಳುತ್ತಿರುವೆ.

**–ಡಿ.ಎಸ್. ನಾಗಭೂಷಣ**

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೧೯

–ಇಂದಿರಾ ಬಿ.ಕೃಷ್ಣಪ್ಪ

## ಮನೆಯಲ್ಲೊಂದು ಸರಳ ಮದುವೆಯೂ, ವಿಜಯ ಪಾಟೀಲ ಎಂಬ ಕ್ರಾಂತಿಕಾರಯೂ...



ಸೋದರನ ಮದುವೆಯಲ್ಲಿ ಕುಟುಂಬದೊಂದಿಗೆ ಕೃಷ್ಣಪ್ಪ

**ಅ**ದುವರೆವಿಗೂ ನಮ್ಮನ್ನು ಕಾಡದ ಜಾತಿಯ ಪ್ರಶ್ನೆ ಮಕ್ಕಳನ್ನು ಶಾಲೆಗೆ ಸೇರ್ಪಡೆ ಮಾಡುವಾಗ ಎದುರಾಯಿತು. ಆದರೆ ನಮಗೆ ಅದೇನು ಬಹಳ ತಲೆಕೆಡಿಸಿಕೊಳ್ಳುವ ಪ್ರಶ್ನೆಯಾಗಲೇ ಇಲ್ಲ. ಶಾಲಾ ಪ್ರವೇಶ ಅರ್ಜಿಯಲ್ಲಿ ಜಾತಿಯ ಕಾಲಂನಲ್ಲಿ 'ಜಾತ್ಯಾತೀತರು' ಎಂದು ಬರೆದೆವು. ಕೃಷ್ಣಪ್ಪನನ್ನು ಬಲ್ಲ ಪ್ರಾಥಮಿಕ-ಮಾಧ್ಯಮಿಕ ಅಧ್ಯಾಪಕರನೇಕರು, "ಸಾರ್ ಸ್ಕಾಲರ್ ಶಿಪ್, ಬಟ್ಟೆ, ನೋಟ್ ಬುಕ್ ಎಲ್ಲಾ ಕೊಡ್ತಾರೆ ಯಾಕೆ ನೀವು ಜಾತಿ ಕಾಲಂ ಹಾಗೆ ಬರೆದಿದ್ದೀರಿ?" ಅಂತ ಪ್ರಶ್ನಿಸಲಾರಂಭಿಸಿದರು. ಆದಾಗ್ಯೂ ಮಕ್ಕಳ ಪ್ರೌಢಶಾಲಾ ವಿದ್ಯಾಭ್ಯಾಸದವರೆಗೂ ಅದೇ ರೀತಿಯನ್ನೇ ಮುಂದುವರಿಸಿದೆವು. ನಾವು ಶಾಲೆಯಲ್ಲಿ ಸಿಗುವ ಸೌಲಭ್ಯಗಳನ್ನು ತೆಗೆದುಕೊಳ್ಳದಿದ್ದರೆ, ಅದು ದುರುಪಯೋಗವಾಗುವ ಸಂಭವವೂ ಇದೆ ಎನಿಸಿತು. ಆದ್ದರಿಂದ, ಶಾಲೆಯಲ್ಲಿ ಸಿಗುವ, ಬಟ್ಟೆ, ಪುಸ್ತಕ, ಸ್ಕಾಲರ್‌ಶಿಪ್ ಹಣವನ್ನು ಇತರೆ ಹಿಂದುಳಿದ ವರ್ಗದ ಬಡಮಕ್ಕಳಿಗೆ ಕೊಡಬಹುದಲ್ಲ ಅಂತ ಯೋಚನೆಮಾಡಿದೆವು. ಅದರಂತೆ ಇವರ ಹೆಸರಲ್ಲಿ ಪಡೆದು, ಶಾಲೆಯಲ್ಲಿರುವ ಬಡಮಕ್ಕಳಿಗೆ ವಿತರಿಸಲು ಅಧ್ಯಾಪಕರಿಗೇ ವಹಿಸಿದೆವು. ಶಾಲೆಯಲ್ಲಿ ಬಡಮಕ್ಕಳ ಆಯ್ಕೆಯಾಗಲೀ, ವಿತರಣೆ ಮಾಡುವ ವಿಷಯದಲ್ಲಿ ನಾವು ತಲೆಹಾಕಲೇ ಇಲ್ಲ.

ಈ ಮಧ್ಯೆ ಹರಿಹರದಿಂದ ಕೃಷ್ಣಪ್ಪನವರ ತಂದೆಯವರು ಕಾಗದ ಬರೆದು, ಮಗ ಹರಿಹರ, ಲಕ್ಷ್ಮಮ್ಮ ಎಂಬ ಹುಡುಗಿಯನ್ನು ನೋಡಿರುವುದಾಗಿಯೂ, ಅವನ ಮದುವೆಗೆ ದಿನ ಗೊತ್ತು ಮಾಡಬೇಕೆಂದು ಕೇಳಿಕೊಂಡಿದ್ದರು. ಇದೇನು ಇದ್ದಕಿದ್ದಂತೆ ಇವನ ಮದುವೆ ಎಂದು ಕೃಷ್ಣಪ್ಪ ಊರಿಗೆ ಹೋಗಿಬಂದರು. ಊರಲ್ಲಿ ಮನೆಯ ಮುಂದೆಯೇ ಸರಳ ಮದುವೆ ಮಾಡಲು, ಹುಡುಗಿಯ ತಂದೆ-ತಾಯಿ ಹಾಗೂ ಹರಿಹರದ ಮನೆಯವರು ಬಂಧುಗಳನ್ನು ಒಪ್ಪಿಸಿ ಬಂದರು. ನಮ್ಮ ಮದುವೆಯ ನಂತರ ಕುಟುಂಬದಲ್ಲಿ ನಡೆಯುತ್ತಿದ್ದ ಮದುವೆ ಇದಾಗಿತ್ತು. ನಮ್ಮ ಮದುವೆಗಿಂತಲೂ ಮೊದಲು ಕೃಷ್ಣಪ್ಪನ ತಮ್ಮ ಶೇಖರಪ್ಪ, ಹಾಗೂ ಸಹೋದರಿ ಹಾಲಮ್ಮ ಮತ್ತು ಗಂಗಮ್ಮನವರ ಮದುವೆಗಳು ನಡೆದಿದ್ದವು. ಈಗ ನಡೆಯುವ ಮದುವೆಯನ್ನು ಸಂಪ್ರದಾಯದಂತೆ ಮಾಡಬೇಕೆಂದು ಎರಡೂ ಮನೆಯವರಿಗೆ ಇಷ್ಟವಿದ್ದರೂ ಕೃಷ್ಣಪ್ಪನವರ ಮಾತಿಗೆ ಸಮ್ಮತಿಸಿ, ಸರಳವಿವಾಹಕ್ಕೆ ಒಪ್ಪಿದ್ದರು. ಮನೆಯ ಮುಂದಿನ ಚಪ್ಪರದಲ್ಲಿ ಹೂವಿನಹಾರ ವಿನಿಮಯ, ಹಿರಿಯರು, ಬಂಧು ಬಳಗದವರು, ಸಮುದಾಯದ ಮುಂದಾಳುಗಳು ಮತ್ತು ದಸಂಸದ ಒಡನಾಡಿಗಳ ಆಶೀರ್ವಾದದೊಂದಿಗೆ ಮದುವೆ ನೆರವೇರಿತು. ಈ ಚಿಕ್ಕ-ಚೊಕ್ಕ ಸಮಾರಂಭದಲ್ಲಿ ಕೃಷ್ಣಪ್ಪ, ವಿವಾಹದ ಅರ್ಥ, ಅದ್ದೂರಿ ಹಾಗೂ ಸಂಪ್ರದಾಯದ ವಿವಾಹಗಳಿಂದಾಗುವ ತೊಂದರೆಗಳು ಮತ್ತು ಪರಿಣಾಮಗಳ ಬಗ್ಗೆ ಮಾತನಾಡಿದರು, ನಂತರ ಸರ್ ಎಂ.ವಿ. ಕಾಲೇಜಿನಲ್ಲಿ ಕೃಷ್ಣಪ್ಪನವರ ಸಹೋದ್ಯೋಗಿಯೂ, ಹೋರಾಟದ ಒಡನಾಡಿಯೂ ಆಗಿದ್ದ ಚೌಡಪ್ಪನವರು (ದಾವಣಗೆರೆಯ ಜಿಲ್ಲಾ ಕೈಗಾರಿಕಾಧಿಕಾರಿಗಳಾಗಿದ್ದರು,) ಅವರು ಸಮಾರಂಭದಲ್ಲಿ ಭಾಗವಹಿಸಿ ಸರಳ ವಿವಾಹದ ಪ್ರಾಮುಖ್ಯತೆ ಬಗ್ಗೆ ಮಾತನಾಡಿದರು. ನೋಂದಣಿ ಮದುವೆಗಳು, ಸರಳ ವಿವಾಹಗಳನ್ನು, ದಸಂಸ ಮತ್ತು ಸಮಾಜವಾದಿಗಳು ಮಾಡಿಸುತ್ತಿದ್ದ ಇದೇ ವೇಳೆಯಲ್ಲಿ ಕುವೆಂಪುರವರ ಮಂತ್ರಮಾಂಗಲ್ಯದಂಥ ವಿವಾಹಗಳು ಬಹಳವಾಗಿ ಪ್ರಚಲಿತಕ್ಕೆ ಬಂದದ್ದನ್ನು ನಾವು ಕಾಣಬಹುದು.

ಆ ದಿನಗಳಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೇಂದ್ರ ಕಛೇರಿ ಭದ್ರಾವತಿಯ ಕಾಗದನಗರದಲ್ಲಿದ್ದ ನಮ್ಮ ಮನೆಯೇ ಆಗಿತ್ತು. ಸಮಿತಿಗೆ ಬರುವ ಎಲ್ಲಾ ಕಾಗದ ಪತ್ರಗಳನ್ನೂ ನಾನು ನೋಡುತ್ತಿದ್ದೆ. ಹಾಗೆ ಬಂದ ಒಂದು ಪತ್ರದಲ್ಲಿ, ವಿಜಯ ಪಾಟೀಲ್ (ಚಂಪಾ ಅವರ ಸಹೋದರ) ಆಗಿನ ಕಂದಾಯ ಮಂತ್ರಿಗಳಾಗಿದ್ದ ಬಿ. ಬಸವಲಿಂಗಪ್ಪನವರು ಧಾರವಾಡದಲ್ಲಿ ನಡೆಸುತ್ತಿದ್ದ ಕಾಲೇಜ್ ಹಾಸ್ಟೆಲ್‌ನ ದುಸ್ಥಿತಿಯ ಬಗ್ಗೆ ಬರೆದಿದ್ದರು. ಕ.ದ.ಸಂ.ಸ. ಧಾರವಾಡ ವಿಭಾಗ ಸಂಚಾಲಕರಾಗಿ ವಿಜಯ ಪಾಟೀಲ್‌ರವರಿದ್ದರು. ಸಮಿತಿಯ ಕೆಲಸ ಕಾರ್ಯಗಳ ನಿಮಿತ್ತ ಆಗಾಗ್ಗೆ ನಮ್ಮ ಮನೆಯಲ್ಲಿ ತಂಗುತ್ತಿದ್ದರು. ಸಂಘಟನೆಗಾಗಿ ಊರೂರು ಸುತ್ತುತ್ತಿದ್ದ ಪಾಟೀಲ, ರಾತ್ರಿ ಪ್ರಯಾಣಿಸಿ, ಬೆಳಗಿನ ಜಾವಕ್ಕೆ ಬಂದು ಹಾಸಿಗೆ ಮೇಲೆ ಬಿದ್ದನೆಂದರೆ, ಆ ಮಾರಾಯ ನಾವೆಲ್ಲ ಕಚೇರಿಗೆ ಹೊರಟರೂ ಮೇಲೇಳುತ್ತಿರಲಿಲ್ಲ.

ಧಾರವಾಡದ ಹಾಸ್ಟೆಲ್ ಅವ್ಯವಸ್ಥೆಯ ಬಗ್ಗೆ ಪಾಟೀಲ್ ಬರೆದಿದ್ದ ಪತ್ರ ಓದಿದ್ದ ನಾನು, ಆ ದಿನ ಕಾಫಿ ಆದಾಕ್ಷಣ, ಎಳಿಸಿ, ಕ್ಷೇಮ ಸಮಾಚಾರ ವಿಚಾರಿಸಿ, ಹಾಸ್ಟೆಲ್ ವಿಚಾರ ಕೇಳಿದ್ದೆ. ಆತ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಸ್ಥಿತಿಗತಿಗಳ ಬಗ್ಗೆ ವಿವರಿಸುತ್ತಾ, ಮಕ್ಕಳ ಪರವಾಗಿ ವಾರ್ಡನ್ ಜೊತೆ ಚರ್ಚೆ, ನಂತರ ಮ್ಯಾನೇಜ್‌ಮೆಂಟ್ ಮುಂದೆ ಪ್ರಸ್ತಾಪಿಸಿದ್ದು, ತದನಂತರ ಮಕ್ಕಳನ್ನು ಸೇರಿಸಿಕೊಂಡು, ಇಲಾಖೆಯಲ್ಲಿ ದೂರನ್ನು ಸಲ್ಲಿಸಿದ್ದು, ಮುಂದಿನ ಹೋರಾಟದ ಬಗ್ಗೆ ಕೃಷ್ಣಪ್ಪನವರಲ್ಲಿ ಚರ್ಚಿಸಲು ಬಂದಿರುವುದಾಗಿ ತಿಳಿಸಿದ. ಧಾರವಾಡದಲ್ಲಿ ಆತನಿಗೆ 'ಹೋರಾಟ ಜೀವಿ' – ಡಾ. ಅಂಬೇಡ್ಕರ್ ಕಾಲೇಜ್ ಹಾಸ್ಟೆಲ್ ಹೋರಾಟ ಸಮಿತಿ, ಎಂದೇ ಗುರ್ತಿಸಲಾಗುತ್ತಿತ್ತು. ಹಾಗೂ ಅದರಂತೆಯೇ ಪತ್ರ ವ್ಯವಹಾರಗಳಿದ್ದವು. ನಾನು ಮಾತನಾಡುತ್ತಲೇ ಕಚೇರಿಗೆ ಸಿದ್ಧವಾಗಿ ತೆರಳಿದ್ದೆ ಸಂಜೆ ನಾನು ಕಚೇರಿಯಿಂದ ಬರುವುದರೊಳಗೆ ವಿಜಯ ಪಾಟೀಲ್ ಹಾಗೂ ಕೃಷ್ಣಪ್ಪ ಧಾರವಾಡಕ್ಕೆ ಹೊರಟೇಬಿಟ್ಟರು.

ಅಲ್ಲಿಂದ ವಾಪಸಾದ ಕೃಷ್ಣಪ್ಪ, ಡಾ. ಅಂಬೇಡ್ಕರ್ ಹಾಸ್ಟೆಲ್ ಸ್ಥಿತಿಗತಿ ಕುರಿತು ' ಬಿ. ಬಸವಲಿಂಗಪ್ಪನವರಿಗೆ ಪತ್ರ ಬರೆಯುತ್ತಾ – 'ವಿದ್ಯಾರ್ಥಿಯೊಬ್ಬನಿಗೆ ತಿಂಗಳೊಂದಕ್ಕೆ ಕೊಡುವ ರೂ. ೧೨೦/-ಗಳಲ್ಲಿ ಕೇವಲ ರೂ ೪೦/-ನ್ನು ಮಾತ್ರ ಬಳಸಿ, ಒಟ್ಟಾರೆ ಇರುವ ೧೭೫ ವಿದ್ಯಾರ್ಥಿಗಳ ಒಂದು ತಿಂಗಳ ಒಟ್ಟು ಹಣ ರೂ. ೬೦೦೦೦/ – ಗಳನ್ನು ಅಲ್ಲಿನ ಮ್ಯಾನೇಜ್‌ಮೆಂಟ್ ಕಬಳಿಸುತ್ತಿದೆ. ಇದನ್ನು ಬಹಳ ವರ್ಷಗಳಿಂದ ಮಾಡುತ್ತಾ ಬಂದಿದೆ. ವಿದ್ಯಾರ್ಥಿಗಳನ್ನು ಬಿಲದಲ್ಲಿರುವ ಇಲಿಯಂತೆ ನೋಡಿಕೊಳ್ಳಲಾಗುತ್ತಿದೆ, ತಳ ಸಮುದಾಯದ ಮಕ್ಕಳ ಉದ್ಧಾರದ ಹೆಸರಲ್ಲಿ ಶೋಷಣೆ ಮಾಡಲಾಗುತ್ತಿದೆ, ವಿದ್ಯಾರ್ಥಿಗಳು ಒಳ್ಳೆಯ ಊಟ ಕೇಳಿದರೆ ವಾರ್ಡನ್ ದೊಡ್ಡಮನಿ, ಗುಮಾಸ್ತ ಚೆಲುವಾದಿ, ಇಬ್ಬರು ಸೇರಿ ಮಕ್ಕಳಿಗೆ ಕೊಲೆ ಬೆದರಿಕೆ ಹಾಕಿದ್ದಾರೆ. ಇಂಥಹವರ

ಕೈಲಿ ಈ ಹಾಸ್ಟೆಲ್ ನಡೆಯುತ್ತಿದೆ. ಆದ್ದರಿಂದ ಈ ಹಾಸ್ಟೆಲ್ ಮ್ಯಾನೇಜ್‌ಮೆಂಟನ್ನು ಬದಲಿಸಿ, ಹಾಸ್ಟೆಲ್ ಸುಧಾರಣೆ ಮಾಡಿಸಿರಿ, ಇಲ್ಲವಾದಲ್ಲಿ ತಕ್ಷಣ ಹಾಸ್ಟೆಲ್‌ನ್ನು ಸರ್ಕಾರಕ್ಕೆ ಒಪ್ಪಿಸಿರಿ. ಒಂದು ವಾರದೊಳಗೆ ಕ್ರಮಕೈಗೊಳ್ಳದಿದ್ದಲ್ಲಿ ನಮ್ಮ ಬೇಡಿಕೆಗಾಗಿ ನಮ್ಮ ಹೋರಾಟ ನಿಶ್ಚಿತ; ಅನ್ಯಮಾರ್ಗವಿಲ್ಲ' ಎಂದು ತಿಳಿಸಿದರು. ಮತ್ತು ಈ ಪತ್ರವನ್ನು ಸರ್ಕಾರಕ್ಕೂ ಕಳುಹಿಸಿದರು.

ಇದರ ಫಲಶ್ರುತಿಯಾಗಿ ಕಂದಾಯ ಮಂತ್ರಿಗಳು ಹಾಸ್ಟೆಲ್‌ನ್ನು ಸರ್ಕಾರಕ್ಕೆ ಒಪ್ಪಿಸಿದರು. ನಂತರ ವಿಜಯ ಪಾಟೀಲ್ ನೇತೃತ್ವದಲ್ಲಿ ಹಾಸ್ಟೆಲ್ ಪ್ರಾರಂಭವಾಯಿತು. ಹಾಸ್ಟೆಲ್ ಉಸ್ತುವಾರಿ ಕಾರಣದಿಂದ ಕೃಷ್ಣಪ್ಪನವರ ಧಾರವಾಡದ ಪ್ರಯಾಣಗಳು ಹೆಚ್ಚಾದವು. ಹಾಸ್ಟೆಲ್ ನಡೆಸುವುದೇನು ಸುಲಭದ ಕೆಲಸವೇ? ಸಕಾಲಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗದೆ, ಕೈಯಿಂದ ಹಣ ಹಾಕಿ ಹಾಸ್ಟೆಲ್ ನಡೆಸಬೇಕಾಗುತ್ತಿತ್ತು. ಇದೇ ಮಾದರಿಯಲ್ಲಿ ಶಿವಮೊಗ್ಗದಲ್ಲೂ ಒಂದು ಕಾಲೇಜ್ ಹಾಸ್ಟೆಲ್ ನಿರ್ವಹಣೆಯನ್ನು ಕ.ದಸಂಸ ವಹಿಸಿಕೊಂಡಿತು. ಇವೆರಡರ ಆರ್ಥಿಕ ಹೊರೆ ನನ್ನ ಮೇಲೂ ಬಿದ್ದಿತ್ತು. ಮನೆ ನಿರ್ವಹಣೆಗಾಗಿ ಇಟ್ಟಿದ್ದ ಹಣ ಕಾಣದಂತೆ ಮಾಯವಾಗಿ ಬಿಡುತ್ತಿತ್ತು. ಸರ್ಕಾರದಿಂದ ಅನುದಾನ ಬಿಡುಗಡೆಯಾದಾಗ ಹಣ ಪಡೆಯಬೇಕಾಗುತ್ತಿತ್ತು. ಆದರೆ ನನ್ನ ಹಣ ಮಾತ್ರ ನನ್ನ ಪರ್ಸಿಗೆ ವಾಪಸಾಗುತ್ತಿರಲಿಲ್ಲ! ಚಳುವಳಿಯ ಭಾಗವಾಗಿ ಕೈಗೆತ್ತಿಕೊಂಡ ಈ ಜವಾಬ್ದಾರಿ ದಸಂಸಗೆ ಆರ್ಥಿಕ ಸಂಕಷ್ಟವನ್ನೊಡ್ಡಿತ್ತು. ಒಂದೆರಡು ವರ್ಷಗಳ ಕಾಲ ಹಾಗೂ ಹೀಗೂ ಹಾಸ್ಟೆಲ್ ನಡೆಸಿ, ಪುನಃ ಹಾಸ್ಟೆಲನ್ನು ಸರ್ಕಾರಕ್ಕೆ ವಹಿಸಿಬಿಟ್ಟರು.

ವಿಜಯ ಪಾಟೀಲ್ ಆಗ ಯುವ ಕವಿ, ಅನೇಕ ಕವನಗಳು ಪತ್ರಿಕೆಯಲ್ಲಿ ಪ್ರಕಟಗೊಂಡು, ಆತನಿಗೆ ಹೆಸರು ತಂದುಕೊಟ್ಟಿದ್ದವು. ಮತ್ತು ಆತ ಬಂಡಾಯ ಸಾಹಿತ್ಯ ಕವಿಗೋಷ್ಠಿಯಲ್ಲೂ ಭಾಗವಹಿಸ ತೊಡಗಿದ್ದ. ಅಂತರರಾಷ್ಟ್ರೀಯವಾಗಿ ಹೆಸರು ಮಾಡಿದ್ದ ಅಬ್ರಹಾಂ ಕೊವ್ರೋರ್‌ರವರು ಕರ್ನಾಟಕಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ದಸಂಸದ ಕಾರ್ಯಕ್ರವದಲ್ಲಿ ವಿಜಯ ಪಾಟೀಲ ತಾನು ಪ್ರೀತಿಸಿದ ದೇವಿಕಾಳನ್ನು ಸರಳವಾಗಿ ವಿವಾಹವಾದನು. ಅಂತರ್ಜಾತೀಯ ವಿವಾಹಿತರಾದವರಿಗೆ, ದುಡಿಮೆ ಇಲ್ಲದ ಬದುಕು ಬಲು ದುಸ್ತರವಾಗುತ್ತದೆ. ಆಕೆ ಅಧ್ಯಾಪಕಿಯಾಗಿದ್ದರಿಂದ ಮನೆ ನಡೆಯುತ್ತಿತ್ತು. ನನ್ನ ಒತ್ತಾಯದ ಮೇರೆಗೆ ಆಕೆಯನ್ನು ನಮ್ಮ ಮನೆಗೆ ಕರೆತಂದಿದ್ದ. ಮನೆಯಲ್ಲಿ ಏನೂ ಇಲ್ಲದ ಸ್ಥಿತಿಯನ್ನು ಕಣ್ಣೀರು ಹರಿಸುತ್ತ ಆಕೆ ಹೇಳಿಕೊಂಡಿದ್ದಳು. ನನ್ನನ್ನು 'ಅಕ್ಕಾ' ಎಂದೇ ಕರೆಯುತ್ತಿದ್ದ ಪಾಟೀಲ, ದೇವಿಕಾ ಬಸುರಿಯಾಗಿದ್ದನ್ನು ಸಂತಸದಿಂದ ಹೇಳಿಕೊಂಡಿದ್ದ, ಬಿಎಸ್ಸಿ.–ವ್ಯವಸಾಯದಲ್ಲಿ ಪದವಿ ಪಡೆದಿದ್ದ ಆತ ಸರ್ಕಾರದಿಂದ ಬಂದ ಕೆಲಸದ ಆದೇಶವನ್ನು ಬದಿಗೊತ್ತಿ ಸಂಘಟನೆಯಲ್ಲೇ ತೊಡಗಿದ್ದ.

ಹೀಗೆ ಸಂಘಟನೆಯನ್ನೇ ಉಸಿರಾಗಿಸಿಕೊಂಡಿದ್ದ ವಿಜಯ ಪಾಟೀಲ ದಸಂಸದ ಮುಂಚೂಣಿ ಕಾರ್ಯಕರ್ತನಾಗಿದ್ದವನು ಕೆಲ ಕಾಲಾನಂತರ ಸಂಘಟನೆಗೆ ಬೆನ್ನು ತೋರಿಸಿ, ಹಾವೇರಿ ಜಿಲ್ಲೆಂಯು ದೊಂಬರಮತ್ತೂರಿನಲ್ಲಿ ಮಣ್ಣಿನ ಮಗನಾಗಿ ತೆರಳಿದ ಪರಿಯ ಹಿಂದಿನ ಸತ್ಯಕಥೆಯನ್ನು ತಿಳಿಯುವ ಪ್ರಯತ್ನದಲ್ಲಿದ್ದೇನೆ. ಸಣಕಲು ನಿಲುವು, ಸಡಿಲವಾದ ಪ್ಯಾಂಟು–ಶರಟು, ಹೆಗಲಿಗೊಂದು ಹೋರಾಟದ ಸರಕುಗಳ ಪಾಟೀ ಚೀಲ, ಕೈಲೊಂದು ನೋಟ್‌ಬುಕ್, ಪೆನ್ನು, ಉದ್ದನೆಯ ಗಡ್ಡ, ಕ್ರಾಪ್ ಮಾಡಿಸದ ತಲೆಗೂದಲಿನ, ಹೊಳೆವ ಕಣ್ಗಳ ಸಹೋದರ, 'ಅಕ್ಕ' ಎಂದು ಕರೆಯುತ್ತಿದ್ದ ದನಿ, ನನ್ನ ಮನದಾಳದಲ್ಲಿ ಮಡುಗಟ್ಟಿ ನಿಂತಿದೆ. **(ಮುಂದುವರೆಯುವುದು)**

---

## ನಿಮ್ಮ ಪತ್ರ

**ಪ್ರಿಯ** ಸಂಪಾದಕರೇ,

ಆಂ ಆದ್ಮಿ ಪಕ್ಷದ ಸಂಘಟನೆ ಮತ್ತು ರಾಜಕಾರಣದ ಪರಿ ಕುರಿತ ನಿಮ್ಮ ವಿಶ್ಲೇಷಣೆ ಸರಿಯಾಗಿದೆ. ಇಂದು ರಾಕಾರಣದ ಬಗ್ಗೆ ತಾತ್ವಿಕ ನೆಲೆಯಿಂದ ಬರೆಯುತ್ತಿರುವವರು ನೀವೊಬ್ಬರೇ ಎಂದು ಕಾಣುತ್ತದೆ. ಉತ್ತಮ ಸಂಚಿಕೆಗಾಗಿ ನಮಗೆ ಅಭಿನಂದನೆಗಳು.

**–ಚಂದ್ರಶೇಖರ ಪಾಟೀಲ**, ಬೆಂಗಳೂರು

'ಹೊಸ ಮನುಷ್ಯ'ದ ಮೇ ಸಂಚಿಕೆ ಅನೇಕ ಕಾರಣಗಳಿಗಾಗಿ ಇಷ್ಟವಾಯಿತು. ಈ ಬಾರಿಯ ಸಂಚಿಕೆಯಲ್ಲಿ ಉಳಿದ ಲೇಖನಗಳದ್ದೇ ಒಂದು ತೂಕವಾದರೆ ನಿಮ್ಮ ಸಂಪಾದಕೀಯದ್ದೇ ಒಂದು ತೂಕವಾಗಿತ್ತು. ಅಂಬೇಡ್ಕರ್ ಕುರಿತ ಲೇಖನ ಆಧುನಿಕ ಕಾಲದ ಅನೇಕ ಸಂಕೀರ್ಣ ಸಿಕ್ಕುಗಳ ನಡುವೆ ಹೊಸ ಅಂಬೇಡ್ಕರ್‌ರವರನ್ನು ಹೇಗೆ ಸೃಷ್ಟಿಸಬೇಕು ಮತ್ತು ದಕ್ಕಿಸಿಕೊಳ್ಳಬೇಕು ಎನ್ನುವುದನ್ನು ಹೇಳುವಂತಿತ್ತು. ಅಂಬೇಡ್ಕರ್ 'ಓದು' ಬೇಡವಾಗದೆ ಅಂಬೇಡ್ಕರ್ 'ಲಾಭ' ಮಾತ್ರ ಪಡೆದುಕೊಳ್ಳುವವರು ಇದನ್ನು ಮತ್ತೆ ಮತ್ತೆ ಮನನ ಮಾಡಿಕೊಳ್ಳಬೇಕಾಗಿದೆ.

ಪ್ರೊ. ಚೆನ್ನಿಯವರ ಪುಸ್ತಕಾವಲೋಕನವನ್ನೂ ಮತ್ತು ನಮ್ಮ ಸಂಪಾದಕೀಯವನ್ನೂ ಜೊತೆಗಿಟ್ಟುಕೊಂಡೇ ಓದಿದೆ. ಯಾಕೆಂದರೆ ಚೆನ್ನಿಯವರು ಇಲ್ಲಿ ಲೋಹಿಯಾರ ಮಾತುಗಳನ್ನು ಉಲ್ಲೇಖಿಸುತ್ತಾ ಕಳೆದ ೧೫೦೦ ವರ್ಷಗಳಿಂದ ಭಾರತದಲ್ಲಿ ಒಂದು ಸಾಂಘಿಕವಾದ ಕ್ರಾಂತಿ ನಡೆದಿಲ್ಲರುವುದನ್ನು ನೆನಪಿಸುತ್ತಾರೆ ಮತ್ತು ಇಲ್ಲಿನ ವೈಚಾರಿಕತೆಯು ಅಮೂರ್ತಗಳ ಹಂಬಲದಿಂದಾಗಿ ನಿರ್ವೀರ್ಯವಾಗಿದೆ ಎನ್ನುತ್ತಾರೆ. ಇದು ನಿಜವಾಗಿರುವುದರಿಂದಲೇ ನೀವು 'ಆಪ್' ಬಗ್ಗೆ ಬರೆಯುತ್ತಾ ಅವರ ಸೈದ್ಧಾಂತಿಕ 'ಉದ್ಧಟತನ'/'ಮುಗ್ಧತನ'ದ ಬಗ್ಗೆ ಪ್ರಸ್ತಾಪಿಸುತ್ತೀರಿ.

ಕೇಜ್ರಿವಾಲರಲ್ಲಿ ಯೋಗೇಂದ್ರ ಯಾದವ್‌ರಂಥವರು ಹತ್ತಿರವಿದ್ದೂ ಓರ್ವ ರಾಜಕೀಯ ತತ್ತ್ವಚಿಂತಕನ ದಾರ್ಶನಿಕತೆ ಕಂಡು ಬರುವುದಿಲ್ಲ. ಅದು ಬರುವವರೆಗೆ ಆತ ಈ ದೇಶಕ್ಕೆ ಸಮರ್ಥ ನಾಯಕತ್ವ ಕೊಡಲಾರ. ಈ ಪತ್ರ ಪ್ರಕಟಗೊಳ್ಳುವ ವೇಳೆಗೆ ಇಂಡಿಯಾಕ್ಕೊಬ್ಬ 'ಬಾಸ್' ಸಿಕ್ಕಿರಬಹುದು. ಆತ ನಮ್ಮ ನಾಳೆಗಳ 'ಬಿಗ್ ಾಸ್'ಆಗಿರಲೂಬಹುದು. ಆದರೆ ಇಂಡಿಂಯಾಕ್ಕೊಬ್ಬ 'ನಾಂಯುಕ' ಸಿಗುತ್ತಾನೆಂಯೇ..? ನಾಳೆಯಾದರೂ... ಎಂಬುದು ಪ್ರಶ್ನೆ.

**–ನಿತ್ಯಾನಂದ ಬಿ ಶೆಟ್ಟಿ**, ತುಮಕೂರು.

ಲಂಕೇಶರ ನಂತರ ಕಂಡುಬರುತ್ತಿದ್ದ ರಾಜಕೀಂಯು ನಡಾವಳಿಯನ್ನು ಕುರಿತ ನಿಷ್ಠುರ ವಿಶ್ಲೇಷಣೆಯ ಕೊರತೆಯನ್ನು 'ಹೊಸ ಮನುಷ್ಯ' ತುಂಬುವ ಪ್ರಯತ್ನ ಮಾಡುತ್ತಿದೆ. ಲಂಕೇಶರಿಂದ ಟೀಕಿಸಿಕೊಂಡ ವ್ಯಕ್ತಿ ಅಥವಾ ಪಕ್ಷಕ್ಕೆ ಲಂಕೇಶರು ಒಂದು ಪರ್ಯಾಯ ದಾರಿಯನ್ನೂ ಸೂಚಿಸುತ್ತಾ ತಮ್ಮ ಟೀಕೆಗಳಿಗೆ ತಾಯ್ತನದ ಸ್ಪರ್ಶವನ್ನೂ ನೀಡುತ್ತಿದ್ದರು. ನಿಮಗೂ ಆ ಶಕ್ತಿಯಿದ್ದು, ಅದು ನಿಮ್ಮ ಬರಹಗಳಲ್ಲಿ ಕಾಣಬೇಕೆಂಬುದು ನನ್ನ ಅಪೇಕ್ಷೆ. ಸಮಾಜದ ಬಗ್ಗೆ ಸ್ಪಷ್ಟ ಮಾನವೀಯ ಕಳಕಳಿಯಿರುವ ತಮ್ಮ ಈ ಪ್ರಯತ್ನವನ್ನುನಾನು ಗೌರವಿಸುತ್ತೇನೆ.

ಇಂದಿರಾ ಬಿ. ಕೃಷ್ಣಪ್ಪ ಅವರ ಬರಹ ಆಪ್ತವೆನಸಿತು.

**–ಕಲೀಂ ಉಲ್ಲಾ,** ಶಿವಮೊಗ್ಗ

ಆಂ ಆದ್ಮಿ ಪಾರ್ಟಿ, ಲೋಹಿಯಾರನ್ನು ನೆನಪಿಸಿಕೊಳ್ಳುತ್ತಾ ಸಂಪಾದಕೀಯದಲ್ಲಿ ಬರೆದ ವಿಷಯಗಳು ತುಂಬ ಇಷ್ಟವಾದವು. ನಾನು ದೆಹಲಿವಾಸಿಯಾಗಿ ಕೇಜ್ರಿವಾಲಾರ ನಿಲುವು ಧೋರಣೆಗಳನ್ನು ಇಷ್ಟಪಡುತ್ತಲೇ, ಕೊನೆಕೊನೆಗೆ ಎಲ್ಲವೂ ತೀರಾ ಬಾಲಿಶ, ಅವಸರದ ನಿರ್ಣಯಗಳು, ನನಸಾಗಲಾರದ ಕನಸುಗಳು ಎನಿಸತೊಡಗಿದವು.

ಇದಲ್ಲದೆ ಪತ್ರಿಕೆ ಅನೇಕ ವಿಚಾರಗಳನ್ನು ಚಿಂತಿಸಲು ಪ್ರೇರೇಪಿಸುವಂತಿದೆ. ಓದುಗರಲ್ಲಿ ಒಬ್ಬ ಹೊಸ ಮನುಷ್ಯ ಮತ್ತು ಆ ಮೂಲಕ ಹೊಸ ಸಮಾಜವನ್ನು ಸೃಷ್ಟಿಸುವತ್ತ ಬೆಳೆಯಲಿ.

**–ರೇಣುಕಾ ನಡಗುಂದಿ,** ಹೊಸ ದೆಹಲಿ

**ಹಿರಿಯ ಸಮಾಜವಾದಿ ಅಮ್ಮೆಂಬಳ ಬಾಳಪ್ಪ ಮತ್ತು ದಲಿತ ಚಳುವಳಿಯ ನಾಯಕ ಚೇಳೂರು ವೆಂಕಟೇಶ್ ಅವರ ನಿಧನಕ್ಕೆ ಪತ್ರಿಕೆ ತನ್ನ ಸಂತಾಪಗಳನ್ನು ಸೂಚಿಸುತ್ತದೆ**–ಸಂ

## ಶಿಕ್ಷಣದ ಮಾಧ್ಯಮದ ಪ್ರಶ್ನೆ:

# ಬದಲಾಗಬೇಕಾದ ಹೋರಾಟದ ಗುರಿ ಮತ್ತು ಮಾರ್ಗ

–ಡಿ.ಎಸ್. ನಾಗಭೂಷಣ

ಇಪ್ಪತ್ತು ವರ್ಷಗಳ ಕಾನೂನು ಹೋರಾಟದ ನಂತರ ಕನ್ನಡ ಶಿಕ್ಷಣದ ಪ್ರಶ್ನೆ ಎಲ್ಲಿತ್ತೋ ಅಲ್ಲಿಗೇ ಬಂದು ನಿಂತಿದೆ. ಈ ಹೋರಾಟದ ಅನುಭವ ನಮಗೆ–ಕನ್ನಡ ಒಂದು ಭಾವನಾತ್ಮಕ ವಿಷಯವಾಗಿ ಅಲ್ಲ, ನಮ್ಮ ವ್ಯಕ್ತಿತ್ವದ ನಿಜತ್ವದ ಪ್ರಶ್ನೆಯಾಗಿದೆ ಎಂಬ ಅರಿವಿರುವವರಿಗೆ–ಒಂದು ಅಂಶ ಮನದಟ್ಟಾಗಿರಲೇಬೇಕು. ಅದೆಂದರೆ, ಸದ್ಯದ ಸಂವಿಧಾನದ ಚೌಕಟ್ಟಿನಲ್ಲಿ ಕನ್ನಡದ ಪ್ರಾಥಮಿಕತೆಯನ್ನು ಕರ್ನಾಟಕದಲ್ಲಿಯಾದರೂ ಕಾಪಾಡುವುದು ಕಷ್ಟ. ಕಾರಣ, ಸಂವಿಧಾನ ಕಟ್ಟಿರುವ 'ರಾಷ್ಟ ಪ್ರಭುತ್ವ'ದ ಕಲ್ಪನೆಯಲ್ಲಿ ಜನರ ಭಾಷೆ ಎಂಬುದಕ್ಕೆ ಮೊದಲ ಮಹತ್ವವೇನಿಲ್ಲ. ಈ ರಾಷ್ಟ್ರ ಪ್ರಭುತ್ವ ಜನ ಕಲ್ಯಾಣಕ್ಕಾಗಿ ಆಯ್ದುಕೊಂಡಿರುವ 'ಅಭಿವೃದ್ಧಿ'ಯ ದಿಕ್ಕು ಮತ್ತು ಗುಣಾತ್ಮಕತೆ ಮತ್ತು ಅದನ್ನು ಸಾಧಿಸಲು ರೂಪಿಸಿಕೊಂಡಿರುವ ನಮ್ಮ ಶಿಕ್ಷಣಕ್ರಮ ಸಹಜವಾಗಿ ಇಂಗ್ಲೀಷನ್ನೇ ಆದರಿಸುವಂತಹದು. ಅಲ್ಲಿ ಜನಭಾಷೆಗಳಿಗೆ ಔಪಚಾರಿಕ ಸ್ಥಾನಮಾನಗಳ ಹೊರತಾಗಿ ಬೇರೆ ಸ್ಥಾನವಿರಲು ಸಾಧ್ಯವಿಲ್ಲ. ಇದು ಸ್ಪಷ್ಟವಾದಾಗ ಕನ್ನಡವನ್ನು ಉಳಿಸಿ ಬೆಳೆಸುವ ನಮ್ಮ ಕಾರ್ಯಕ್ರಮದ ಸ್ವರೂಪವೇ ಬೇರೆಯಾಗಬೇಕಾಗುತ್ತದೆ. ಅದಕ್ಕೆ ಕನ್ನಡ ಜನತೆ ಸಿದ್ಧವಿದೆಯೇ?–ಸಂ.

**ಕ**ರ್ನಾಟಕದ ಎಲ್ಲ ಶಾಲೆಗಳಲ್ಲಿ ಒಂದರಿಂದ ನಾಲ್ಕನೆಯ ತರಗತಿಯರೆಗೆ ಶಿಕ್ಷಣ ಮಾಧ್ಯಮ ಮಕ್ಕಳ ಮಾತೃಭಾಷೆಯಲ್ಲಿರಬೇಕು ಅಥವಾ ಕನ್ನಡದಲ್ಲಿರಬೇಕು ಎಂಬ ೧೯೯೪ರ ಕರ್ನಾಟಕ ಸರ್ಕಾರದ ಆದೇಶ ಸಂವಿಧಾನಬದ್ಧವಾಗಿಲ್ಲವೆಂದು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಈಗ ತೀರ್ಪಿತ್ತಿದೆ. ಈ ದೇಶದ ಮಕ್ಕಳು ಯಾವ ಭಾಷೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣ ಪಡೆಯಬೇಕೇಂಬುದನ್ನು ಕುರಿತ ವಿವಾದವನ್ನು ಬಗೆಹರಿಸಲು ಇಂದಿನ ನಮ್ಮ ರಾಷ್ಟ್ರ ವ್ಯವಸ್ಥೆಯಲ್ಲಿ ೨೦ ವರ್ಷಗಳು ಬೇಕು ಎಂಬುದೇ ಪ್ರಾಥಮಿಕ ಶಿಕ್ಷಣ ಕುರಿತ ಈ ವ್ಯವಸ್ಥೆಯ ಕಾಳಜಿಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ.

ಅದೇ ಹೊತ್ತಿನಲ್ಲಿ, ಈ ಇಪ್ಪತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಮಾತೃಭಾಷೆಯ ಅಥವಾ ಕನ್ನಡ ಮಾಧ್ಯಮದ ಶಾಲೆಗಳು ವರ್ಷ ವರ್ಷವೂ ಮುಚ್ಚುತ್ತಿರುವ ಅಥವಾ ಅವುಗಳಲ್ಲಿ ಮಕ್ಕಳ ಸಂಖ್ಯೆ ಒಂದಂಕಿ–ಎರಡಂಕಿಗಳಿಗೆ ಇಳಿಯುತ್ತಿದೆ ಎಂಬ ವಾಸ್ತವ ನಮ್ಮ ಎದುರಿಗಿದೆ. ಇಂತಹ ವಾಸ್ತವದ ಮಧ್ಯೆಯೂ, ಇದಕ್ಕೆ ಕಾರಣರಾಗಿರುವ ನಮ್ಮ ಪೋಷಕರು, ಸಾಹಿತಿಗಳು ಮತ್ತು ರಾಜಕಾರಣಿಗಳೂ ಸೇರಿದಂತೆ ಕನ್ನಡಿಗರು ಈ ತೀರ್ಪಿನ ಬಗ್ಗೆ ಎಬ್ಬಿಸುತ್ತಿರುವ ಹಾಹಾಕಾರ ನೋಡಿದರೆ ನಗಬೇಕೋ ಅಳಬೇಕೋ ತಿಳಿಯದಾಗಿದೆ. ಈ ಎಲ್ಲರೂ, ತಮಗೆ ಆ ನೈತಿಕತೆ ಇದೆಯೋ ಇಲ್ಲವೋ ಎಂಬುದನ್ನೂ ಲೆಕ್ಕಿಸದೆ ತಲೆಗೊಂದರಂತೆ ಸಲಹೆ ನೀಡುತ್ತಿದ್ದಾರೆ. ಏಕೆಂದರೆ ಇಪ್ಪತ್ತು ವರ್ಷಗಳ ಕಾನೂನು ಹೋರಾಟದ ನಂತರವೂ–ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಎರಡು ಬಾರಿ ರಾಜ್ಯ ಸರ್ಕಾರದ ಹಿರಿಯ ಮತ್ತು ನುರಿತ ವಕೀಲರ ವಾದ ಮಂಡನೆಗಳ ನಂತರವೂ–ಇಂತಹ ತೀರ್ಪೇಕೆ ಬಂದಿದೆ ಎಂದು ಇವರು ಯೋಚಿಸಿದಂತಿಲ್ಲ. ಕಾನೂನಿನ ಮುಂದೆ ಭಾವನಾತ್ಮಕ ವಿಚಾರ–ಪ್ರತಾಪಗಳ ಆಟ ನಡೆಯುವುದಿಲ್ಲ ಎಂಬುದು ನಮಗೆಲ್ಲ ಇಷ್ಟು ಹೊತ್ತಿಗೆ ಗೊತ್ತಾಗಬೇಕಿತ್ತು. ಅದೇನೇ ಇರಲಿ, ಸರ್ಕಾರ ಮತ್ತೊಂದು ಸುತ್ತಿನ ಸಮಾಲೋಚನಾ ಸಭೆ ಕರೆಯುವುದಾಗಿ ಹೇಳಿರುವುದರಿಂದ ಸದರಿ ತೀರ್ಪಿನ ಹಿನ್ನೆಲೆಯಲ್ಲಿ ಈಗ ಸಾರ್ವಜನಿಕವಾಗಿ ಕೇಳಿ ಬರುತ್ತಿರುವ ಸಲಹೆಗಳನ್ನು ಗಮನಿಸೋಣ. ಈ ಸಲಹೆಗಳಲ್ಲಿ ಮುಖ್ಯವಾದುವೆಂದರೆ:

೧. ಪ್ರಾಥಮಿಕ ಶಾಲಾ ಶಿಕ್ಷಣವನ್ನು ರಾಷ್ಟ್ರೀಕರಿಸುವುದು.
೨. ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸುವುದು.
೩. ತೀರ್ಪಿನ ವಿರುದ್ಧ ಪುನರ್‌ಪರಿಶೀಲನಾ ಅರ್ಜಿ ಸಲ್ಲಿಸುವುದು.

ಇವುಗಳಲ್ಲಿ ಮೊದಲ ಸಲಹೆ ಎಷ್ಟು ವ್ಯಾವಹಾರಿಕ ಎಂದು ನೋಡೋಣ. ಮೊದಲಾಗಿ ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ? ಸಾರಿಗೆಯನ್ನೋ, ಮತ್ತೊಂದು ಉದ್ಯಮವನ್ನೋ ರಾಷ್ಟ್ರೀಕರಿಸಿದಂತೆ ಶಿಕ್ಷಣವನ್ನು ರಾಷ್ಟ್ರೀಕರಿಸಲು ನಮ್ಮ ಸಂವಿಧಾನದಲ್ಲಿ ಏನೂ ಅಡ್ಡಿಗಳಲಿಲ್ಲವೇ? ಸದರಿ ತೀರ್ಪು ಬರಲು ಯಾವ ಯಾವ



ಸಾಂವಿಧಾನಕ ಅಂಶಗಳು ಕಾರಣವಾಗಿವೆಯೋ ಅವು ಇದಕ್ಕೂ ಅಡ್ಡಿಯಾಬಲ್ಲವೇ ಎಂಬುದನ್ನು ವಿವರವಾಗಿ ಪರಿಶೀಲಿಸಬೇಕು. ಇಲ್ಲದೇ ಹೋದರೆ ಮತ್ತೆ ಕನಿಷ್ಟ ೨೦ ವರ್ಷಗಳು ನ್ಯಾಯಾಲಯಗಳೊಂದಿಗೆ ವ್ಯರ್ಥ ಕಾಲಹರಣ ಮಾಡಬೇಕಾದೀತು! ಈ ಸಂಬಂಧ ಏನೂ ಅಡ್ಡಿಗಳಿಲ್ಲವೆಂದು ಗೊತ್ತಾದ ಮೇಲೂ, ಈ ಸಲಹೆಯನ್ನು ಅನುಮಾನದಿಂದ ನೋಡಲು ಹಲವು ಕಾರಣಗಳಿವೆ. ಒಂದು: ಇದಕ್ಕೆ ಅಗತ್ಯವಾದ ಸಂಪನ್ಮೂಲ ಹೂಡುವ ಸ್ಥಿತಿಯಲ್ಲಿ ರಾಜ್ಯ ಸರ್ಕಾರವಿದೆಯೇ? ಎರಡು: ಇಂದು ಶಿಕ್ಷಣ ಯಾಕೆ ಒಂದು ದಂಧೆಯಾಗಿದೆ ಮತ್ತು ಆ ದಂಧೆಯನ್ನು ಯಾರು ನಡೆಸುತ್ತಿದ್ದಾರೆ ಎಂಬ ಸಂಗತಿಯ ಹಿನ್ನೆಲೆಯಲ್ಲಿ, ಇದಕ್ಕೆ ಅಗತ್ಯವಾದ ರಾಜಕೀಯ ಇಚ್ಛಾ ಶಕ್ತಿ ಇದೆಯೇ ಎಂಬುದು. ಮೂರು: ನಮ್ಮ ಶಿಕ್ಷಣ ಇಲಾಖೆ ಇದನ್ನು ನಿರ್ವಹಿಸಬಲ್ಲ ಅರ್ಪಣಾ ಮನೋಭಾವ ಮತ್ತು ದಕ್ಷತೆಗಳನ್ನು ಹೊಂದಿದೆಯೇ? ನಾಲ್ಕು: ಇಂದಿನ ಸರ್ಕಾರಿ ಶಾಲೆಗಳಿಗೆ ಒದಗಿರುವ ದುರ್ಗತಿಗೆ ಕಾರಣರಾರು ಎಂಬ ಪ್ರಶ್ನೆಯ ಹಿನ್ನಲೆಯಲ್ಲಿ ಇದಕ್ಕೆ ನಮ್ಮ ಪೋಷಕ ಸಮೂಹದಿಂದ ದೊಡ್ಡ ವಿರೋಧ ವ್ಯಕ್ತವಾಗುವುದಿಲ್ಲವೇ? ಈ ಎಲ್ಲ ಪ್ರಶ್ನೆಗಳಿಗೆ ಸದ್ಯದ ಪರಿಸ್ಥಿತಿಯಲ್ಲಿ ಸಿಗುವ ಉತ್ತರ ನಿರಾಶಾದಾಯಕವೆಂದೇ ನನ್ನ ಭಾವನೆ. ಹಾಗಾಗಿ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣದ ಸಲಹೆ ಸದ್ಯಕ್ಕಂತೂ ಅವ್ಯವಹಾರಿಕ ಮಾತ್ರವಲ್ಲ. ಅನಾಹುತಕಾರಿ ಎಂದೇ ಅನಿಸುತ್ತದೆ.

ಇನ್ನು ಎರಡನೆಯ, ಕನ್ನಡ ಮಾಧ್ಯಮ ಶಾಲೆಗಳ ಸುಧಾರಣೆಯ ಸಲಹೆ. ಈ ಸಲಹೆ ನಿನ್ನೆ ಮೊನ್ನೆಯದಲ್ಲ. ಅಲ್ಲದೆ ಶಾಲೆಗಳ ಸುಧಾರಣೆಯ ವಿಷಯ ಇದಕ್ಕಾಗಿ ಹಲವು ವರ್ಷಗಳಲ್ಲಿ ಎಲ್ಲ ಭರವಸೆಗಳು–ಎಸ್. ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಕುವೆಂಪು ಶತಮಾನೋತ್ಸವದ ಅಂಗವಾಗಿ ನೀಡಿದ್ದ, ಶೈಕ್ಷಣಿಕವಾಗಿ ಸುಸಜ್ಜಿತವಾದ ಕುವೆಂಪು ಮಾದರಿ ಶಾಲೆಗಳ ಸ್ಥಾಪನೆಯೂ ಸೇರಿದಂತೆ–ಹುಸಿಯಾಗಿವೆ. ಎಲ್ಲ ಪ್ರಯೋಗಗಳೂ, ಯೋಜನೆಗಳೂ–'ನಲಿ ಕಲಿ',

'ಸರ್ವಶಿಕ್ಷಣ ಅಭಿಯಾನ' ಇತ್ಯಾದಿ–ಪೋಷಕರನ್ನು ಸೆಳೆಯಲು ಸೋತಿವೆ ಮತ್ತು ಅವುಗಳಿಗೆ ಹೂಡಿದ ಕೋಟ್ಯಾಂತರ ರೂಪಾಯಿಗಳ ಹಣದ ಬಹುಪಾಲು ಅಪವ್ಯಯಕ್ಕೀಡಾಗಿದೆ. ಹೀಗಿರುವಾಗ ಹೊಸ ಸುಧಾರಣಾ ಯೋಜನೆಗಳು ಯಶಸ್ವಿಯಾಗುವುವೆಂಬುದಕ್ಕೆ ಏನು ಗ್ಯಾರಂಟಿ? ಹೊಸ ಸುಧರಣೆಗಳನ್ನು ಜಾರಿಗೆ ತರಬೇಕಾದದ್ದೂ ಈಗಿರುವ ತುಕ್ಕು ಹಿಡಿದಿರುವ ಶಿಕ್ಷಣ ಇಲಾಖೆಯ ವ್ಯವಸ್ಥೆ ತಾನೇ?

ಕೊನೆಯದಾಗಿ ಮೂರನೆಯು, ತೀರ್ಪಿನ ವಿರುದ್ಧ ಪುನರ್ಪರಿಶೀಲನಾ ಅರ್ಜಿ ಸಲ್ಲಿಸುವ ಸಲಹೆ. ಸುಮಾರು ೬೨ ಪುಟಗಳ ಸುದೀರ್ಘ ಮತ್ತು ಸವಿವರವಾದ ಸದರಿ ತೀರ್ಪನ್ನು ಓದಿದ ಯಾರಿಗಾದರೂ ಇದರಲ್ಲಿ ಪುನರ್ಪರಿಶೀಲನೆಗೆ ಅರ್ಹವಾದ ಗಣನೀಯ ಅಂಶಗಳಿವೆ ಎಂದು ಅನಿಸಲಾರದೆಂದೇ ನನ್ನ ಅಭಿಪ್ರಾಯ. ಈ ಸಂಬಂಧವಾಗಿ ನಾನು 'ಪ್ರಜಾವಾಣಿ'ಯ 'ಸಂಗತ'ಕ್ಕಾಗಿ ಬರೆದ(ನೋಡಿ: 'ಪ್ರಜಾವಾಣಿ': ೧೪, ಮೇ, ೨೦೧೪) ಲೇಖನದಲ್ಲಿನ ಅಂಶಗಳನ್ನು ಪುನರಾವರ್ತಿಸದೇ ಹೇಳುವುದಾದರೆ, ಈ ಸಂವಿಧಾನ ಪೀಠದ ತೀರ್ಪು, ಮೊದಲಾಗಿ ಇದು ಯಾರ ಹಕ್ಕನ್ನು ಎತ್ತಿಹಿಡಿದಿದೆಯೋ ಆ ಮಕ್ಕಳಿಗಾಗಲೀ, ಅವರ ತಂದೆತಾಯಿಗಳಿಗಾಗಲೀ ಸುಲಭವಾಗಿ ಅರ್ಥವಾಗುವುದಿಲ್ಲ.ಇದು ಸಾಂವಿಧಾನಿಕ ಪರಿಭಾಷೆಯಲ್ಲಿ ಹೆಣೆಯಲ್ಪಟ್ಟ ಜಟಿಲ ಮತ್ತು ಸಂಯುಕ್ತ ಇಂಗ್ಲಿಷ್ ವಾಕ್ಯಗಳ ಚಕ್ರವ್ಯೂಹವಾಗಿದ್ದು, ಅದೇ ಈ ವಿವಾದದ ಸ್ವರೂಪದ ಒಟ್ಟಾರೆ ಅಸಂಬದ್ಧತೆಯನ್ನೂ ಸೂಚಿಸುತ್ತದೆ. ಜೊತೆಗೇ, ಇನ್ನೂ ಮುಖ್ಯವಾಗಿ ಈ ಅಸಂಬದ್ಧತೆಯ ಮೂಲದಲ್ಲಿರುವ ತನ್ನ ತಾತ್ವಿಕತೆಯನ್ನೂ ನೇರವಾಗಿಯೇ ನಮಗೆ ಹೇಳುತ್ತದೆ. ಈ ತಾತ್ವಿಕತೆಯಲ್ಲೇ ನಾವು ಈ ವಿವಾದ ಸದಾ ಮಾತೃಭಾಷಾವಾದಿಗಳ ವಿರುದ್ಧವಾಗಿಯೇ ಏಕೆ ಇತ್ಯರ್ಥವಾಗುತ್ತಿದೆ ಎಂಬುದರ ಕಾರಣವನ್ನು ಹುಡುಕಬೇಕು.

ಆರಂಭದಲ್ಲೇ ಮುಖ್ಯವಾಗಿ ಗಮನಿಸಬೇಕಾದದ್ದು ಇದು: ಈ ಸಂವಿಧಾನ ಪೀಠ ಮಾತೃಭಾಷೆಯೆಂದರೇನು ಎಂಬ ಪ್ರಶ್ನೆ ಎತ್ತಿರುವುದರಲ್ಲೇ ಮತ್ತು ಅದನ್ನು ಯಾವುದು ಮಗುವಿಗೆ ಸರಾಗವೋ ಅದೇ ಮಾತೃ ಭಾಷೆ ಎಂದು ಉತ್ತರಿಸಿಕೊಳ್ಳಲು ನಡೆಸಿರುವ ಪ್ರಯತ್ನದಲ್ಲೇ ಅದರ ವಿಚಾರಶೀಲತೆಯ ನೆಲೆ ಯಾವುದು ಮತ್ತು ಎಂತಹುದು ಎಂಬುದು ಗೊತ್ತಾಗುತ್ತದೆ. ಹಾಗೇ ಶಿಕ್ಷಣ ತಜ್ಞರು ಮತ್ತು ಜಗತ್ತಿನ ಹಿರಿಯ ಚಿಂತಕರು ಮಾತೃಭಾಷೆಯೇ ಕಲಿಕೆಯ ಮಾಧ್ಯಮವಾಗಿ ಶ್ರೇಷ್ಠ ಎಂದು ಹೇಳಿರುವ ಮಾತುಗಳು ಒಪ್ಪುವಂತಿವೆಯಾದರೂ, ಸಂವಿಧಾನದ ಚೌಕಟ್ಟಿನಲ್ಲಿ ಸ್ವೀಕಾರಾರ್ಹವಲ್ಲ ಎಂದು ಅದು ಹೇಳಿರುವುದನ್ನೂ ಗಮನಿಸಬೇಕು. ಹಾಗಾಗಿ, ಈಗ ಅಸ್ತಿತ್ವದಲ್ಲಿರುವ ಸಂವಿಧಾನದ ಚೌಕಟ್ಟಿನಲ್ಲೇ ಎತ್ತಬಹುದಾದ ಏಕೈಕ ಪ್ರಶ್ನೆ ಎಂದರೆ, ಈ ಪರಮೋಚ್ಚ ವೈಯುಕ್ತಿಕ ಸ್ವಾತಂತ್ರ್ಯಗಳು ಕ್ರಿಯಾಶೀಲವಾಗುವುದು ವೈಯುಕ್ತಿಕ ನೆಲೆಯಲ್ಲೋ ಅಥವಾ ಸಮುದಾಯದ ನೆಲೆಯಲ್ಲೋ ಎಂಬ ಪ್ರಶ್ನೆಯನ್ನು ಮಾತ್ರ. ಆದರೆ ನಮ್ಮ ನ್ಯಾಯಾಧೀಶರು ಈ ವಿವಾದದ ಎಲ್ಲ ಹಂತಗಳ ವಿಚಾರಣೆಯಲ್ಲೂ ಅಳವಡಿಸಿಕೊಳ್ಳುತ್ತಾ ಬಂದಿರುವ ಮಾನಸಿಕತೆಯನ್ನು ಗಮನಿಸಿದರೆ(ಇವರು ಭಾಷಾ ಅಲ್ಪಸಂಖ್ಯಾತರ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂಘ–ಸಂಸ್ಥೆಗಳ ಸ್ಥಾಪನೆಯ ಹಕ್ಕುಗಳ ಪ್ರಾಥಮಿಕತೆಯನ್ನು ಎತ್ತಿ ಹಿಡಿಯಲು ಆ ಸಮುದಾಯವನ್ನೂ ವ್ಯಕ್ತಿಗಳ ಗುಂಪಾಗಿಯೇ ನೋಡಿ ಅಲ್ಲಿನ ವ್ಯಕ್ತಿಯ ಹಕ್ಕುಗಳ ನೆಲೆಯಲ್ಲಿ ವಿವಾದವನ್ನು ಪರಿಶೀಲಿಸಿ ತೀರ್ಪು ನೀಡಿದ್ದಾರೆ!) ಅವರು ಈ ಪ್ರಶ್ನೆಗೆ ತಮ್ಮದೇ ತಾಂತ್ರಿಕ ಉತ್ತರವೊಂದನ್ನು ರೂಪಿಸಿಕೊಳ್ಳಬಲ್ಲರು ಎಂಬುದು ಸ್ಪಷ್ಟವಾಗುತ್ತದೆ.

ಇರಲಿ, ಮೊದಲಾಗಿ ನಮ್ಮ ಸಂವಿಧಾನ ರಚಿಸಿದ ಹಿರಿಯರು ವ್ಯಕ್ತಿಯನ್ನೇ ಗಣರಾಜ್ಯದ ಮೂಲ ಘಟಕವೆಂದು ಏಕೆ ಭಾವಿಸಿಕೊಂಡರು? ಕಾರಣ, ಸಾತಂತ್ರ್ಯಾನಂತರ ದೇಶದ ಭವಿಷ್ಯವನ್ನು ತಮ್ಮ ಕೈಗೆ ತೆಗೆದುಕೊಂಡ ನಾಯಕರು ಪಶ್ಚಿಮದ ದೇಶಗಳೇ ಪ್ರಗತಿಶೀಲತೆಗೆ ಮಾದರಿ ಎಂದು ಭಾವಿಸಿದರು. ನಮ್ಮ ದೇಶವನ್ನೂ ಪಶ್ಚಿಮದ 'ರಾಷ್ಟ್ರ ಪ್ರಭುತ್ವ'ದ ಮಾದರಿಯಲ್ಲಿ ರೂಪಿಸಬಯಸಿದರು. ಪಶ್ಚಿಮದ ಸಂಸದೀಯ ಪ್ರಜಾಪ್ರಭುತ್ವ ಅವರಿಗೆ ಆದರ್ಶವಾಯಿತು. ಅದಕ್ಕೆ ಆಧಾರವಾಗಿದ್ದ ಪಶ್ಚಿಮದ ವ್ಯಕ್ತಿವಾದವೇ ಇಲ್ಲಿನ ನಮ್ಮ ರಾಷ್ಟ್ರ ನಿರ್ಮಾಣದ ಮಾರ್ಗಸೂಚಿಯಾದ ಸಂವಿಧಾನ ರಚನೆಗೆ ಮೂಲ ಸ್ಫೂರ್ತಿಯಾಯಿತು. ಹಾಗಾಗಿ ನಮ್ಮ ಸಂವಿಧಾನಕ್ಕೆ ವ್ಯಕ್ತಿಯ ಮೂಲಭೂತ ಹಕ್ಕುಗಳ ಪರಿಕಲ್ಪನೆಯೇ ಅಡಿಪಾಯವಾಗಿ ಆ ಹಕ್ಕುಗಳೇ ಅದರ ಪರಮ ಮೌಲ್ಯಗಳೆನಿಸಿದವು. ಆದರೆ ಪಶ್ಚಿಮದ ದೇಶಗಳಲ್ಲಿನ ವ್ಯಕ್ತಿವಾದಕ್ಕೆ ಕೈಗಾರಿಕೀಕರಣ ಮತ್ತು ಅದು ರೂಪಿಸಿದ ಬಂಡವಾಳವಾದದ ಇತಿಹಾಸವಿದೆ;ಆದರೆ ಭಾರತ ಐತಿಹಾಸಿಕವಾಗಿ ಮೂಲತಃ ಹಲವು ನೆಲೆಗಳ ಪಾರಂಪರಿಕ ಅಸ್ಮಿತೆಗಳ ಸಮುದಾಯಗಳ ಒಕ್ಕೂಟ ಎಂಬ ಸತ್ಯ ಈ ಸಂದರ್ಭದಲ್ಲಿ ಮರೆತೇ ಹೋಯಿತು. ಕಣ್ಣು ಕುಕ್ಕುವ ಪ್ರಗತಿಶೀಲತೆಯ ಆಕರ್ಷಣೆಯಲ್ಲಿ ನಮ್ಮ ನವ ಭಾರತ ನಿರ್ಮಾಪಕರು ಇಂತಹ ಗಾಢ ವಿಸ್ಮೃತಿಗೆ ಒಳಗಾದರು. ಅಥವಾ ಆ ಸತ್ಯವನ್ನು 'ಅಭಿವೃದ್ಧಿ' ಎಂಬ ಇನ್ನೊಂದು ಪ್ರಗತಿಶೀಲ ಪರಿಕಲ್ಪನೆಯ ರಾಜಕಾರಣದ ಮೂಲಕ ನಿಭಾಯಿಸಬಹುದು ಎಂದು ಭಾವಿಸಿದರೇನೋ! ಇಲ್ಲಿ, ಇದಕ್ಕೆ ತದ್ವಿರುದ್ಧವಾಗಿ ಆಲೋಚಿಸಿ ದೇಶವನ್ನು ಸ್ವಾತಂತ್ರ್ಯದ ಹೊಸ್ತಿಲಿಗೆ ತಂದು ನಿಲ್ಲಿಸಿದ ಗಾಂಧೀಜಿ ಮರೆತುಹೋಗಿದ್ದರು. ಅವರ ಅಕಾಲಿಕ ಸಾವೂ ಇದನ್ನು ಮತ್ತಷ್ಟು ಸುಲಭಗೊಳಿಸಿತು. (ಈ ಹಿನ್ನೆಲೆಯಲ್ಲಿ ನಾವು ನಮ್ಮ 'ಸಂಸ್ಕೃತಿ ವಿಮರ್ಶೆ'ಯ ಚರ್ಚೆಗಳಲ್ಲಿ ಚಾಲ್ತಿಗೆ ತಂದಿರುವ 'ವಿಸ್ಮೃತಿ'ಯ ಪರಿಕಲ್ಪನೆಯನ್ನು ಪುನರ್ಸ್ಥಾನೀಕರಿಸಿ ಪುನರ್ವ್ಯಾಖ್ಯಾನಸಬೇಕಿದೆ ಎಂದು ನನ್ನ ಅಭಿಪ್ರಾಯ)

ಹಾಗಾಗಿ ಈ ಮೂಲಭೂತ ಸಂಗತಿಯನ್ನು ಗಮನಿಸದೆ, ಕನ್ನಡದ ಪ್ರಶ್ನೆಯನ್ನು ಮತ್ತೆ ಇದೇ ಸಂವಿಧಾನದ ಚೌಕಟ್ಟಿನಲ್ಲಿ ಎತ್ತಿಕೊಳ್ಳುವುದು–ಅಂದರೆ ಮೇಲ್ಮನವಿ ಸಲ್ಲಿಸುವುದು–ಸಾಧುವಲ್ಲವೆಂದೇ ನನ್ನ ಭಾವನೆ. ಏಕೆಂದರೆ, ವ್ಯಕ್ತಿಯ ಮೂಲಭೂತ ಹಕ್ಕುಗಳು ನಿರಪೇಕ್ಷವೂ ಅಲ್ಲ ಮತ್ತು ಅನಿರ್ಬಂಧಿತವೂ ಅಲ್ಲ ಎನ್ನುವುದು ಈಗಾಗಲೇ ಹಲವು ಪ್ರಕರಣಗಳಲ್ಲಿ ಚರ್ಚೆಗೆ ಬಂದಿದ್ದು, ಅವನ್ನು ಹಿಂದಿನ ಮತ್ತು ಈ ವಿಚಾರಣಾ ಸಂದರ್ಭಗಳಲ್ಲಿ ಉಲ್ಲೇಖಿಸಲಾಗಿದ್ದರೂ, ಅವೆನ್ನೆಲ್ಲ ತಳ್ಳಿ ಹಾಕಿ ಈ ತೀರ್ಪು ನೀಡಲಾಗಿದೆ ಎಂಬುದನ್ನು ನಾವು ಗಮನಿಸಬೇಕು. (ಹೆಚ್ಚೆಂದರೆ, ನ್ಯಾಯಾಲಯ ಎತ್ತಿ ಹಿಡಿಯುವ ಮೂಲಭೂತ ಹಕ್ಕುಗಳು ವಾಸ್ತವವಾಗಿ ಜಾರಿಯಾಗುವುದು ವೈಯಕ್ತಿಕ ನೆಲೆಯಲ್ಲೋ, ಸಮುದಾಯದ ನೆಲೆಯಲ್ಲೋ ಎಂದು ಕೇಳಿ ತೃಪ್ತಿಪಟ್ಟುಕೊಳ್ಳಬಹುದಷ್ಟೆ!) ಎಲ್ಲಿಯವರೆಗೆ ಸಮುದಾಯಗಳು ನಮ್ಮ ರಾಷ್ಟ್ರದ ನಿಜವಾದ ಮೂಲ ಘಟಕಗಳು ಮತ್ತು ಅವುಗಳ ಒಕ್ಕೂಟವೇ ನಮ್ಮ ಗಣರಾಜ್ಯವಾಗಬಲ್ಲುದಾಗಿರುವುದು ಎಂಬ ಗ್ರಹಿಕೆ ನಮ್ಮ ಸಂವಿಧಾನದಲ್ಲಿ ಅಳವಡಿಕೆಯಾಗುವುದಿಲ್ಲವೋ ಅಲ್ಲಿಯವರೆಗೆ ಕನ್ನಡ ಒಂದು ಸಮುದಾಯದ ಭಾಷೆಯಾಗಿ–ಅಂದರೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಸಾಮೂಹಿಕ ಶಿಕ್ಷಣದ ಭಾಷೆಯಾಗಿ–ಊರ್ಜಿತವಾಗುವ ಸಂಭವ ಇಲ್ಲವೆಂದೇ ನನ್ನ ಭಾವನೆ.

ಹಾಗಾಗಿ, ವ್ಯಕ್ತಿವಾದವನ್ನು ನಮಗೆ ಪ್ರದಾನ ಮಾಡಿದ ಮತ್ತು ಅದಕ್ಕೆ ಕಾರಣವಾದ 'ಅಭಿವೃದ್ಧಿ'ಯನ್ನು ಯಾವ ಮಾಧ್ಯಮದ ಮೂಲಕ ನಾವು ಪರಿಗ್ರಹಿಸಿದೆವೋ ಆ ಇಂಗ್ಲಿಷ್ ಭಾಷೆಯ ಎದುರಿಗೆ ಕನ್ನಡವು ರಾಷ್ಟ್ರದ ಅಧಿಕೃತ ಬದುಕಿನಂಗಳದಲ್ಲಿ ಎರಡನೇ ದರ್ಜೆಯ ಭಾಷೆಯಾಗಿಯೇ ಉಳಿಯುವುದು ನಿಶ್ಚಿತ. ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನೂ ಹೇಳಬಹುದು. ಎಲ್ಲಿವರೆಗೆ ನಾವು ಈ ವ್ಯಕ್ತಿವಾದ ಮತ್ತು ಅದರ ಹಿಂದಿನ ಕೈಗಾರಿಕೀಕರಣ ಮಾದರಿಯನ್ನು(ಅದರ ಇತ್ತೀಚಿನ ರೂಪಗಳಾದ ನಗರೀಕರಣ ಮತ್ತು ಜಾಗತೀಕರಣಗಳ ಬದುಕಿನ ಮಾದರಿಗಳನ್ನು) ಒಂದೊಂದೇ ಹಂತವನ್ನು ಒಪ್ಪಿಕೊಳ್ಳುತ್ತಾ ಹೋಗುತ್ತೇವೆಯೋ ಹಾಗೇ ಕನ್ನಡವು ಒಂದೊಂದೇ ಹಂತ ಹಿಂದಕ್ಕೆ ಸರಿಯುತ್ತಾ ಕೊನೆಗೊಂದು ದಿನ ಕೇವಲ ಕೆಲವರ ಆಡುಭಾಷೆಯಾಗಿ ಅವನತಿಗೊಳ್ಳಬಹುದು. ಆದ ಕಾರಣ ಇಂದು ಕನ್ನಡವನ್ನು

ಉಳಿಸಿಕೊಳ್ಳುವುದೆಂದರೆ, ನಮ್ಮ ಒಂದಿಷ್ಟು ಹುಸಿ ಭ್ರಮೆಗಳನ್ನು, ಅವುಗಳನ್ನು ಕಟ್ಟಿರುವ ಕೆಲ ಹುಸಿ ಸುಖ ಕಲ್ಪನೆಗಳನ್ನು ತ್ಯಜಿಸಲು ಸಿದ್ಧರಾಗುವುದು. ಇದು ಮಾತ್ರ ಕನ್ನಡವನ್ನು, ಕನ್ನಡ ಜನತೆಯ ಅಸ್ಮಿತೆಯನ್ನು, ಆ ಮೂಲಕ ಅವರ ಬದುಕಿನ ನಿಜ ಆಧಾರಗಳನ್ನು ಭದ್ರಗೊಳಿಸಬಲ್ಲುದು. ಇಲ್ಲದೇ ಹೋದರೆ, ಹುಸಿ ಧರ್ಮ, ಹುಸಿ ರಾಷ್ಟ್ರೀಯತೆ, ಹುಸಿ ಸಮೃದ್ಧಿ, ಹುಸಿ ಜಾಗತಿಕ ಶಕ್ತಿಯ ಕನಸುಗಳ ಹೆಸರಿನಲ್ಲಿ ಯಾರು ಯಾರೋ ನಮ್ಮನ್ನು ಆಳುತ್ತಾ ನಮ್ಮ ಬದುಕಿನ ಜೀವ ಜಲಗಳನ್ನೇ ಬತ್ತಿಸುತ್ತಾ ಹೋಗುತ್ತಾರೆ.

ಇದು ದೊಡ್ಡ ಕೆಲಸ. ಕನ್ನಡ ನಮಗೆ ನಿಜವಾದ ದೊಡ್ಡ ಸಂಗತಿಯೇ ಆಗಿದ್ದರೆ ನಾವು ಈ ದೊಡ್ಡ ಕೆಲಸವನ್ನು ಕೈಗೆತ್ತಿಕೊಳ್ಳಬೇಕು. ಅನ್ಯ ಮಾರ್ಗವಿಲ್ಲ. ಇಂದಿನ ರಾಜಕೀಯ ಸಂದರ್ಭಕ್ಕೆ ತಕ್ಕ ಪರಿಭಾಷೆಯಲ್ಲಿ ಹೇಳುವುದಾದರೆ, ಇದಕ್ಕೆ ಬೆಂಗಳೂರಿನ ವಿಧಾನಸೌಧದಲ್ಲಿ ಆಸೀನರಾಗಿರುವ ಮುಖ್ಯ ಮಂತ್ರಿ ಸಿದ್ಧರಾಮಯ್ಯ ಅಲ್ಲ, ಅವರೊಳಗಿನ ಸಿದ್ದನಹುಂಡಿಯ ಸಿದ್ಧರಾಮಯ್ಯ ಎಚ್ಚೆತ್ತುಕೊಂಡು ಸಿದ್ಧರಾಗಬೇಕು. ಅವರು ಸಿದ್ಧರಾಗದಿದ್ದಲ್ಲಿ ಕನ್ನಡ ಕನ್ನಡ ಎಂದೂ ಹೂಂಕರಿಸುತ್ತಿರುವ ಜನರಾದರೂ ಸಿದ್ಧರಾಗಬೇಕು. ಮಿಕ್ಕಂತೆ, ಮಾತುಕತೆ-ರಾಷ್ಟ್ರೀಕರಣ-ಸುಧಾರಣೆ-ಮೇಲ್ಮನವಿ ಇವೆಲ್ಲ ಗೊತ್ತಿದ್ದೂ ಮಾಡುವ ವ್ಯರ್ಥ ಕಾಲಹರಣದ ವ್ಯವಹಾರಗಳಷ್ಟೇ ಆಗಬಹುದು.

---

**ದಾಖಲೆ**

# ಸರ್ವೋನ್ನತ ನ್ಯಾಯಾಲಯಕ್ಕೊಂದು ಮನವಿ ಹಾಗೂ ಕೆಲ ಟಿಪ್ಪಣಿಗಳು

**ಸರ್ವೋನ್ನತ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಲ್ಲಿದ್ದಾಗ ವಿಚಾರಣೆಯ ಸಂದರ್ಭದಲ್ಲಿ ಸಂವಿಧಾನ ಪೀಠದಲ್ಲಿದ್ದ ಮಾನ್ಯ ನ್ಯಾಯಾಧೀಶರುಗಳು ಕೇಳಿದ ಪ್ರಶ್ನೆಗಳು ಮತ್ತು ಅದಕ್ಕೆ ನಮ್ಮ ಅಡ್ವೊಕೇಟ್ ಜನರಲ್‌ರಾದ ಗೆಳೆಯ ರವಿವರ್ಮ ಕುಮಾರ್ ನೀಡಿದ ಉತ್ತರಗಳ ಪತ್ರಿಕಾ ವರದಿಗಳನ್ನು ಓದಿ ಪೆಚ್ಚಾದ ನಾನು, ವಿಚಾರಣೆಯ ಕೊನೆಯಲ್ಲಿ ಪೀಠದ ಮುಖ್ಯಸ್ಥರು, ವಿಚಾರಣೆಯ ಸಂದರ್ಭದಲ್ಲಿ ಪ್ರಸ್ತಾಪಿತವಾಗದ ಅಂಶಗಳೇನಾದರೂ ಇದ್ದರೆ ಅದನ್ನು ಲಿಖಿತ ಟಿಪ್ಪಣಿ ರೂಪದಲ್ಲಿ ಸಲ್ಲಿಸಬಹುದೆಂದು ತಿಳಿಸಿದ್ದಾರೆಂದು ಕೇಳಿ, ನಾನೊಂದು ಮನವಿ ಮತ್ತು ಟಿಪ್ಪಣಿಗಳನ್ನು ಸಿದ್ಧಪಡಿಸಿ ಮುಖ್ಯ ನ್ಯಾಧೀಶರಿಗೆ ಅಂಚೆ ಮೂಲಕ ಕಳಿಸಿದೆ. ಜೊತೆಗೆ ದೆಹಲಿಯ ವಕೀಲ ಗೆಳೆಯ ಸಿ.ಎಂ ಅಂಗಡಿಯವರ ಮೂಲಕ(ವಾಸ್ತವವಾಗಿ ಅವರು ಖಾಸಗಿ ಶಾಲೆಗಳ ಪರವಾಗಿ ವಾದಿಸಿದ್ದ ವಕೀಲರಲ್ಲೊಬ್ಬರು!) ಪೀಠದ ಎಲ್ಲ ಸದಸ್ಯರಿಗೂ ಈ ಟಿಪ್ಪಣಿಗಳ ಒಂದೊಂದು ಪ್ರತಿಯನ್ನು ಸಲ್ಲಿಸಿದ್ದೆ. ಆದರೆ ತೀರ್ಪು ಅನುಸರಿಸಿರುವ ತರ್ಕವನ್ನು ಗಮನಿಸಿದಾಗ ಇದರಿಂದ ಏನೂ ಪ್ರಯೋನವಾಗಿಲ್ಲ ಎಂಬುದು ಸ್ಪಷ್ಟ. ದಾಖಲೆಗಾಗಿ, ಅದಕ್ಕಿಂತ ಹೆಚ್ಚಾಗಿ ನಮ್ಮ ಸಂವಿಧಾನ ಕಲ್ಪಿಸಿಕೊಟ್ಟಿರುವ ನಮ್ಮ 'ರಾಷ್ಟ್ರ ಪ್ರಭುತ್ವ' ಈ ಇಡೀ ಪ್ರಕರಣವನ್ನು ಎಂತಹ ಇಕ್ಕಟ್ಟಾದ ನೆಲೆಯಲ್ಲಿ ನೋಡುತ್ತದೆಂಬುದು ಓದುಗರಿಗೆ ಸ್ಪಷ್ಟ ವಾಗಲಿ ಎಂಬ ಉದ್ದೇಶದಿಂದ ಇಲ್ಲಿ ಪ್ರಕಟಿಸಲಾಗುತ್ತಿದೆ. ಈ ದಾಖಲೆಗಳನ್ನು ಕನ್ನಡಕ್ಕೆ ತಂದವರು ಕವಿಮಿತ್ರ ಎಸ್. ಮಂಜುನಾಥ್ ಅವರು**-ಸಂ

ಇವರಿಗೆ-
ಮಾನ್ಯ ನ್ಯಾ॥ ಸದಾಶಿವಂ ಅವರು
ಮುಖ್ಯ ನ್ಯಾಯಮೂರ್ತಿಗಳು
ಸರ್ವೋನ್ನತ ನ್ಯಾಯಾಲ, ನವದೆಹಲಿ

ಸ್ವಾಮಿ,

ವಿಷಯ: ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮ ಕುರಿತಂತೆ ಕರ್ನಾಟಕ ರಾಜ್ಯ ಸರ್ಕಾರದ ಆಜ್ಞೆಯ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ದಾವೆ

ಮೇಲ್ಕಂಡ ಪ್ರಕರಣದ ವಿಚಾರಣೆಯ ಬಗ್ಗೆ ಸುದ್ದಿ ಪತ್ರಿಕೆಗಳನ್ನು ಓದಿ ಮತ್ತು ಸಂಬಂಧಿತ ಸಂವಿಧಾನ ಪೀಠದ ಪ್ರಜ್ಞಾವಂತ ನ್ಯಾಯಾಧೀಶರು ಅಲ್ಲಿ ಕೇಳಿದರೆನ್ನಲಾದ ಪ್ರಶ್ನೆಗಳ ಬಗ್ಗೆ ಆತಂಕಿತನಾದ ಕನ್ನಡ ಮಾತನಾಡುವ ಹೆಮ್ಮೆಯ ಭಾರತೀಯನಾದ ನಾನು ಕೆಲವು ಅಂಶಗಳನ್ನು ಪ್ರಜ್ಞಾವಂತ ನ್ಯಾಯಾಧೀಶರ ಗಮನಕ್ಕೆ ತರಬಯಸಿದ್ದೇನೆ.

ಹಾಗೆಯೇ ಘನ ನ್ಯಾಯಾಲಯವು ಕರ್ನಾಟಕ ಸರ್ಕಾರಕ್ಕೆ ಒಂದು ವಾರದೊಳಗಾಗಿ ಬರಹ ರೂಪದಲ್ಲಿ ತನ್ನ ವಾದವನ್ನು ಮಂಡಿಸಲು ಕೇಳಿದೆ ಎಂದೂ ತಿಳಿದುಬಂದಿದೆ. ನನ್ನ ಈ ಟಿಪ್ಪಣಿಯನ್ನು ಖಾಸಗಿ ವಾದಮಂಡನೆಯೆಂದೂ ತಾವು ಪರಿಗಣಿಸಬಹುದಾಗಿದೆ.

ಭಾರತೀಯ ದೇಸೀ ಭಾಷೆಗಳು ಜೀವಂತವಾಗಿ ಉಳಿಯುವ ನಿಟ್ಟಿನಲ್ಲಿ ಈ ಪ್ರಕರಣ ಅತೀ ಮುಖ್ಯವಾದ್ದರಿಂದ, ಕರ್ನಾಟಕದ ಅಟಾರ್ನಿ ಜನರಲ್ (ಮತ್ತು ಅವರ ತಂಡ) ಗೌರವಾನ್ವಿತ ನ್ಯಾಯಾಧೀಶರುಗಳ ಗಮನಕ್ಕೆ ತಾರದಿರಬಹುದಾದ ೨೦ ಅಂಶಗಳ ಟಿಪ್ಪಣಿಯೊಂದನ್ನು ನಾನು ಇದರೊಂದಿಗೆ ಇರಿಸಿದ್ದು, ಇದನ್ನು ಸದರಿ ಪೀಠಕ್ಕೆ ಕಳಿಸಬೇಕೆಂಬ ನನ್ನ ಮನವಿಯನ್ನು ದಯಮಾಡಿ ಪರಿಗಣಿಸಬೇಕೆಂದು ಕೋರುತ್ತೇನೆ. ಇಂಥ ಮಧ್ಯ ಪ್ರವೇಶಗಳಿಗೆ ಆಸ್ಪದವಿಲ್ಲವೆಂದಾದಲ್ಲಿ, ಭಾರತೀಯ ಭಾಷೆಗಳ ಗೌರವಪೂರ್ಣ ಅಸ್ತಿತ್ವಕ್ಕಾಗಿ ಅದಕ್ಕೆ ಸೂಕ್ತ ಅವಕಾಶ ಕಲ್ಪಿಸಲು ಎಲ್ಲ ಕಾನೂನಾತ್ಮಕ ಸಾಧ್ಯತೆಗಳನ್ನು ಶೋಧಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಒಬ್ಬ ಹೆಮ್ಮೆಯ ಭಾರತೀಯನಾಗಿ ನಾನು ಮಾತಾಡುವ ನನ್ನ ಭಾಷೆಯ ಘನತೆ ಗೌರವದ ಪ್ರಶ್ನೆಯಿರುವ ದಾವೆಯೊಂದು ನಡೆಯುತ್ತಿರುವಾಗ ನನ್ನ ಅಹವಾಲನ್ನು ಮಂಡಿಸುವ ಹಕ್ಕು ನನಗಿದೆಯೆಂದು ಭಾವಿಸುತ್ತೇನೆ.

ನನ್ನ ಇಂಗ್ಲೀಷ್ ಭಾಷೆ ಬಹಳ ಚೆನ್ನಾಗಿಲ್ಲ. ಆದರೆ ಅದು ಹೇಳಬೇಕಾದ್ದನ್ನು ಹೇಳಲು ಶಕ್ತವಾಗಿದೆ ಎಂದು ನಂಬಿದ್ದೇನೆ.

ಗೌರವಪೂರ್ಣ ವಂದನೆಗಳೊಂದಿಗೆ,

೮ನೇ ಫೆಬ್ರುವರಿ, ೨೦೧೪ ವಿಶ್ವಾಸಪೂರ್ವಕವಾಗಿ
ಶಿವಮೊಗ್ಗ **ಡಿ.ಎಸ್. ನಾಗಭೂಷಣ**

**೧೦ ಅಂಶಗಳ ಟಿಪ್ಪಣಿಗಳು:**

ಶಿಕ್ಷಣ ರಾಷ್ಟ್ರ ನಿರ್ಮಾಣಕ್ಕೆ ಸಂಬಂದಪಟ್ಟ ವಿಷಯ ಇಲ್ಲಿ ಪೋಷಷಕರು ಹಕ್ಕು ಎನ್ನುವುದು ಪರಮೋಚ್ಚವಾಗಲಾರದು. ಏಕೆಂದರೆ,

೧. ಶಿಕ್ಷಣವೆನ್ನುವುದು ಮೂಲತಃ ಜ್ಞಾನವನ್ನು ವ್ಯವಸ್ಥಿತಗೊಳಿಸುವ (ವಿನ್ಯಾಸಗೊಳಿಸುವ) ಒಂದು ನಿಯೋಗ.

೨. ಈ ವಿನ್ಯಾಸ ಮಾಡುವುದು ಮನುಷ್ಯ, ಪ್ರಪಂಚದ ಮತ್ತು ಅದರೊಂದಿಗೆ ತನಗಿರುವ ಸಂಬಂಧದ ತಿಳುವಳಿಕೆ ಪಡೆಯಲು.ಗಾಗಿ.

೩. ಉದ್ಯೋಗ, ಆದಾಯಗಳಿಗಾಗಿ ಶಿಕ್ಷಣವೆನ್ನುವುದು ಇದರ ಫಲಿತಗಳಷ್ಟೇ.

೪. ಉತ್ತಮ ಸಮಾಜದ ನಿರ್ಮಾಣವೆನ್ನುವುದು ಸಹಜವಾಗಿ ಯಾವುದೇ ದೇಶದ ಪ್ರಥಮ ಆದ್ಯತೆ. 'ಸಮೃದ್ಧ' ಸಮಾಜ (ಅದರ ಅರ್ಥ ಏನೇ ಇರಲಿ) ಮೂಡಬೇಕಾದದ್ದೂ ಇದರಿಂದಷ್ಟೇ..

೫. ತಾನು ಆಪ್ತವಾಗಿ ಅರಿತಿರುವ ಪ್ರಪಂಚದ ಬಗ್ಗೆ ಸಮಂಜಸವಾಗಿ ವ್ಯವಸ್ಥಿತವಾಗಿರುವ ಜ್ಞಾನ ಪಡೆದ ಜನರಿಂದಷ್ಟೇ ಉತ್ತಮ ಸಮಾಜದ ನಿರ್ಮಾಣ ಸಾಧ್ಯ.

**(೧೭ನೇ ಪುಟಕ್ಕೆ**

## ಸಮಕಾಲೀನ

# ಕವಲು ದಾರಿಯಲ್ಲಿರುವ ಭಾರತದ ಮುಸ್ಲಿಮರು...



...ಯಗೊಂಡ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ನರೇಂದ್ರ ಮೋದಿಯವರನ್ನು ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿ ... ಚುನಾವಣಾ ಚರ್ಚೆಗಳಲ್ಲಿ ಮುನ್ನೆಲೆಗೆ ಬಂದ ಪ್ರಮುಖ ವಿಷಯಗಳಲ್ಲಿ ಭಾರತದ ಬಹುತ್ವದ ಪ್ರಶ್ನೆಯೂ ಒಂದು. ...ಯ ಮುಸ್ಲಿಂ ಸಮುದಾಯದ ಹಿತರಕ್ಷಣೆಯ ಪ್ರಶ್ನೆ ವಿಶೇಷವಾಗಿ ಚರ್ಚೆಗೆ ಬಂತು. ಹಾಗೆ ನೋಡಿದರೆ, ದೇಶ ವಿಭಜನೆಯ ...ದರ್ಭದಿಂದಲೂ ರಾಷ್ಟ್ರೀಯ ರಾಜಕಾರಣದಲ್ಲಿ 'ಭಾರತೀಯ ಮುಸ್ಲಿಮರು' ಎಂಬುದು ಒಂದು ಬಗೆಹರಿಯಲಾಗದ ...ವಾಗಿಯೇ ಉಳಿದುಬಿಟ್ಟು ಪದೇ ಪದೇ ಅದರ ಬಗ್ಗೆ ಚರ್ಚೆಗಳು ನಡೆದೇ ಇವೆ. ಇತ್ತೀಚಿನ ವರ್ಷಗಳಲ್ಲಿ ಅಯೋಧ್ಯಾ ಚಳುವಳಿ, ಬಾಬ್ರಿ ಮಸೀದಿ ನಾಶ, ಮುಂಬೈ ಸ್ಫೋಟಗಳು, ಗುಜರಾತ್ ನರಹತ್ಯೆ ಮತ್ತು ಜಾಗತಿಕವಾಗಿ ಇಸ್ಲಾಮೀ ಭಯೋತ್ಪಾದನೆ ಎಂಬ ಶಬ್ದ ಚಾಲ್ತಿಗೆ ಬಂದಾಗಿನಿಂದ ಈ ಪ್ರಶ್ನೆ ಇನ್ನಷ್ಟು ಸಂಕೀರ್ಣಗೊಂಡು ಹಲವು ನೆಲೆಗಳಿಂದ ಉತ್ತರಗಳನ್ನು ಬೇಡುವಂತಾಗಿದೆ. ಕೆಲವರು ಇಸ್ಲಾಂನ ತಾತ್ವಿಕತೆಯಲ್ಲೇ ಆಧುನಿಕ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಕೆಲವು ತೊಂದರೆಗಳಿವೆ ಎನ್ನುತ್ತಿದ್ದರೆ, ಇನ್ನು ಕೆಲವರು, ಇಸ್ಲಾಮೀ ಪುರೋಹಿತಶಾಹಿಯ ಸ್ವರೂಪದಲ್ಲಿ ಈ ತೊಂದರೆಗಳನ್ನು ಗುರುತಿಸುತ್ತಿದ್ದು, ಮತ್ತೆ ಕೆಲವರು ಈ ಸಮುದಾಯದ ಓಲೈಕೆಯ ರಾಜಕಾರಣದಲ್ಲಿ ತೊಂದರೆಗಳನ್ನು ಕಾಣುತ್ತಿದ್ದಾರೆ. ಆದರೆ ಇವೆಲ್ಲವುಗಳ ಮಧ್ಯದ ಕಟು ವಾಸ್ತವದ ಸಂಗತಿ ಏನೆಂದರೆ, ದೇಶದಲ್ಲಿ ಅತ್ಯಂತ ಕಡುಬಡತನ ಮತ್ತು ನಿರುದ್ಯೋಗಕ್ಕೆ ಒಳಗಾಗಿರುವವರು ಈ ಸಮುದಾಯದವರೇ ಆಗಿದ್ದಾರೆ ಎಂಬುದು.

ಹಾಗಾಗಿಯೇ, ಈ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಗುಜರಾತ್‌ನ ಕೆಲ ಮುಸ್ಲಿಂ ಗಣ್ಯರು, ದೇಶದಲ್ಲಿ ಮುಸ್ಲಿಮರು ಅತ್ಯಂತ ಹೆಚ್ಚು ಸುರಕ್ಷಿತ ಮತ್ತು ಸುಖವಾಗಿರುವುದು ತಮ್ಮ ಈ ರಾಜ್ಯದಲ್ಲೇ ಎಂದು ವಾದಿಸುತ್ತಾ, ಹಳೆಯದನ್ನೆಲ್ಲ ಮರೆತು ಮುಸ್ಲಿಮರ ರಾಜಕಾರಣ ರಾಷ್ಟ್ರದ ಮುಖ್ಯ ವಾಹಿನಿಯ ರಾಜಕಾರಣದ ಜೊತೆಗೆ ಹೆಜ್ಜೆ ಹಾಕುತ್ತಾ, ಗುಜರಾತ್ ಮಾದರಿಯಲ್ಲಿ 'ಅಭಿವೃದ್ಧಿ' ಸಾಧಿಸಬೇಕಿದೆ ಎನ್ನತೊಡಗಿದ್ದಾರೆ. ಎಂ.ಜೆ. ಅಕ್ಬರ್‌ರಂತಹ 'ಸೆಕ್ಯುಲರ್' ಮುಸ್ಲಿಂ ಬುದ್ಧಿಜೀವಿಯೂ ಬಿಜೆಪಿ ಸೇರಿ ಮುಸ್ಲಿಂ ರಾಜಕಾರಣದ ಈ ಹೊಸ ಮಾದರಿಗೆ ಬೆಂಬಲ ಸೂಚಿಸಿ ಅಚ್ಚರಿ ಹುಟ್ಟಿಸಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮವೆಂಬಂತೆ ದೇಶ ಮೋದಿಯವರನ್ನು ಪ್ರಧಾನ ಮಂತ್ರಿಯಾಗಿ ಭಾರಿ ಬಹುಮತದಿಂದ ಆಯ್ಕೆಮಾಡಿ ಹಳೆಯ ಸೆಕ್ಯುಲರ್ ರಾಜಕಾರಣದ ಮಾದರಿಗೆ ಒಂದು ಆಘಾತ ಚಿಕಿತ್ಸೆ ನೀಡಿದಂತಿದೆ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪತ್ರಿಕೆ ಇಲ್ಲಿ ವಿಶ್ಲೇಷಣೆ, ಚರ್ಚೆ ಮತ್ತು ಪ್ರಶ್ನೋತ್ತರಗಳ ಮೂಲಕ ಈ ವಿಷಯದ ಮೇಲೆ ವಿಶೇಷ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ. ಓದಿ ಪ್ರತಿಕ್ರಿಯಿಸಿರಿ–ಸಂ

## ಭಾರತೀಯ ಮುಸ್ಲಿಮರ ಇವೊತ್ತಿನ ಸಂಕಟಗಳು–ಸವಾಲುಗಳು

–ಡಾ. ಮುಜ಼ಾಫರ್ ಅಸ್ಸಾದಿ

ಭಾರತೀಯ ಮುಸ್ಲಿಮರ ಇಂದಿನ ಸಂಕಟಗಳು ಮತ್ತು ಸವಾಲುಗಳನ್ನು ಅರ್ಥ ಮಾಡಿಕೊಳ್ಳಲು ನಾವು ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಮುಸ್ಲಿಂ ಜಗತ್ತನ್ನು ಪ್ರಭಾವಿಸಿದ ಅನೇಕ ಅಂಶಗಳನ್ನು ಗಮನಿಸಿಯೇ ಮುಂದುವರೆಯಬೇಕು. ೧೯೯೦ರಿಂದೀಚೆಗೆ ಜಾರಿಗೊಂಡ ಜಾಗತೀಕರಣ ಮತ್ತು ಆರ್ಥಿಕ ಉದಾರೀಕರಣಗಳು 'ಸೃಷ್ಟಿಸಿದ ಹೊಸ ಆಧುನಿಕತೆ ಮುಸ್ಲಿಂ ಸಮಾಜಗಳ ಪಾರಂಪರಿಕ ಮೌಲ್ಯಗಳನ್ನು ಬುಡಮೇಲು ಮಾಡತೊಡಗಿದ ಹಾಗೆ ಅದರ ಧಾರ್ಮಿಕ ನಾಯಕರಿಗೆ ಕಾಣತೊಡಗಿ ಅದನ್ನು ತನ್ನದೇ ರೀತಿಯಲ್ಲಿ ಪ್ರತಿಭಟಿಸತೊಡಗಿದರು. ಅದನ್ನು ಪಾಶ್ಚಾತ್ಯಲೋಕ 'ನಾಗರೀಕತೆಗಳ ಸಂಘರ್ಷ'ವೆಂದು ಹೆಸರಿಸಿತು. ಮತ್ತು ಇಸ್ಲಾಮನ್ನು ಕಮ್ಯೂನಿಸಂ ಪತನದ ನಂತರ ಹುಟ್ಟಿಕೊಂಡಿರುವ ಹೊಸ ವೈರಿಯೆಂದು ಗುರುತಿಸಿ ಅದಕ್ಕೆ ಇಡಿಯಾಗಿ ಭಯೋತ್ಪಾನೆಯ ಪಟ್ಟ ಕಟ್ಟಿತು. ಆಗ ಹುಟ್ಟಿಕೊಂಡದ್ದು ಮುಸ್ಲಿಂ ಮೂಲಭೂತವಾದ ಮತ್ತು ಅವನ್ನು ಹರಡುವ ಸಲಾಫಿ, ವಹಾಬಿ, ಜಮಾತೆ ಇಸ್ಲಾಂ, ಜಮಾತುಲ್ ಮುಸ್ಲಿಂ ಇತ್ಯಾದಿ ತೀವ್ರವಾದಿ ಸಂಘಟನೆಗಳು. ಅವುಗಳ ರಾಜಕೀಯ ರೂಪಗಳೇ 'ಸ್ಲಾಮಿಕ್ ಬ್ರದರ್ ಹುಡ್' ಎಂಬ ಪರಿಕಲ್ಪನೆ ಹಾಗೂ ತೀವ್ರತರ ಇಸ್ಲಾಂನ್ನು ವಾದಿಸುವ 'ಅಲ್ ಖೈದ' ಎಂಬ ಸಂಸ್ಥೆ.

ಇವೆಲ್ಲ ಸೇರಿ ನಡೆಸುವ ಚಟುವಟಿಕೆಗಳನ್ನು 'ಇಸ್ಲಾಮಿಕ್ ಚಳುವಳಿ ಎಂದು ಗುರುತಿಸುವ ಭರದಲ್ಲಿ ಇಸ್ಲಾಂ ಧರ್ಮದ ಸಾಮಾಜಿಕತೆಯನ್ನೇ ರಾಜಕಾರಣ ಎಂದು ಅಪಾರ್ಥ ಮಾಡಿಕೊಂಡು 'ರಾಜಕೀಯ ಇಸ್ಲಾಂ' (Political Islam) ಎಂಬ ಹೊಸ ಸಂಕಥನವನ್ನೇ ಪಶ್ಚಿಮವು ಸೃಷ್ಟಿಸಿತು.

ಇದೇ ಸಂದರ್ಭದಲ್ಲಿ ಭಾರತದಲ್ಲಿ ;ಹಿಂದುತ್ವ'ದ ಚಳುವಳಿ ಆರಂಭವಾಗಿ ಅದರ ಪರಿಣಾಮವಾಗಿ ಅಯೋಧ್ಯಾ, ಮುಂಬೈ ಗೋಧ್ರಾ, ಅಹಮದಾಬಾದ್‌ಗಳಲ್ಲಾದ ಅನಾಹುತಗಳು ಸೇರಿ ಭಾರತದ ಮುಸ್ಲಿಮರ ಮುಂದೆ ಅನೇಕ ಸಂಕಟಗಳನ್ನೂ, ಸವಾಲುಗಳನ್ನೂ ಸೃಷ್ಟಿಸಿತು. ಇವುಗಳಲ್ಲಿ ದೊಡ್ಡ ಸಂಕಟ–ಸವಾಲು ಎಂದರೆ, ಜಾಗತಿಕ ನೆಲೆಯ ರಾಜಕಾರಣ ಸೃಷ್ಟಿಸಿದ 'ರಾಜಕೀಯ ಇಸ್ಲಾಂ' ಸಂಕಥನ'ದಿಂದಾಗಿ ಭಾರತೀಯ ಮುಸ್ಲಿಮರ ಧಾರ್ಮಿಕ ಅಸ್ಮಿತೆಯೂ ರಾಜಕೀಯ ಅಸ್ಮಿತೆಯೂ ಮಿಶ್ರಣಗೊಂಡು ಅವರ ನಿಷ್ಠೆ ಯಾವತ್ತೂ "ಇಸ್ಲಾಂ"ಗಿದೆಯೇ ಹೊರತು ತಾಯ್ನಾಡಿಗೆ ಇಲ್ಲ ಎಂಬ ವಾದ



ಪ್ರಚಲಿತಗೊಂಡದ್ದು. ಇದರಿಂದಾಗಿ ಪ್ರತಿಯೊಬ್ಬ ಮುಸ್ಲಿಂ "ಶಂಕಿತ"ನಾಗುತ್ತಾನೆ. ಮುಸ್ಲಿಂ ತನ್ನ ನಿಷ್ಠೆಯನ್ನು ಆಗಾಗ ಜಗಜ್ಜಾಹೀರು ಮಾಡುತ್ತಲೇ ಇರಬೇಕಾಗುತ್ತದೆ.

ಇದೇ ಸಂದರ್ಭದಲ್ಲಿ ಜಾಗತಿಕ ಮುಸ್ಲಿಂ ಜಗತ್ತಿನಲ್ಲಾದ ಇನ್ನೊಂದು ಬದಲಾವಣೆಯೂ ಗಮನಾರ್ಹ. ಜಾಗತೀಕರಣದ ಫಲವಾಗಿ ಹುಟ್ಟಿಕೊಂಡಸಾಮಾಜಿಕ ತಾಣಗಳು 'ಅರಬ್ ವಸಂತ'ವನ್ನು ಪ್ರಚೋದಿಸಿ ಹಲವು ಸರ್ವಾಧಿಕಾರಿ ಸರಕಾರಗಳನ್ನು ಬದಲಾಯಿಸಲು ಕಾರಣವಾಯಿತು. ಅದೇ ಸುಮಾರಿಗೆ ಪಾಶ್ಚಾತ್ಯ ಆಧುನಿಕತೆಯ ಎದುರು ಮುಸ್ಲಿಂ ಮೂಲಭೂತವಾದಿಗಳಿಂದ ಇಸ್ಲಾಂನ ಶುದ್ಧೀಕರಣದ ಕೂಗು ಎದ್ದು ಹರಡಿತು. ಇದರ ಫಲಶ್ರುತಿಯೇ 'ಮೆಕ್‌ಡೊನಾಲ್ಡ್ ವರ್ಸಸ್ ಜೆಹಾದ್" ಎಂಬ ಭಯಂಕರ ಕಥಾನಕ.

ಇಂದು ಅಲ್ ಹೇ ಅದೀಸ್, ಸಲಾಫಿಗಳು ಪ್ರತಿಪಾದಿಸುವ ಇಸ್ಲಾಂನ ಶುದ್ಧೀಕರಣದ ಯತ್ನ ಮುಸ್ಲಿಮರಿಗೆ ಹತ್ತು ಹಲವು ಸಂಕಟಗಳನ್ನು ಸೃಸಿರುವುದು ಸ್ಪಷ್ಟ. ಈ ಶುದ್ಧೀಕರಣ ಎಲ್ಲಿ ತನಕ ಹೋಗಿದೆ ಎಂದರೆ ಅದು ಮುಸ್ಲಿಂಮರನ್ನು ಸಿನೆಮಾ, ಟ.ವಿ. ನೋಡುವುದನ್ನು ಕೂಡ ವಿರೋಧಿಸುತ್ತದೆ, ಮಹಿಳೆಯರು ಆಧುನಿಕ ಶಿಕ್ಷಣ ಪಡೆಯುವುದನ್ನು ವಿರೋಧಿಸುತ್ತದೆ. ಗೋರಿಗಳ ಪೂಜೆಯನ್ನು



ತಿರಸ್ಕರಿಸುತ್ತದೆ. 'ಫಾತೆಹ' (ಪ್ರಾರ್ಥನೆ)ಯನ್ನು ಕೂಡ ನಿರಾಕರಿಸುತ್ತದೆ, ದೇವರು ಮತ್ತು ವ್ಯಕ್ತಿ ನಡುವೆ ಮಧ್ಯವರ್ತಿಗಳ ಅಸ್ತಿತ್ವವನ್ನು ನಿರಾಕರಿಸುತ್ತದೆ.

ಈ ನಿರಾಕಣೆಯಿಂದಾಗಿ ಅತೀ ದೊಡ್ಡ ಹೊಡೆತ ಬೀಳುವುದು ಸಮನ್ವಯ ಸಂಸ್ಕೃತಿಗೆ ಅಥವಾ ಸೂಫಿ ಪರಂಪರೆಗೆ. ಸೂಫಿ ಪಂಥ ಭಾರತಕ್ಕೆ ಬಂದ ಸಂದರ್ಭದಲ್ಲಿ ಹಲವು ಪಂಥಗಳೊಂದಿಗೆ ಬೆರೆತು ಹೊಸ ಸಮನ್ವಯ ಸಂಸ್ಕೃತಿಯನ್ನು ನಿರ್ಮಿಸಿತು. ಏಕಶಿಲಾ ಖಂಡ ಸಂಸ್ಕೃತಿಯ 'ಪ್ರಭುತ್ವ'ಕ್ಕೆ ಆಘಾತ ನೀಡಿತು. ನಾಥ ಪಂಥ, ಭಕ್ತಿ ಪಂಥೆ ಇತ್ಯಾದಿಗಳು ಈ ಸಮನ್ವಯ ಸಂಸ್ಕೃತಿಯ ಉದಾಹರಣೆಗಳು. ಸೂಫಿ ಪಂಥದೊಳಗೆ ವಿವಿಧ ಪರಂಪರೆಗಳ ಮಿಶ್ರಣ ಅಂತಗತವಾಗಿದೆ. ಅವುಗಳಲ್ಲಿ ಖಲಂದರಿಯಾ, ಚಿಶ್ತಿ, ನಖ್ಶ್ ಬಂದಿ, ಸರ್ರವರ್ದಿಯಾ ಪ್ರಮುಖ. ಅವು ದೇಶದಡೆಯೆಲ್ಲಾ ಜಾತ್ಯತೀತ, ಸುಮಧುರ ಭಾಂಧವ್ಯವನ್ನು ಹರಡುತ್ತಾ ಹೋದವು. ಧಾರ್ನಿಕ ವಿಂಗಡಣೆಯ ಗೆರೆಗಳು ತೆಳುವಾಗುತ್ತಾ ಹೋಗಿ ಜನರ ಮನಸ್ಸು ಈ ವಿಷಯಗಳಲ್ಲಿ ಉದಾರವಾಗುತ್ತಾ ಹೋಯಿತು. ಇದಕ್ಕೊಂದು ಉದಾಹರಣೆ, ಉತ್ತರ ಕರ್ನಾಟಕದಲ್ಲಿ ಬಹಳೆಡೆ ಕಾಣುವ ಹಿಂದೂ ಮತ್ತು ಮುಸ್ಲಿಂ ಎರಡೂ ಹಿನ್ನೆಲೆಗಳನ್ನೂ ಸೂಚಿಸುವ 'ಫಕೀರಪ್ಪ' ಎಂಬ ಹೆಸರುಗಳು. ಇವತ್ತಿನ ಸಂಕಟವೆಂದರೆ ಸೂಫಿ ಸಂತರನ್ನು 'ಇಸ್ಲಾಂ ಶುದ್ದೀಕರಣ'ದ ಯತ್ನದಲ್ಲಿ ಮುಸುಲ್ಮಾನರಲ್ಲವೆಂದು ಹೇಳಲಾಗುತ್ತದೆ. ಇಡೀ ಪರಂಪರೆಯನ್ನು "ಶಿರ್ಕ್" ಎಂದು ವಾದಿಸಲಾಗುತ್ತದೆ. ಈ ಸಂಕಟವನ್ನು ಇನ್ನಷ್ಟು ಹೆಚ್ಚಿಸಿರುವುದು, 'ಹಿಂದುತ್ವ' ಶಕ್ತಿಗಳು ಎಂದೂ ಹೇಳಬಹುದು. ಅದು ಸೂಫಿ ಪರಂಪರೆಯ ಸಮನ್ವಯತೆಯ ಐತಿಹಾಸಿಕತೆಯನ್ನು ನಿರಾಕರಿಸುತ್ತಾ ಬಾಬಾಬುಡನ್‌ಗಿರಿಯಂತಹ ಸಮನ್ವಯತೆಯ ಕೇಂದ್ರಗಳನ್ನು ತನ್ನದನನ್ನಾಗಿಸಿಕೊಳ್ಳಲು ಯತ್ನಿಸುತ್ತಿದೆ. ಹಿಂದುತ್ವದ ಇಂತಹ ಉಪಟಳಗಳಿಂದಾಗಿ ಹಿಂದುಳಿದ ಮುಸ್ಲಿಮರ ಸಂಕಟಗಳು ದ್ವಿಗುಣಗೊಳ್ಳುತ್ತಾ ಹೋಗುತ್ತವೆ.

ಭಾರತದಲ್ಲಿ ಮುಸ್ಲಿಂಮರು ಎದುರಿಸುತ್ತಿರುವ ಮುಖ್ಯ ಬಿಕ್ಕಟ್ಟುಗಳನ್ನು ಈ ರೀತಿಯಾಗಿ ಗುರುತಿಸಬಹುದು. ಮೊದಲನೆಯದಾಗಿ ಸುರಕ್ಷತೆಗೆ ಸಂಬಂದಿಸಿದ್ದು..ಇತ್ತೀಚಿನ ಮುಝಾಫರಪುರ ಗಲಭೆಗಳ ನಂತರ ಮುಸ್ಲಿಂಮರು ಯಾರನ್ನೂ, ಯಾವ ಪಕ್ಷವನ್ನೂ ಕೂಡ ನಂಬದ ಸ್ಥಿತಿಗೆ ಬಂದಿದ್ದಾರೆ. ಗುಜರಾತ್‌ನಂತಹ ರಾಜ್ಯದಲ್ಲಿ ಸುರಕ್ಷತೆಯ ' ಕಾರಣಗಳಿಗಾಗಿ ಬಿಜೆಪಿಗೆ ಮತಹಾಕುವಂಥಹ ಸ್ಥಿತಿ ಉಂಟಾಗಿದೆಯೆಂದರೆ ಏನು ಹೇಳುವುದು? ಇದರ ಪುನಾರವರ್ತನೆಯೇ ಈಗ ಮುಕ್ತಾಯಗೊಂಡಿರುವ ಚುನಾವಣೆಗಳಲ್ಲಿ ಉತ್ತರ ಪ್ರದೇಶದಲ್ಲಿಯೂ ಕಂಡುಬಂದು ಆ ಪಕ್ಷ ಅಧಿಕಾಶರಕ್ಕೆ ಬರುವಂತಾಗಿರುವುದು ಎಂದರೆ ತಪ್ಪಾಗಲಾರದೇನೋ!

ಮಸ್ಲಿಂಮರ ಸಂಕಟಗಳನ್ನು ಇನ್ನಷ್ಟು ಉಲ್ಬಣಗೊಳಿಸಿದ್ದು ಸಾಚಾರ್ ಹಾಗೂ ರಂಗನಾಥ ಮಿಶ್ರ ಸಮಿತಿ ವರದಿಗಳು. ಎಡಪಂಥೀಯ ಸರಕಾರವಾಗಲೀ , ಕಾಂಗ್ರೆಸ್ ಆಗಲಿ ಮಸ್ಲಿಂಮರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತಂದಿಲ್ಲವೆಂಬ ಸತ್ಯ ಬಯಲಾಗಿ ಮುಸ್ಲಿಂರ ತುಷ್ಟೀಕರಣದ ಮಿಥ್ಯೆ ಸ್ಫೋಟಗೊಂಡಿತು. ಇದರ ಫಲಶ್ರುತಿಯೆಂದರೆ ಬಂಗಾಳದಲ್ಲಿ ಮುಸ್ಲಿಂಮರು ಎಡಪಂಥೀಯ ಸರಕಾರವನ್ನು ತಿರಸ್ಕರಿಸಿದ್ದನ್ನು ನೋಡಬಹುದು, ಇವತ್ತು ಬಂಗಾಲದಲ್ಲಿ ಎಡಪಂಥೀಯರು ವಾಪಸು ರಾಜಕೀಯದ ಅಧಿಕಾರಕ್ಕೆ ಬರದ ಸ್ಥಿತಿಗೆ ಬಂದಿದ್ದಾರೆ. ಇದೇ ಸ್ಥಿತಿ ಕಾಂಗ್ರೆಸ್‌ನಂತಹ ಪಕ್ಷಕ್ಕೂ ಈಗ ಬಂದೊದಗಿದೆ. ಹಾಗಾದರೆ ಮುಸ್ಲಿಮರು ತಮ್ಮ ಅಭಿವೃದ್ಧಿಗಾಗಾಗಿ ಯಾರತ್ತ ನೋಡುವುದು?



ಹಾಗಾಗಿ ಈಗ ಮುಸ್ಲಿಮರ ಮುಂದಿರುವ ಎರಡು ಮುಖ್ಯ ಪ್ರಶ್ನೆಗಳೆಂದರೆ,. ಒಂದು: ದಾರಿದ್ರ್ಯದ ಸ್ಥಿತಿಯಿಂದ ಅಭಿವೃದ್ಧಿಶೀಲ ಸಮುದಾಯವಾಗಿ ಹೇಗೆ ಪರಿವರ್ತಿವಾಗುವುದು? ಎರಡು, ಮುಸ್ಲಿಂ 'ಕೇರಿ'ಗಳಿಂದ ಹೇಗೆ ಹೊರಬರುವುದು.ಆರ್ಥಿಕ ಕಾರಣಗಳಿಗಾಗಿ ಮುಸ್ಲಿಂಮರು ಮಾರುಕಟ್ಟೆಯ ವಿವಿಧ ಮಜಲುಗಳಲ್ಲಿ ಸಿಗಬಹುದು, ಮಾರುಕಟ್ಟೆಯಲ್ಲಿ ಅವರು ದೊಡ್ಡ ಶ್ರೀಮಂತರಾಗಿ ನೆಲೆ ನಿಂತಿಲ್ಲ. ವಿಚಿತ್ರವೆಂದರೆ ಭದ್ರತೆ ಕಾರಣಗಳಿಗಾಗಿ ಅವರು ನೆಲೆಸುವುದು ಮುಸ್ಲಿಂ 'ಕೇರಿ'ಗಳಲ್ಲಿ. ಈ ಮೊದಲು ಮುಸ್ಲಿಂ ಕೇರಿಗಳೆಂದೆರೆ :ಮುಸ್ಲಿಂ ಕೊಳಗೇರಿಗಳು.. ಇವತ್ತು ಈ ಕೇರಿಗಳಲ್ಲಿ ಶ್ರೀಮಂತ ಹಾಗೂ ಮಧ್ಯಮ ವರ್ಗದ ಮುಸ್ಲಿಂಮರು ಕೂಡ ಸಿಗುತ್ತಾರೆ. ಮುಸ್ಲಿಮೇತರ ವಸತಿಗಳಲ್ಲಿ ಅವರಿಗೆ ಅವಕಾಶಗಳು ಕಡಿಮೆ. ಇದೇನೂ ಸಣ್ಣ ಸಂಕಟವಲ್ಲ.

ಕೊನೆಯದಾಗಿ ಅಸ್ಮಿತೆ ಮತ್ತು ಅದಕ್ಕೆ ಸಂಬಂಧಿಸಿದಂತೆಯೇ ಇರುವ ಸಾಮಾಜಿಕ–ಆರ್ಥಿಕ ಉನ್ನತಿಯ ಪ್ರಶ್ನೆಗಳು. ಆಧುನಿಕ ಭಾರತದಲ್ಲಿ ಸಾಮಾಜಿಕ ನ್ಯಾಯದ ಫಲ ಪಡೆದು ಉನ್ನತಿ ಹೊಂದಲು ತನ್ನ ಮತಾಂತರ ಪೂರ್ವದ ಐಡೆಂಟಿಟಿಗಳನ್ನು ಹುಡುಕಿಕೊಳ್ಳುವುದು ಒಳ್ಳಯದೇ ಎಂಬ ದ್ವಂದ್ವ.. ಇದು ದ್ವಂದ್ವವೇಕೆಂದರೆ, ಇಸ್ಲಾಂ ಧರ್ಮ ಮತಾಂತರ ಪೂರ್ವದ ಐಡೆಂಟಿಟಿಗಳಾದ ಜಾತಿಗಳನ್ನು ಒಪ್ಪುವುದಿಲ್ಲ. ಆದರೆ ಮತಾಂತರ ಪೂರ್ವದ ಮೌಲ್ಯಗಳನ್ನು ಉಳಿಸಿಕೊಂಡಿರುವ ಎಷ್ಟೋ ಸಮುದಾಯಗಳು ಇವತ್ತು ಕೂಡ ಮುಸ್ಲಿಂಮರಲ್ಲಿವೆ. ವಿಶೇಷವಾಗಿ ಉತ್ತರ ಭಾರತ ಮತ್ತು ಕಾಶ್ಮೀರಗಳಲ್ಲಿ. ಜಾಟ್ ಮುಸ್ಲಿಮರಲ್ಲಿ ಗೋತ್ರ ಪದ್ಧಥಿಯಿದ್ದು, ಅವರಲ್ಲಿ ಸಗೋತ್ರ ವಿವಾಹ ಈಗಲೂ ನಿಷಿದ್ಧ. ಇನ್ನು ಕಾಶ್ಮೀರಿ ಮುಸ್ಲಿಮರ ಹೆಸರುಗಳಲ್ಲಿನ .ಮಿರ್, ಮಿಸ್ರಿ, ಹಂಡೂ ಆಫ, ಭಟ್, ಭಟ್ಕಿ, ಚೌಧುರಿ, ಹಕ್ಸರ್, ಜಾಜು, ಖೇರ್, ಖುನ್ಷ್ರ ಮಹಲ್ದಾರ್, ಮಟ್ಟೂ ಪಂಡಿತ್ ಮುಂತಾದವು ಅವರ ಪೂರ್ವ ಜಾತಿಗಳ ಗುರುತುಗಳೇ ಆಗಿವೆ. ಮುಸ್ಲಿಂಮರಲ್ಲಿ ಜಾತಿಗಳಿವೆ ಎಂದು ಸಾಚಾರ್ ಸಮಿತಿಯೂ ಗುರುತಿಸಿ ಅವುಗಳ ಶ್ರೇಣೀಕರಣದ ಆಧಾರದ ಮೇಲೆ ಕೆಲವು ಶಿಫಾರ್ಸುಗಳನ್ನು ಮಾಡಿದೆ. ಆದರೆ ನಿಜವಾದ ಸವಾಲಿರುವುದು ನಮ್ಮ ಸಂವಿಧಾನದ ಚೌಕಟ್ಟಿನಲ್ಲಿ ಮತ್ತು ಇಸ್ಲಾಂದ ಶುದ್ದೀಕರಣ ಚಳುವಳಿಯ ಎದುರಿನಲ್ಲಿ ಇವನ್ನು ಇಂದಿನ ಹೊಸ ರಾಜಕೀಯ ಸಂದರ್ಭದಲ್ಲಿ ಹೇಗೆ ಅನುಷ್ಠಾನಗೊಳಿಸುಉದು ಎಂಬುದೇ ಆಗಿದೆ.

ಈ ಎಲ್ಲ ಸಂಕಟ–ಸವಾಲುಗಳ ಪೈಕಿಲ್ಲಿ ಅತೀ ದೊಡ್ಡ ಸಂಕಟವೆಂದರೆ ಸಾಂಪ್ರದಾಯಿಕ ಪಡಿಯಚ್ಚುಗಳಾದ "ಕೋಮವಾದಿ "ಭಯೋತ್ಪಾದಕ'" "ಆಧುನಿಕತೆಯ ವಿರೋಧಿ' 'ಮತಾಂದ" ಇತ್ಯಾದಿಗಳಿಂದ ಹೊರತಾದ "ಭಿನ್ನ ಪಡಿಯಚ್ಚುಗಳನ್ನು ರೂಪಿಸಲುಸಾಧ್ಯವೇ? ಅದರಲ್ಲೂ 'ಜಾತ್ಯಾತೀತ",ಆಧುನಿಕ" "ಪ್ರಗತಿಪರ" ಇತ್ಯಾದಿ ಸ್ಟಿರಿಯೋಟೈಪ್ ಗಳನ್ನು ನಿರ್ಮಾಣ ಸಾಧ್ಯವೇ ಎಂಬುದು ಇವುಗಳ ನಿರ್ಮಾಣ ಎಂದರೆ ಹೊಸ ಮಸ್ಲಿಂಮರನ್ನು ನಿರ್ಮಿಸುವುದೆಂದರ್ಥ. 'ಹೊಸ ಮನುಷ್ಯ'ನ ನಿರ್ಮಾಣ ಎಂದರ್ಥ.! *

# ಭಾರತದ ಮುಸ್ಲಿಮರು: ಹೊಸ ದಿಕ್ಕಿನೆಡೆಗೆ?: ಒಂದು ಮಾತುಕತೆ

**ಪ್ರಪಂಚದ ಒಟ್ಟು ಮುಸ್ಲಿಮರ ಸಂಖ್ಯೆಯಲ್ಲಿ ಮೂರನೇ ಭಾಗದಷ್ಟು ಜನ ಮುಸ್ಲಿಮರು ಭಾರತವೊಂದರಲ್ಲೇ ನೆಲೆಸಿದ್ದಾರೆ. ದೇಶವಿಭಜನೆಯಾದಾಗ ಪಾಕಿಸ್ತಾನಕ್ಕೆ ಹೋದ ಮುಸ್ಲಿಮರ ಸಂಖ್ಯೆಗಿಂತ ಹೆಚ್ಚು ಸಂಖ್ಯೆಯ ಜನ ಭಾರತದಲ್ಲಿಯೇ ನೆಲೆಸಲು ನಿರ್ಧರಿಸಿದರು ಆದರೂ ಇಂದಿಗೂ ಅವರು ಬಹುಸಂಖ್ಯಾತ ಸಮುದಾಯಗಳ ನಡುವೆ ಶಾಂತಿಯುತ ಜೀವನ ನೆಡೆಸಲು ಹೆಣಗಾಡುತ್ತಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೧೩ರಷ್ಟಿರುವ ಈ ಸಮುದಾಯಕ್ಕೆ ಉದ್ಯೋಗ, ಶಿಕ್ಷಣ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಸಮನಾದ ಪ್ರಾತಿನಿಧ್ಯ ದೊರಕಿಲ್ಲ. ೨೦೦೬ರ ಒಂದು ಸರ್ಕಾರಿ ಅಂದಾಜಿನ ಪ್ರಕಾರ ಸರ್ಕಾರದ ಪ್ರಮುಖ ಹುದ್ದೆಗಳಲ್ಲಿ ಮುಸ್ಲಿಮರ ಸಂಖ್ಯೆ ಶೇಕಡಾ ೪ರಷ್ಟು ಮಾತ್ರ. ೧೯೯೦ರ ನಂತರ ಸರ್ಕಾರಿ ಸೇವೆಗಳಲ್ಲಿ ನಿಧಾನವಾಗಿ ಮುಸ್ಲಿಮರಿಗೆ ಪ್ರವೇಶ ದೊರಕಿದೆ. ಈಚಿನ ದಿನಗಳಲ್ಲಿ ಬೆರಳೆಣಿಕೆಯಷ್ಟು ಮಂದಿ ಐಟಿ, ಮೀಡಿಯಾ, ಮ್ಯಾನೇಜ್‌ಮೆಂಟ್ ಮೊದಲಾದ ರಂಗಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಲಂಡನ್‌ನಲ್ಲಿ ನೆಲೆಸಿರುವ ಭಾರತೀಯ ಪತ್ರಕರ್ತ ಹಸನ್ ಸುರೂರ್ ಅವರು '*ಭಾರತದ ಮುಸ್ಲಿಂ ವಸಂತ: ಇದರ ಬಗ್ಗೆ ಏಕೆ ಯಾರೂ ಮಾತಾಡುತ್ತಿಲ್ಲ?*'** (India's Muslim Spring : Why nobody is talking about?) **ಎಂಬ ಪುಸ್ತಕವನ್ನು ಬರೆದಿದ್ದಾರೆ. ಹಾಗೆಯೇ ಅಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯದ ಮೊಹಮ್ಮದ್ ಸಜ್ಜಾದ್ ಅವರು 'ಬಿಹಾರದಲ್ಲಿ ಮುಸ್ಲಿಂ ಎಂಬ ಪುಸ್ತಕವನ್ನು ಪ್ರಕಟಣೆಗೆ ಸಿದ್ಧಪಡಿಸಿದ್ದಾರೆ. ಅಲ್‌ಜಝೀರಾ ಟಿ.ವಿ. ವಾಹಿನಿಯ ಸೈಫ್ ಖಾಲಿದ್ ಅವರು ಈ ಇಬ್ಬರು ಲೇಖಕರೊಂದಿಗೆ ನಡೆಸಿದ ಸಂದರ್ಶನದ ಪೂರ್ಣಪಾಠ ಇಲ್ಲಿದೆ.**


ಹಸನ್ ಸುರೂರ್

**ಸೈಫ್ ಖಾಲಿದ್: ಮುಸ್ಲಿಮರಲ್ಲಿ ಸಮಾಜದ ಮುಖ್ಯವಾಹಿನಿಗೆ ಸೇರಬೇಕೆನ್ನುವ ಹಂಬಲ ತೀವ್ರವಾಗಿ ಇದೆಯೇ? ಭಾರತದಲ್ಲಿ ಅದು 'ಮುಸ್ಲಿಮ್ ವಸಂತ' (Muslim Spring) ಎನ್ನುವಷ್ಟರ ಮಟ್ಟಿಗೆ ಬೆಳೆದಿದೆಯೆ?**

**ಹಸನ್ ಸುರೂರ್**: ಅಂತಹ ಹಂಬಲವೇನೋ ಗಟ್ಟಿಯಾಗಿಯೇ ಇದೆ. ಆದರೆ ಇಲ್ಲಿ ಯಾರೂ ಸಹ ಬಾವುಟಗಳನ್ನು ಹಿಡಿದುಕೊಂಡು ಕ್ರಾಂತಿಕಾರಿಗಳ ಹಾಗೆ ಓಡಾಡುತ್ತಿಲ್ಲ. ಹಾಗಾಗಿ ಅದು ನಿರ್ದಿಷ್ಟ ಸ್ವರೂಪವನ್ನು ಪಡೆದುಕೊಂಡಿಲ್ಲ. ಅದು ಮೌನವಾಗಿ ನಡೆಯುತ್ತಿದೆ. ಅದನ್ನು 'ಮುಸ್ಲಿಮ್ ವಸಂತ' ಎಂದು ಕರೆಯಲು ಕಾರಣವೇನೆಂದರೆ, ಈ ಸಮುದಾಯ ತನ್ನ ಯೋಚನಾ ಕ್ರಮದಲ್ಲಿ ಬದಲಾವಣೆಯ ಅಗತ್ಯವನ್ನು ಕೊನೆಗಾದರೂ ಕಂಡುಕೊಂಡಿತಲ್ಲ ಎಂಬ ಕಾರಣಕ್ಕೆ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕಡಿಮೆ ಎಂಬುದು ಬೇರೆ ವಿಷಯ. ತಮ್ಮ ಸಮುದಾಯ ಬಹುಕಾಲದಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಕಾರಣಕ್ಕಾಗಿಯೇ ಇಲ್ಲಿನ ಹೊಸ ಪೀಳಿಗೆಯಲ್ಲಿ ಭಿನ್ನವಾದ ಆಲೋಚನೆಗಳು ಕಾಣಿಸಿಕೊಳ್ಳುತ್ತಿವೆ. ಈ ತಲೆಮಾರು ಸಮುದಾಯದ ಹಿಂದುಳಿಯುವಿಕೆಗೆ ವ್ಯವಸ್ಥೆಯಲ್ಲಿಯೇ ಇರುವ ಮುಸ್ಲಿಮ್ ದ್ವೇಷವೊಂದೇ ಅಲ್ಲ, ಮುಸ್ಲಿಮ್ ನಾಯಕರ ಅಸಮರ್ಥತೆಯೂ ಕಾರಣ ಎಂದು ನಂಬುತ್ತದೆ. ಸಮುದಾಯವು ತನ್ನ ಹಿತವನ್ನು ತಾನೇ ಕಾಪಾಡಿಕೊಳ್ಳುವಷ್ಟು ಸಮರ್ಥವಾಗಿರಬೇಕೇ ಹೊರತು ಅದು ಅಸಮರ್ಥ ಸರ್ಕಾರಗಳು ಮತ್ತು ನಾಯಕರ ಮೇಲೆ ಅವಲಂಬಿತವಾಗಿರಬಾರದು ಎಂದು ಈ ಪೀಳಿಗೆ ಅಪೇಕ್ಷಿಸುತ್ತದೆ.

**ಮೊಹಮ್ಮದ್ ಸಜ್ಜಾದ್**: ನಾನು ಮುಸ್ಲಿಮ್ ಸಮುದಾಯಗಳು ಎಂಬ ಬಹುವಚನ ರೂಪವನ್ನು ಬಳಸಲು ಬಯಸುತ್ತೇನೆ. ಈ ಸಮುದಾಯಗಳಲ್ಲಿ ಬೇರೆ ಬೇರೆ ಬಗೆಯ ಸಾಮಾಜಿಕ-ಆರ್ಥಿಕ ಸ್ತರಗಳಿಗೆ ಸೇರಿದ ಹಲವು ಜಾತಿಗಳು-ಬುಡಕಟ್ಟುಗಳು, ಭಾಷಿಕ-ಪ್ರಾದೇಶಿಕ ಗುಂಪುಗಳೆಲ್ಲವೂ ಸೇರುತ್ತವೆ. ಇಲ್ಲಿ ನಡೆಯುತ್ತಿರುವ ಹೊಸವಿಚಾರ ಮಥನ ಸ್ಪಷ್ಟವಾಗಿ ಕಾಣಿಸುತ್ತಿದೆ. ಈ ಸಮುದಾಯಗಳಿಗೆಲ್ಲ ಸಾಮಾಜಿಕ-ಆರ್ಥಿಕ ಪ್ರಗತಿ ಮತ್ತು ರಾಜಕೀಯ ಸಬಲೀಕರಣಗಳ ಬೆನ್ನೇರಿ ಹೊರಡಬೇಕೆಂಬ ದೊಡ್ಡ ಹಂಬಲವಿದೆ. ೧೯೯೨ರ ನಂತರದ ದಿನಗಳಲ್ಲಿ, ಭಾವುಕ ವಿಷಯಗಳಾದ ಕೋಮು ಗಲಭೆಗಳು, ಮುಸ್ಲಿಂ ವೈಯುಕ್ತಿಕ ಕಾನೂನು, ಉರ್ದು ಭಾಷೆ, ಅಲಿಗಢ್ ಮುಸ್ಲಿಮ್ ವಿಶ್ವವಿದ್ಯಾಲಯದ ಅಸ್ತಿತ್ವದಂತಹ ವಿಷಯಗಳನ್ನು ಇಡೀ ಸಮುದಾಯದ ವಿಷಯಗಳೇನೋ ಎಂಬಂತೆ ಪ್ರತಿಬಿಂಬಿಸುತ್ತ ನಾಯಕರು ತಮ್ಮ ಸ್ವಾರ್ಥ ಸಾಧಿಸಿಕೊಂಡರು ಎಂಬುದನ್ನು ಮುಸ್ಲಿಮರು ನಿಧಾನಕ್ಕೆ ಅರಿತುಕೊಂಡರು.


**ಮೊಹಮ್ಮದ್ ಸಜ್ಜಾದ್**

ಇದರಿಂದಾಗಿ, ಭಾರತದ ಬೇರೆ ಬೇರೆ ಭಾಗಗಳಲ್ಲಿ ಮುಖ್ಯವಾಗಿ ಬಿಹಾರದಲ್ಲಿ ಚಾರಿತ್ರಿಕವಾಗಿ ತುಳಿತಕ್ಕೊಳಗಾದ ಬಿರಾದರಿ ಸಮುದಾಯವು ತನ್ನ ಹಕ್ಕುಗಳಿಗಾಗಿ ಸಂಘಟಿತವಾಗಿ ಎಲ್ಲ ಅಸಮಾನತೆಗಳು ಹಾಗೂ ತಾರತಮ್ಯಗಳ ವಿರುದ್ಧ ಸಾಂವಿಧಾನಿಕ ಹೋರಾಟವನ್ನು ಆರಂಭಿಸಿತು. ಸಮುದಾಯಗಳೊಳಗೇ ನಡೆಯುತ್ತಿರುವ ಬಿಹಾರದ 'ಪಸ್ಮಂದಾ'ದಂತಹ ಚಳುವಳಿಗಳು, ತಮ್ಮ ಮಿತಿಗಳ ನಡುವೆಯೇ, ಸಮುದಾಯಗಳ ಒಳಗೇ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸ್ಥಾಪಿಸಲು ಹಾಗೂ ಸಮಾನ ಪ್ರಾತಿನಿಧ್ಯ ಪಡೆಯಲು ಹೋರಾಟ ನಡೆಸುತ್ತಿವೆ.

**ಮುಸ್ಲಿಮ್ ಸಮುದಾಯದಲ್ಲಿ ನಿಧಾನಕ್ಕೆ ಸಾಂಪ್ರದಾಯಿಕ ಮನೋಭಾವ ಕಡಿಮೆಯಾಗಲಿಕ್ಕೆ ಕಾರಣಗಳೇನು?**

**ಸುರೂರ್**: ತಪ್ಪು ವಿಷಯಗಳಿಗೆ ಪ್ರಾಮುಖ್ಯತೆ ನೀಡಿದ್ದರಿಂದ ತಾವು ಎಲ್ಲರಿಗಿಂತ ಹಿಂದುಳಿದುಬಿಟ್ಟೆವು ಎಂಬ ಅಭಿಪ್ರಾಯ ಇಲ್ಲಿ ನಿಧಾನವಾಗಿಯಾದರೂ ಮೂಡುತ್ತಿದೆ. ಹಾಗಾಗಿ ಈಗ ಎಲ್ಲರಂತೆ ಮುಂದುವರಿಯಬೇಕೆಂದರೆ ತಮ್ಮ ಕಂದಾಚಾರದ ಮನೋಭಾವವನ್ನು ತೊಡೆದುಹಾಕಬೇಕೆಂಬ ವಿಚಾರ ಸ್ಪಷ್ಟವಾಗುತ್ತಿದೆ.

**ಸಜ್ಜಾದ್**: ಕ್ರಮೇಣವಾಗಿಯಾದರೂ ಶಿಕ್ಷಿತ ಮಧ್ಯಮವರ್ಗದ ಸಂಖ್ಯೆ ಮುಸ್ಲಿಮ್ ಸಮುದಾಯಗಳಲ್ಲಿ ಹೆಚ್ಚಾಗುತ್ತಿರುವುದು ಸ್ವಾತಂತ್ರ್ಯೋತ್ತರ ಭಾರತದ ಪ್ರಮುಖ ಬೆಳವಣಿಗೆಗಳಲ್ಲೊಂದಾಗಿದೆ. ಭೂ ಸುಧಾರಣೆಗಳು, ವಿಪುಲವಾದ ಶೈಕ್ಷಣಿಕ ಸೌಲಭ್ಯಗಳು, ಆರೋಗ್ಯ, ಸಮಾಜ ಕಲ್ಯಾಣ ಕಾರ್ಯಕ್ರಮಗಳು, ೧೯೮೦ರ ಮುಕ್ತ ಪಾಸ್‌ಪೋರ್ಟ್ ನೀತಿಯಿಂದ ಖಾರಿ ರಾಷ್ಟ್ರಗಳಲ್ಲಿ ತೆರೆದುಕೊಂಡ ಉದ್ಯೋಗಾವಕಾಶಗಳು, ಮಂಡಲ್ ವರದಿಯಿಂದಾಗಿ ಹಲವು ಮುಸ್ಲಿಮ್ ಜಾತಿಗಳಿಗೆ ಸಿಕ್ಕ ಉದ್ಯೋಗಾವಕಾಶಗಳು-ಇವೆಲ್ಲ ಸ್ವತಂತ್ರ ಭಾರತದ ಪ್ರಮುಖ ಸಾಧನೆಗಳಾಗಿವೆ. ಇವುಗಳಿಂದಾಗಿ ಮುಸ್ಲಿಮರಲ್ಲಿ ಎಲ್ಲರೊಂದಿಗೆ ಬೆರೆಯುವ ಮನೋಭಾವ, ಸಹಕಾರ ಭಾವನೆ, ಸರ್ಕಾರ ಮತ್ತು ಸಂವಿಧಾನದ ಬಗ್ಗೆ ನಂಬಿಕೆಯ ಭಾವಗಳು ಹೆಚ್ಚಾದವು.

**ಹೊಸ ತಲೆಮಾರಿನ ಮುಸ್ಲಿಮರು ಬಹಳ ಧರ್ಮಭೀರುಗಳಂತೆ ಕಂಡರೂ ಅವರು ಅಷ್ಟೇ ಸೆಕ್ಯುಲರ್ ಆಗಿಯೂ, ಉದಾರವಾದಿಗಳೂ ಆಗಿದ್ದಾರೆ. ಯಾಕೆ ಮುಸ್ಲಿಮರ ಉಡುಗೆ ತೊಡುಗೆಗಳು-ನಡೆನುಡಿಗಳು ಸಾರ್ವಜನಿಕ ಚರ್ಚೆಯ ವಸ್ತುಗಳಾಗಿವೆ? ಇದನ್ನು ಹೇಗೆ ಪರಿಹರಿಸಬೇಕು?**

**ಸುರೂರ್:** ಪಾಶ್ಚಿಮಾತ್ಯ ದೇಶಗಳಲ್ಲಿ ೯/೧೧ ನ ಘಟನೆಯ ನಂತರ, ಹೊಸ ತಲೆಮಾರಿನ ಮುಸ್ಲಿಮರು ತಮ್ಮ ಧಾರ್ಮಿಕ 'ಗುರುತು'ಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದನ್ನು ಎಲ್ಲೆಡೆ ಕಾಣಬಹುದು. ಇದು 'ಕಪ್ಪುತನ'ವನ್ನು ಪ್ರತಿಭಟನೆಯ ಸಂಗತಿಯಾಗಿ ಬಳಸಿದ ಅಮೆರಿಕಾದ ಕಪ್ಪು ಜನಾಂಗಗಳ ಮಾದರಿಯಲ್ಲಿಯೇ ಇದೆ. ವೈಯುಕ್ತಿಕವಾಗಿ ನನಗೆ ನನ್ನ ಧಾರ್ಮಿಕ ಅಥವಾ ಸಾಂಸ್ಕೃತಿಕ ಗುರುತನ್ನು ಪ್ರದರ್ಶಿಸುವುದರಲ್ಲಿ ಆಸಕ್ತಿ ಇಲ್ಲವಾದರೂ, ಇದರಿಂದ ಆ ಜನಾಂಗಕ್ಕೆ ವೈಚಾರಿಕವಾಗಿ ಆಲೋಚಿಸಲು ಅಡ್ಡಿಯಾಗದೇ ಇದ್ದಲ್ಲಿ, ನಾನು ಇನ್ನೊಬ್ಬರು ಏನು ತೊಡಬೇಕು–ಬಿಡಬೇಕು ಎಂಬುದರ ಬಗ್ಗೆ ಹೇಳಲು ಯಾವ ಅಧಿಕಾರವನ್ನೂ ಪಡೆದಿಲ್ಲ. ನನ್ನ ದೃಷ್ಟಿಯಲ್ಲಿ ೯/೧೧ ನ ನಂತರ ಉಂಟಾದ 'ಇಸ್ಲಾಂ ಭಯ'ದ ಕಾರಣಕ್ಕೆ ಒಂದು ಫ್ಯಾಶನ್ನಿನ ರೀತಿಯಲ್ಲಿ ಈ ಶೈಲಿ ಆರಂಭಗೊಂಡಿದ್ದರೆ, ಅದು ಇಂದಲ್ಲ ನಾಳೆ ಇಲ್ಲವಾಗುತ್ತದೆ.

**ಸಜ್ಜಾದ್:** ತನ್ನ ಧರ್ಮಕ್ಕೆ ತಾನು ಬದ್ಧನಾಗಿದ್ದು ಅದಕ್ಕನುಗುಣವಾಗಿ ಕೆಲವು ಧಾರ್ಮಿಕ ಆಚರಣೆಗಳನ್ನು ಯಾರಾದರೂ ಆಚರಿಸುತ್ತಿದ್ದರೆ, ಅದಕ್ಕೆ ಸಾಂಪ್ರದಾಯಿಕತೆ, ಅವೈಚಾರಿಕತೆ, ದೇಶಭಕ್ತಿಗೆ ವ್ಯತಿರಿಕ್ತ ನಡವಳಿಕೆ ಎಂಬ ಹಣೆಪಟ್ಟಿಯನ್ನು ಹಚ್ಚಬೇಕಾಗಿಲ್ಲ. ಮೂಲತಃ ಧರ್ಮಗಳು ಸಾಂಪ್ರದಾಯಿಕ ಮನೋಭಾವವನ್ನಾಗಲೀ, ತನ್ನ ಧರ್ಮಕ್ಕೆ ಸೇರದವರನ್ನು ದ್ವೇಷಿಸುವುದನ್ನಾಗಲೀ ಕಲಿಸುವುದಿಲ್ಲ. ಈಚಿನ ದಿನಗಳಲ್ಲಿ ಕೆಲವು ಅಲ್ಪಸಂಖ್ಯಾತ ಸಮುದಾಯಗಳು ಉದಾರವಾದಿ ಆರ್ಥಿಕತೆ–ಜಾಗತೀಕರಣದ ಕಾರಣದಿಂದಾಗಿ ತಮ್ಮ ಧಾರ್ಮಿಕ, ಸಾಂಸ್ಕೃತಿಕ ಅಸ್ಮಿತೆಗೆ ಹಾನಿಯಾಗಿದೆ ಎಂದು ಭಾವಿಸುತ್ತವೆ. ಭಾರತದಲ್ಲಿ ಗಾಂಧಿ , ಮೌಲಾನಾ ಆಜಾದ್ ಮೊದಲಾದವರು ತಮ್ಮ ಧಾರ್ಮಿಕ ಆಚರಣೆಗಳು ಮತ್ತು ನಂಬಿಕೆಗಳನ್ನು ಬಹಳ ಶ್ರದ್ಧೆಯಿಂದ ಆಚರಿಸುತ್ತಲೇ, ಬಹುತ್ವದ–ಸಹಬಾಳ್ವೆಯ ರಾಜಕಾರಣವನ್ನು ಪ್ರತಿಪಾದಿಸುತ್ತ ಬಂದಿದ್ದರು.

**' ಮುಲ್ಲಾಗಳು ಮತ್ತು ಮಾರ್ಕ್ಸಿಸ್ಟರು' ಎಂಬ ಪದಪುಂಜಗಳನ್ನು ಬಳಸುವುದು ಎಷ್ಟು ಸರಿ? ಮುಸ್ಲಿಮರ ಹಿಂದುಳಿಯುವಿಕೆಗೆ ಮುಲ್ಲಾಗಳೊಬ್ಬರೇ ಕಾರಣವೆ?**

**ಸುರೂರ್:** ನಾನು ಕೇವಲ ಮುಲ್ಲಾಗಳನ್ನು ಮಾತ್ರ ದೂಷಿಸುವುದಿಲ್ಲ. ಮುಖ್ಯವಾಗಿ ನನ್ನ ಟೀಕೆ ಇರುವುದು, ಯಾವುದರ ಬಗ್ಗೆಯೂ ಬದ್ಧತೆಯಿಲ್ಲದೆ ವರ್ತಿಸುವ ಪ್ರಗತಿಪರ ಮುಸ್ಲಿಮರ ಬಗ್ಗೆ. ತಮ್ಮ ಸಮುದಾಯದಿಂದ ಸಂಪೂರ್ಣವಾಗಿ ವಿಮುಖವಾಗಿರುವ ಇಂಥವರಿಂದ ಸೃಷ್ಟಿಯಾದ ನಿರ್ವಾತವನ್ನು ಮುಲ್ಲಾಗಳು–ಸಮಯಸಾಧಕ ರಾಜಕಾರಣಿಗಳು ಆಕ್ರಮಿಸಿಕೊಂಡು ಎಲ್ಲ ಬಗೆಯ ಅನಾಹುತಗಳಿಗೆ ಕಾರಣವಾಗಿದ್ದಾರೆ.

**ಸಜ್ಜಾದ್:** ಬುದ್ಧಿಜೀವಿ ವಲಯಗಳ ಕುರಿತು ಪರಿಪೂರ್ಣ ತಿಳುವಳಿಕೆಯಿಲ್ಲದವರ ಕಾರಣದಿಂದ ಇಂಥ ತಪ್ಪು ಗ್ರಹಿಕೆಗಳು ಸೃಷ್ಟಿಯಾಗುತ್ತವೆ. ಚುನಾವಣೆಗಳ ಸಂದರ್ಭದಲ್ಲಿ ಬಹುಸಂಖ್ಯಾತ ಕೋಮುವಾದಿ ರಾಜಕೀಯ ಪಕ್ಷಗಳು ಇಂಥ ತಪ್ಪು ಗ್ರಹಿಕೆಗಳನ್ನೇ ಬಂಡವಾಳವನ್ನಾಗಿ ಬಳಸಿಕೊಳ್ಳುತ್ತವೆ. ಮತಾಂಧತೆ ಕೇವಲ ಮುಲ್ಲಾಗಳಿಗೆ ಮಾತ್ರ ಸೀಮಿತವಾಗಿಲ್ಲ. ಪ್ರತ್ಯೇಕೀಕರಣ–ಸಾಂಪ್ರದಾಯಿಕತೆಗಳು ಮುಲ್ಲಾಗಳಿಂದಾಗಲೀ, ಅಲ್ಪಸಂಖ್ಯಾತರಿಂದಾಗಲೀ ಮಾತ್ರ ಸೃಷ್ಟಿಯಾದ ಸಮಸ್ಯೆಗಳಲ್ಲ. ಸತ್ಯವೇನೆಂದರೆ, ಸುಶಿಕ್ಷಿತ–ಆಧುನಿಕ ಮುಸ್ಲಿಮ್ ನಾಯಕರಿಗಿಂತ ಮುಲ್ಲಾಗಳೇ (ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ)ಸಮುದಾಯದ ಸಾಮಾನ್ಯ ಜನರ ಜೊತೆ ಹುಟ್ಟಿನಿಂದ ಸಾವಿನವರೆಗೂ ಜೊತೆಯಾಗಿದ್ದು ಅವರ ಏಳುಬೀಳುಗಳಿಗೆ ಸಾಕ್ಷಿಯಾಗಿದ್ದಾರೆ.

ವಸಾಹತುಶಾಹಿ ವಿರೋಧ ಹಾಗೂ ಕೋಮುವಾದಿ ಪ್ರತ್ಯೇಕತಾವಾದದ ವಿರೋಧವನ್ನು ಪ್ರಗತಿಪರ ರಾಜಕಾರಣದ ಮಾದರಿಯೆಂದು ಕರೆಯುವುದಾದರೆ, ದೇವಬಂದ್‌ನ ಮುಲ್ಲಾಗಳು ವಸಾಹತುಶಾಹಿ ಮತ್ತು ಪ್ರತ್ಯೇಕತಾವಾದವನ್ನು ವಿರೋಧಿಸುವ ಮೂಲಕ ಮುಸ್ಲಿಮ್ ಲೀಗ್‌ನ ಮುಲ್ಲಾಗಳಲ್ಲದ ಆಧುನಿಕ–ಸುಶಿಕ್ಷಿತ ನಾಯಕರಿಗಿಂತ ಹೆಚ್ಚು ಆರೋಗ್ಯಕರ ರಾಜಕಾರಣದ ಮಾದರಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ.



**ಮುಸ್ಲಿಮ್ ರಾಜಕಾರಣದ ಗುರಿ ತಮ್ಮ ಸಮುದಾಯದ ಭದ್ರತೆಯ ಪ್ರಶ್ನೆಯನ್ನು ಹೊರತುಪಡಿಸಿ, ಶಿಕ್ಷಣ, ಉದ್ಯೋಗಾವಕಾಶಗಳು, ಆರೋಗ್ಯ ಮೊದಲಾದವುಗಳ ಕಡೆ ಹರಿಯಲೇ ಇಲ್ಲ. ಕೋಮುಗಲಭೆಯ ವಿಷಯಗಳು ಸಮುದಾಯದ ಮೂಲಭೂತ ಅಗತ್ಯಗಳನ್ನು ಹೇಗೆ ನಾಶಮಾಡಿದವು?**

**ಸಜ್ಜಾದ್:** ಗಲಭೆಗಳಿಗೆ ಕಾರಣರಾದವರನ್ನು ಶಿಕ್ಷಿಸದೇ ಇರುವುದು ಇಂಡಿಯಾದ ಪ್ರಜಾಪ್ರಭುತ್ವ ಹಾಗೂ ನ್ಯಾಯವ್ಯವಸ್ಥೆಗೆ ದೊಡ್ಡ ಕಳಂಕವಾಗಿ ಪರಿಣಮಿಸಿದೆ. ನಿರಂತರ ಕೋಮುಗಲಭೆಗಳಿಂದ ಜೀವಭಯ ಮತ್ತು ಆಸ್ತಿಪಾಸ್ತಿಯ ರಕ್ಷಣೆಯ ವಿಷಯಗಳೇ ಪ್ರಮುಖವಾಗಿ ಮುಸ್ಲಿಮ್ ಸಮುದಾಯ ದೇಶದ ಇತರ ಪ್ರಜೆಗಳಂತೆ ತಮ್ಮ ಹಕ್ಕುಗಳಿಗಾಗಿ ಹೋರಾಡುವಂತಾಗದೆ, ಕೇವಲ ಓಟ್‌ಬ್ಯಾಂಕ್ ಆಗಿ ಉಳಿದು ಪ್ರಗತಿಪರರು ಮತ್ತು ಸಂಪ್ರದಾಯಸ್ಥರಿಬ್ಬರಿಗೂ ದಾಳವಾಗಿ ಬಳಕೆಯಾಗುತ್ತಿರುವುದು ದುರಂತದ ಸಂಗತಿ. ಕ್ರಾಂತಿಕಾರಿ ರಾಜಕಾರಣ ಮತ್ತು ಭಯೋತ್ಪಾದನಾ ಚಟುವಟಿಕೆಗಳು ಕೇವಲ ಮುಸ್ಲಿಮರಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಒಂದು ಕಡೆ ಬಹುಸಂಖ್ಯಾತ ಬಲಪಂಥೀಯ ಹಿಂದೂಗಳ ಭಯೋತ್ಪಾದನೆ;ಇನ್ನೊಂದು ಕಡೆ, ಉದಾರವಾದಿ ಆರ್ಥಿಕತೆ–ಜಾಗತೀಕರಣಗಳ ಕಾರಣದಿಂದ ಕಾರ್ಪೋರೇಟ್ ಶಕ್ತಿಗಳು ನೆಲ(ಭೂಮಿ–ಗಣಿಗಳು), ಜಲ, ಕಾಡುಗಳನ್ನು ನಾಶಮಾಡುತ್ತ ಸಾವಿರಾರು ಜನರನ್ನು ನಿರ್ವಸಿತರನ್ನಾಗಿಸುತ್ತಿವೆ. ಇದರಿಂದಾಗಿ ದೇಶದ ಬಡ ರೈತರು ಮತ್ತು ಬುಡಕಟ್ಟು ಸಮುದಾಯಗಳು ನೆಲೆಸಿರುವ ಕಡೆ ನಕ್ಸಲೀಯರು ನಡೆಸುತ್ತಿರುವ ಎಡಪಂಥೀಯ ಕ್ರಾಂತಿಕಾರಿ ಚಳುವಳಿಗಳು ಗಟ್ಟಿಯಾಗುತ್ತಿವೆ. ಹಾಗಿದ್ದರೂ ಟಾಡಾ, ಪೋಟಾದಂಥ ಕ್ರೂರ ಕಾನೂನುಗಳ ಅಡಿಯಲ್ಲಿ ಬಂಧಿಸಲಾದ ಅಪರಾಧಿಗಳ ಪೈಕಿ ಮುಸ್ಲಿಮರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ದುರದೃಷ್ಟಕರ.

**ಗುಜರಾತಿನ ಭೀಕರ ಕೋಮುಗಲಭೆಗಳಿಗೆ ಕಾರಣವಾದ ಬಿಜೆಪಿಯ ಪ್ರಧಾನಮಂತ್ರಿ ಅಭ್ಯರ್ಥಿ ನರೇಂದ್ರ ಮೋದಿಯನ್ನು ಒಪ್ಪಿಕೊಳ್ಳುವ ಮೂಲಕ ಮುಸ್ಲಿಮ್ ಸಮಾಜ ತನ್ನ ಬುದ್ಧಿವಂತಿಕೆಯನ್ನು ತೋರಿಸುತ್ತಿದೆಯೆ? ಅಥವಾ ಇದು ರಾಜಕೀಯವಾಗಿ ಅಸಹಾಯಕವಾಗಿರುವ ಸ್ಥಿತಿಯ ಸಂಕೇತವೇ?**

**ಸುರೂರ್:** ಎರಡೂ ನಿಜ. ವೈಯುಕ್ತಿಕ ನೆಲೆಯಲ್ಲಿ ಬೇರೆ ಯಾರೋ ಹೇಳಿದ್ದನ್ನು ಕೇಳದೆ ತಮಗೆ ಬೇಕಾದ್ದನ್ನು ಮಾಡಲು ಮುಸ್ಲಿಮರು ಸ್ವತಂತ್ರರಾಗಿದ್ದಾರೆ. ಆದರೆ ಮೋದಿಯನ್ನು ಲೆಕ್ಕಾಚಾರದ ದೃಷ್ಟಿಯಿಂದ ಬೆಂಬಲಿಸಬೇಕಾದ ಸಂದರ್ಭ ಬಂದರೆ ಆಗ ಅವರು ತಮ್ಮ ಒಳಮನಸ್ಸು ಏನು ಹೇಳುತ್ತದೆ ಎಂಬುದನ್ನು ಆಲಿಸಬೇಕು. ಮುಸ್ಲಿಮರು ತಮ್ಮ ಮತವನ್ನು ಮೋದಿಗೆ ನೀಡುವುದೆಂದರೆ ಗುಜರಾತಿನಲ್ಲಿ ಬಾಳಿ ಬದುಕಬೇಕೆಂದರೆ ಅವರಿಗೆ ಬೇರೆ ಯಾವ ಆಯ್ಕೆಯೂ ಇಲ್ಲ ಎಂದು ಅರ್ಥ. ಒಂದು ರೀತಿಯಲ್ಲಿ ತಮ್ಮ ಸುರಕ್ಷತೆಗಾಗಿ ಒಬ್ಬ ಕಡುವೈರಿಯ ಜೊತೆ ಕೈಜೋಡಿಸುವುದು ಎಂದರ್ಥ.

**ಸಜ್ಜಾದ್:** ಲೆಕ್ಕಾಚಾರದ ದೃಷ್ಟಿಯಿಂದ ಮುಸ್ಲಿಮರು ನರೇಂದ್ರ ಮೋದಿಗೆ ಬೆಂಬಲ ನೀಡುವುದಾದರೆ, ಅದು ಪರ್ಯಾಯಗಳಿಲ್ಲದ ಅಸಹಾಯಕ ರಾಜಕೀಯ ಪರಿಸ್ಥಿತಿಯೊಂದನ್ನು ಸೂಚಿಸುತ್ತದೆ. ಬಹುಸಂಖ್ಯಾತ ಕೋಮುಗಳ ಕೋಮುವಾದೀ ಕಾರ್ಯಕ್ರಮಗಳಿಗೆ ಅಲ್ಪಸಂಖ್ಯಾತ ಸಮುದಾಯವೊಂದು ಹೇಗೆ ಬಲಿಯಾಗುತ್ತದೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ. ಇಂತಹ ಅಸಹಾಯಕತೆ

ಮುಂಬರುವ ದಿನಗಳಲ್ಲಿ ಭೀಕರ ಪರಿಣಾಮಗಳನ್ನು ಉಂಟುಮಾಡಬಹುದು.

**ಮಾಧ್ಯಮಗಳಲ್ಲಿ ಮುಸ್ಲಿಮರನ್ನು 'ಫತ್ವಾಖೋರರು' ಮತ್ತು 'ಪುಸ್ತಕಗಳನ್ನು ಸುಡುವ ಮೂರ್ಖರು' ಎಂಬಂತೆ ಮತ್ತೆಮತ್ತೆ ಬಿಂಬಿಸುವುದರಿಂದ ಈ ಸಮುದಾಯದ ಅಸ್ತಿತ್ವಕ್ಕೆ ಧಕ್ಕೆಯಾಗಿದೆಯೆ?**

**ಸುರೂರ್**: ನಿಜ. ನನ್ನ ಪುಸ್ತಕದಲ್ಲಿ ಮುಸ್ಲಿಮ್ ಸಮುದಾಯದಲ್ಲಿರುವ ವೈವಿಧ್ಯತೆಯನ್ನು ಎತ್ತಿಹಿಡಿಯಲು ಪ್ರಯತ್ನಿಸಿದ್ದೇನೆ. ಮಾಧ್ಯಮಗಳಲ್ಲಿ ಎಲ್ಲ ಮುಸ್ಲಿಮರನ್ನು ಒಂದೇ ಪಡಿಯಚ್ಚಿನ ರೂಪಗಳೆಂಬಂತೆ ತೋರಿಸುವುದನ್ನು ನಾನು ವಿರೋಧಿಸುತ್ತೇನೆ.

**ಸಜ್ಜಾದ್**: ಎಲ್ಲ ಮುಸ್ಲಿಮರನ್ನು ಒಂದೇ ಬಗೆಯ ಸಿದ್ಧಮಾದರಿಯಲ್ಲಿ ತೋರಿಸುವುದು, ಅದಕ್ಕೆ ಕಾರಣವಾಗಿರುವವರ ಮನಸ್ಸಿನಲ್ಲಿನ ಆಳದ ಪೂರ್ವಾಗ್ರಹ, ಕುತಂತ್ರ ಅಥವಾ ಮಾಹಿತಿಯ ಕೊರತೆಯನ್ನು ಸೂಚಿಸುತ್ತದೆ. ಬಹಳ ಸಾರಿ ಮಾಧ್ಯಮಗಳು ತಾವು ಈಗಾಗಲೇ ಜನಪ್ರಿಯಗೊಳಿಸಿರುವ ಸಿದ್ಧನಿರೂಪಗಳನ್ನು ಇನ್ನಷ್ಟು ಚಲಾವಣೆಗೆ ತರುತ್ತವೆಯೇ ವಿನಾ ಹೊಸದನ್ನು ಯೋಚಿಸುವುದಿಲ್ಲ. ದೇಶವಿಭಜನೆಯ ಘಟನೆಗಳನ್ನು ಇತಿಹಾಸವನ್ನು ಬರೆಯುವಾಗ ೧೯೩೭-೪೭ರ ಅವಧಿಯಲ್ಲಿ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿದ ಮುಸ್ಲಿಮ್ ನಾಯಕರ ಬಗ್ಗೆ ಮಾಧ್ಯಮಗಳಿರಲಿ, ದೊಡ್ಡ ಪಂಡಿತರು-ಇತಿಹಾಸಕಾರರೂ ಸಹ ಬರೆಯಲಿಲ್ಲ. ಈಗ ಸ್ಥಿತಿ ಬದಲಾಗಿದೆ. 'ಪುಸ್ತಕಗಳನ್ನು ಸುಡುವ ಮೂರ್ಖರು' ಮುಸ್ಲಿಮರಲ್ಲಿ ಮಾತ್ರವಲ್ಲ ಹಿಂದೂಗಳಲ್ಲಿಯೂ ಇದ್ದಾರೆ. ಇತ್ತೀಚೆಗೆ ಪೆಂಗ್ವಿನ್ ಪ್ರಕಾಶನ ಪ್ರಕಟಿಸಿದ ಹಿಂದೂಧರ್ಮದ ಬಗೆಗಿನ ಪುಸ್ತಕ ಕುರಿತು ನಡೆದ ವಿವಾದವನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ.

**ಮುಸ್ಲಿಮರಲ್ಲಿರುವ ಉಚ್ಚ ವರ್ಗದವರು ಪಾಕಿಸ್ತಾನದ ಸೃಷ್ಟಿಗೆ ಕಾರಣರಾದರು ಎಂಬುದು ಬಹಳ ಸರಳೀಕೃತವಾದ ಅಭಿಪ್ರಾಯವಲ್ಲವೆ? ಇದಕ್ಕೆ ಪರೋಕ್ಷವಾಗಿ ಕಾರಣರಾದ ಭಾರತೀಯ ಕಾಂಗ್ರೆಸ್‌ನ ಕೋಮುವಾದಿಗಳ ಕುರಿತು ನಿಮ್ಮ ಅಭಿಪ್ರಾಯವೇನು?**

**ಸುರೂರ್**: ದೇಶ ವಿಭಜನೆಯ ಬಗೆಗಿನ ಕಾರಣಗಳನ್ನು ನನ್ನ ಪುಸ್ತಕದಲ್ಲಿ ಚರ್ಚಿಸಿಲ್ಲ. ನನ್ನ ಮುಖ್ಯ ವಾದವೇನೆಂದರೆ, ಮುಸ್ಲಿಮರಲ್ಲಿರುವ ಉಚ್ಚ ವರ್ಗದವರು ಪಾಕಿಸ್ತಾನಕ್ಕೆ ಹೋದದ್ದರಿಂದಲೇ, ಭಾರತದಲ್ಲಿ ಸಾಮಾನ್ಯ ಮುಸ್ಲಿಮರು ಉಳಿದರು ಅಂತ.

**ಸಜ್ಜಾದ್**: ಭಾರತೀಯ ಇತಿಹಾಸದಲ್ಲಿ ದೇಶ ವಿಭಜನೆಯ ಕುರಿತಾದ ಈ ಪೂರ್ವಾಗ್ರಹವನ್ನು ನನ್ನ ಮುಂಬರುವ ಎರಡು ಪುಸ್ತಕಗಳಲ್ಲಿ ಸಾಕಷ್ಟು ಆಧಾರಗಳೊಂದಿಗೆ ಚರ್ಚಿಸಲಿದ್ದೇನೆ. ವಾಸ್ತವವಾಗಿ ದೇಶ ವಿಭಜನೆಯು ಬ್ರಿಟಿಶ್ ವಸಾಹತುಶಾಹಿಯ ಕುಮ್ಮಕ್ಕಿನಿಂದ ಬೇರೆ ಬೇರೆ ಧರ್ಮದ ಕೋಮುವಾದಿಗಳ ನಡುವೆ ನಡೆದ ಸ್ಪರ್ಧೆಯ ಫಲ. ಕೋಮುವಾದ ಎಂಬುದು ಕೇವಲ ಮುಸ್ಲಿಮ್ ಲೀಗ್, ಹಿಂದೂ ಮಹಾಸಭಾ, ಆರ್.ಎಸ್.ಎಸ್.ನಂತಹ ಕೋಮುವಾದಿ ಸಂಘಟನೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಕಾಂಗ್ರೆಸ್‌ನ ಪ್ರಾದೇಶಿಕ ಮತ್ತು ಜಿಲ್ಲಾವಾರು ನಾಯಕರು ಪ್ರತ್ಯೇಕತಾವಾದ-ಕೋಮುವಾದದ ಬೆಳವಣಿಗೆಗೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ.

ಹಾಗಿದ್ದರೂ ಕಾಂಗ್ರೆಸ್‌ನಲ್ಲಿದ್ದ ಹಿರಿಯ ಸೆಕ್ಯುಲರ್ ನಾಯಕರು ತಮ್ಮ ಪಕ್ಷ ಸಂಪೂರ್ಣವಾಗಿ ಕೋಮುವಾದವನ್ನು ಒಪ್ಪಿಕೊಳ್ಳದಂತೆ ತಡೆದರು. ಮತ್ತು ಭಾರತವನ್ನು ಒಂದು ಹಿಂದೂ ಫ್ಯಾಸಿಸ್ಟ್ ರಾಷ್ಟ್ರವಾಗದೇ ಇರುವಂತೆ ನೋಡಿಕೊಂಡರು. ಹಾಗೆಯೇ ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ಇತರ ಬಲಹೀನವರ್ಗಗಳಿಗೆ ಹಲವು ಬಗೆಯ ರಕ್ಷಣೆಗಳು ದೊರಕುವಂತೆ ನಮ್ಮ ಸಂವಿಧಾನವನ್ನು ರೂಪಿಸಿದರು.

(ಕನ್ನಡಕ್ಕೆ: **ಎಸ್.ಸಿರಾಜ್ ಅಹಮದ್**)

(ಕೃಪೆ: **ಜನತಾ**, ಮಾರ್ಚ್, ೯, ೨೦೧೪)

# ತತ್ವ, ದೇಶ, ಪಂಥ, ಮಹಿಳೆ ಮತ್ತು ಭಾಷೆ: ಮೂರು ಪ್ರಶ್ನೋತ್ತರಗಳು



**೧. ಇಸ್ಲಾಂ ಒಂದು ಧರ್ಮವಾಗಿ ತನ್ನ ತಾತ್ವಿಕತೆಯಲ್ಲೇ ಮತಾಂಧತೆಯನ್ನು ಪೋಷಿಸುಸುತ್ತದೆ ಎಂಬ ಭಾವನೆ ಮುಸ್ಲಿಮೇತರರಲ್ಲಿ ಇದ್ದಂತಿದೆ. ಇದರ ಬಗ್ಗೆ ನೀವೇನು ಹೇಳುವಿರಿ? ಇದಕ್ಕೆ ಕಾರಣಗಳೇನಿರಬಹುದು?**

ಈ ಭಾವನೆ ಎಲ್ಲ ಮುಸ್ಲಿಮೇತರರಲ್ಲಿ ಇಲ್ಲ. ಅರೇಬಿಯಾ ಅನಾಗರಿಕರ ಬೀಡಾಗಿತ್ತು. ಅಲ್ಲಿ ಇಸ್ಲಾಂ ಒಂದು ಅಭೂತಪೂರ್ವ ಆಂದೋಲನವನ್ನೇ ಹುಟ್ಟುಹಾಕಿತು. ಆದರೆ ಆಂದೋಲನದ ಆಶಯಗಳು ಕೆಲವೇ ವರ್ಷಗಳಲ್ಲಿ ಮಣ್ಣುಗೂಡಿದ್ದು ಏಕೆ ಎಂದು ತಿಳಿದುಕೊಳ್ಳು ಮುಸ್ಲಿಂ ಬುದ್ಧಿಜೀವಿಗಳು ತೀರ ಇತ್ತೀಚಿನವರೆಗೆ ಮುಂದೆ ಬರಲೇ ಇಲ್ಲ. ಇನ್ನಿತರ ಧರ್ಮಗಳಂತೇ ಇಸ್ಲಾಂ ಧರ್ಮ ಸಹ ಪ್ರಭುತ್ವಕ್ಕೆ ಒಂದು ಅತ್ಯಂತ ಶಕ್ತಿಶಾಲಿ 'ಸೈನಿಕ ಶಕ್ತಿ'ಯಾಗಿ ಪರಿಣಮಿಸಿತು. ಮುಸ್ಲಿಂ ಸಮುದಾಯದಲ್ಲಿ ವೈಚಾರಿಕತೆ ಬೆಳೆಯುವುದೇ ಸಾಧ್ಯವಾಗಲಿಲ್ಲ. ಅರೇಬಿಕ್ ಪದಕೋಶದಲ್ಲೇ 'ಅರಸ' ಪದವೇ ಇದ್ದಿರಲಿಲ್ಲ. ಆದರೆ ಇಸ್ಲಾಮೀ ಸಾಮ್ರಾಜ್ಯ ಜಗತ್ತಿನ ಇತರ ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ಮಾರಕವಾಗಿ ಕಂಡು ಬರುವಷ್ಟು ಬೆಳೆಯಿತು. ಅದಕ್ಕೆಂತಲೇ ಮುಸಲ್ಮಾನರು 'ಒಂದು ಕೈಯಲ್ಲಿ ಕುರ್‌ಆನ್ ಹಾಗೂ ಇನ್ನೊಂದು ಕೈಯಲ್ಲಿ ಖಡ್ಗ' ಹಿಡಿದು ಜಗತ್ತನ್ನು ಕೈವಶ ಮಾಡಿಕೊಂಡರು ಎನ್ನುವುದೇ ಸತ್ಯ ಎನ್ನುವಂತಾಯಿತು. ಇಂದು ಸಹ ಕೇವಲ ತೈಲ ದೊರೆಗಳನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳುವುದಕ್ಕಾಗಿಯೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇಸ್ಲಾಂ ತನ್ನ ತಾತ್ವಿಕತೆಯಲ್ಲಿ ಮತಾಂಧತೆಯನ್ನು ಪೋಷಿಸುತ್ತದೆ ಎನ್ನುವುದನ್ನು ತಮ್ಮ ಮೂಲ ಮಂತ್ರವಾಗಿಸಿಕೊಂಡಿವೆ.

**೨.ಇಸ್ಲಾಂ ತಾನು ಹರಡಿಕೊಂಡ ದೇಶ ಮತ್ತು ಕಾಲಗಳಿಗೆ ಹೊಂದಿಕೊಳ್ಳುವ, ಪರಿವರ್ತನಶೀಲವಾದ ಧರ್ಮವಲ್ಲ ಎಂದು ಹೇಳಲಾಗುತ್ತದೆ. ಇದು ಎಷ್ಟು ಸರಿ? ಏಕೆ?**

ಇದನ್ನು ಒಪ್ಪಿಕೊಳ್ಳಲಾಗದು. ಏಳನೆಯ ಶತಮಾನದಲ್ಲಿ ಇಸ್ಲಾಂ ಅರೇಬಿಯಾದಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಅಲೆಮಾರಿ ಬುಡಕಟ್ಟುಗಳು ತಲೆ ತಲಾಂತರದಿಂದ ಬಂದಿದ್ದ ವ್ಯಾಪಾರಸ್ಥರ ಕಾರವಾನಗಳನ್ನು ಸುಲಿಗೆ ಮಾಡುವ 'ಕಾಯಕ'ವನ್ನು ಕೈಬಿಟ್ಟವು. ಒಂದೆಡೆ ನೆಲೆ ನಿಂತ ಅರಬ್ ವ್ಯಾಪಾರಸ್ಥರ ನಾಗರಿಕತೆ ಅಲೆಮಾರಿ ಅರಬರ ನಾಗರಿಕತೆ ಹಾಗೂ ಸಂಸ್ಕೃತಿಯ ಪ್ರಭಾವದಿಂದಾಗಿ ಒಂದು 'ರಾಷ್ಟ್ರ'ದ ಪರಿಕಲ್ಪನೆ ಗರಿಗೆದರಿತು. ಹೀಗೆ ವಣಿಕ ಸಮಾಜದಲ್ಲಿ ಅರಳಿದ ಧರ್ಮ ಹೆಚ್ಚು ವ್ಯಾವಹಾರಿಕವಾಗಿತ್ತು. ಅಲ್ಲಿ ಸಂಗೀತ, ನೃತ್ಯ, ಚಿತ್ರಕಲೆ ಮುಂತಾದವುಗಳ ವಿಕಾಸ ಸಾಧ್ಯವಾಗಲೇ ಇಲ್ಲ. ಆದರೆ ಇಸ್ಲಾಂ ಪ್ರಸಾರವಾಗುತ್ತ ಕೃಷಿ ಪ್ರಧಾನ ದೇಶಗಳಿಗೆ ಪ್ರವೇಶಿಸಿತು. ಅದು ಅಲ್ಲಿನ ಸಂಸ್ಕೃತಿಗೆ ತಕ್ಕಂತೆ ಮಾರ್ಪಾಟಾಯಿತು. ಕೃಷಿ ಪ್ರಧಾನ ದೇಶಗಳಲ್ಲಿ ಕಾವ್ಯ, ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿಗಳ ವಿಕಾಸವನ್ನು ಹತ್ತಿಕ್ಕುವುದು 'ರಾಜಕೀಯ ಇಸ್ಲಾಂ'ಗೆ ಅಸಾಧ್ಯವಾಯಿತು. ಅದಕ್ಕೆಂತಲೇ 'ಸೂಫೀ ಇಸ್ಲಾಂ' ಎಂದಿನಂತೆ ಎಲ್ಲೆಡೆ ದಾಂಗುಡಿ ಇಡತೊಡಗಿತು. ಇಸ್ಲಾಂ ಮೈವೆತ್ತ ಭೂಭಾಗದಲ್ಲಿ ಅರಸೊತ್ತಿಗೆ ಇಲ್ಲವೆ ನಿರಂಕುಶ ಪ್ರಭುತ್ವ ಇಂದಿಗೂ ಮುಂದುವರಿದುಕೊಂಡು ಬಂದಿದೆ. ಆದರೆ ಜಗತ್ತಿನ ಬೇರೆಡೆ ಇಸ್ಲಾಮೀ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ನೆಲೆಯೂರುತ್ತಿದೆ.

**೩.ಭಾರತೀಯ ಇಸ್ಲಾಂ ಎಂಬುದೊಂದು ಇದೆಯೇ? ಇದ್ದಲ್ಲಿ**

**ಅದರ ವಿಶಿಷ್ಟ ಲಕ್ಷಣಗಳೇನು? ಅವು ಇವೆ ಎನ್ನುವರು ಈಗ ಅವು ವಹಾಬಿ ಇಸ್ಲಾಂ ಪ್ರಸಾರದಿಂದಾಗ ಅಪಾಯದ ಅಂಚಿನಲ್ಲಿವೆ ಎನ್ನುತ್ತಾರೆ. ನೀವೇನು ಹೇಳುವಿರಿ?**

ಭಾರತದಲ್ಲಿ ರಾಜಕೀಯ ಇಸ್ಲಾಂ ಮತ್ತು ಸೂಫಿ ಇಸ್ಲಾಂ ಜೊತೆ ಜೊತೆಗೇ ಪಸರಿಸಿದವು. ರಾಜಕೀಯ ಇಸ್ಲಾಂ ಮತ್ತು ಸೂಫಿ ಇಸ್ಲಾಂ ಘರ್ಷಣೆಗಿಳಿಯಲಿಲ್ಲ. ಆದರೆ ರಾಜಕೀಯ ಇಸ್ಲಾಂ ಕೊನೆಗೂ ಪತನೋನ್ಮುಖವಾಯಿತು. ಸೂಫಿ ಇಸ್ಲಾಂ ಕೇವಲ ಮುಸಲ್ಮಾನರಷ್ಟೇ ಅಲ್ಲ, ಮುಸಲ್ಮಾನೇತರರಿಗೂ ಆಪ್ತವಾಗುತ್ತ ಸಾಗಿತು. ಸೂಫಿ ಸಂತರ ಅನುಭಾವಿ ಕಾವ್ಯ ಎಲ್ಲ ಸಮುದಾಯದವರಿಗೂ ಅಪ್ಯಾಯ ಮಾನವೆನಿಸಿತು. ಧರ್ಮದ ಆಧಾರದಲ್ಲೇ ನಮ್ಮ ದೇಶ ಒಡೆಯುವುದರೊಂದಿಗೆ ಶತಶತಮಾನಗಳಿಂದ ಸಹಜೀವನ ನಡೆಸಿದ್ದ ಹಿಂದೂ ಮುಸಲ್ಮಾನರ ಮನಸ್ಸುಗಳೂ ಒಡೆದವು. ಆದರೆ ಆರೇಳು ಶತಮಾನಗಳಿಂದ ಕವ್ವಾಲಿ ಪರಂಪರೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದ ಸಂಗೀತಗಾರರ ಪೈಕಿ ಉಸ್ತಾದ ನುಸ್ರತ್ ಫತೆಹ್ ಅಲಿ ಖಾನ್ ಮೀರಾ ಭಜನ್‌ಗಳನ್ನು ತಮ್ಮದೇ ಆದ ಶೈಲಿಯಲ್ಲಿ ಹಾಡಿ ಕೋಮು ಸೌಹಾರ್ದದ ಪರಿಸರ ನಿರ್ಮಿಸಲು ಪ್ರಾಮಾಣಿಕವಾಗಿ ಶ್ರಮಿಸಿದರು. ನಿಜ, ಅದೇ ಫತೆಹ್ ಅಲಿಖಾನ್‌ರ ದೇಶದಲ್ಲಿ ಕ್ರಿಕೆಟ್ ಪಟುಗಳು ಪಂದ್ಯದ ಕೊನೆಗೆ ತಮ್ಮನ್ನು ಸಂದರ್ಶಿಸಿದವರೊಂದಿಗೆ "ಫರ್ಸ್ಟ್ ಆಫ್ ಆಲ್ ಐ ಥ್ಯಾಂಕ್ ಮೈ ಅಲ್ಲಾಹ್..." ಎನ್ನುವುದರೊಂದಿಗೆ ತಮ್ಮ ಗಡ್ಡ ನೀವಿಕೊಳ್ಳುತ್ತ ಮಾತು ಮುಂದುವರಿಸುತ್ತಿದ್ದಾರೆ. ವಹಾಬಿ ಪಂಥ ಇಸ್ಲಾಂ ವಿಚಾರಧಾರೆಯನ್ನು ಭ್ರಷ್ಟಗೊಳಿಸುತ್ತಿರುವುದು ಬರಿ ಬೇಸರದ ಸಂಗತಿಯಲ್ಲ, ಆತಂಕಕಾರಿ ಬೆಳವಣಿಗೆ. ಪ್ರಗತಿಪರ ಮುಸಲ್ಮಾನರು ನಾಸ್ತಿಕರೇ ಆಗಬೇಕಿಲ್ಲ. ಧರ್ಮನಿಷ್ಠ ಮುಸಲ್ಮಾನರಿಂದ ಬೇರೆಯವರಿಗಂತೂ ಅಪಾಯವಾಗಲಾರದು. ಆದರೆ ಮತಾಂಧ ಮುಸಲ್ಮಾನರಿಂದ ಮುಸಲ್ಮಾನೇತರರಿಗಷ್ಟೇ ಅಲ್ಲ ಮುಸಲ್ಮಾನರಿಗೂ ಅಪಾಯ ತಪ್ಪಿದ್ದಲ್ಲ. ಕೋಮು ಸೌಹಾರ್ದದ ಪರಿಸರ ನೆಲೆ ನಿಲ್ಲುವಂತೆ ಮಾಡಬಲ್ಲ ಸೂಫಿ ಇಸ್ಲಾಂ ನಮ್ಮ ದೇಶದಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸಾಧ್ಯತೆಯಂತೂ ಇದ್ದೇ ಇದೆ.

**–ಹಸನ್ ನಯೀಂ ಸುರಕೋಡ,**
ಇಸ್ಲಾಂ ತತ್ವಚಿಂತಕರು ಹಾಗೂ ಅನುವಾದಕರು

---



**೧. ಇಸ್ಲಾಂ ಒಂದು ಸಾಮಾಜಿಕ ಧರ್ಮವಾಗಿ, ತನ್ನ ಮೂಲ ತಾತ್ವಿಕತೆಯಲ್ಲೇ ಮಹಿಳೆಯರನ್ನು ಸಮಾನವಾಗಿ ಕಾಣಲು ನಿರಾಕರಿಸುತ್ತದೆಯೇ? ಹಾಗಿದ್ದಲ್ಲಿ ಕಾರಣಗಳೇನು?**

ಇಲ್ಲ, ನಿರಾಕರಿಸುವುದಿಲ್ಲ. ಬದಲಾಗಿ ಮಹಮ್ಮದ್ ಪೈಗಂಬರರು ಮಹಿಳೆಯರು ಸಮಾಜದಲ್ಲಿ ಘನತೆಯಿಂದ ಬಾಳಲು ಅನುವು ಮಾಡಿಕೊಡುವ ಅನೇಕ ನಿಯಮಗಳನ್ನು ರೂಪಿಸಿ ಹೋಗಿದ್ದಾರೆ. ಅವುಗಳಲ್ಲಿ ಪ್ರಮುಖವಾದದ್ದು, ಮಹಿಳೆಯರಿಗೆ ಶಿಕ್ಷಣದ ಹಕ್ಕು. ತಾಯಿಯಾಗುವ ಹೆಣ್ಣಿನ ಮಹತ್ವವನ್ನು, ಜವಾಬ್ದಾರಿಗಳನ್ನೂ ಅರಿತಿದ್ದ ಪ್ರವಾದಿಗಳು ಹೆಣ್ಣು ಮಕ್ಕಳನ್ನು ಚೆನ್ನಾಗಿ ಕಳಿಸಿ ಶಿಕ್ಷಣ ಕೊಡಿಸಬೇಕೆಂದು ಬೋಧಿಸಿದ್ದಾರೆ. ಇನ್ನು ಯಾವ ಸಮಾಜವೂ ಅವರ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕುಗಳನ್ನು ನೀಡದೇ ಇದ್ದಾಗ ಅವರು ತಮ್ಮ ಸಮಾಜದ ಹೆಣ್ಣು ಮಕ್ಕಳಿಗೆ ಅವನ್ನು ನೀಡಿದರು. ಹೆತ್ತವರ ಆಸ್ತಿಯಲ್ಲಿ ಮಾತ್ರವಲ್ಲ, ಗಂಡನ ಆಸ್ತಿಯಲ್ಲಿ ಮತ್ತು ವಿಧವೆ ತಾಯಿಗೆ ಗಂಡು ಮಕ್ಕಳ ಆಸ್ತಿಯಲ್ಲೂ ಪಾಲನ್ನು ಕಡ್ಡಾಯ ಮಾಡಿದರು. ಇವಲ್ಲದೆ ವಿಧವಾ ವಿವಾಹ, ಪುನರ್ವಿವಾಹದ ಹಕ್ಕುಗಳು ಇಸ್ಲಾಂ ಮಹಿಳೆಯರಿಗೆ ನೀಡಿದ ಕೊಡುಗೆಗಳು.

೨೫ ವರ್ಷ ಪ್ರಾಯದ ಪ್ರವಾದಿ ಮಹಮ್ಮದ್‌ರು ತಮಗಿಂತ ೧೫ ವರ್ಷ ಹಿರಿಯರಾದ, ಮೊದಲೆರಡು ಬಾರಿ ಮದುವೆಯಾಗಿ ಮಗುವೊಂದರ ತಾಯಿಯೂ ಆಗಿದ್ದ ಖದೀಜಾ ಬೀಬಿಯವರನ್ನು ವಿವಾಹವಾಗಿದ್ದೇ ಅವರ ಪ್ರಗತಿಪರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿರುವಾಗ ಅವರು ಹೆಣ್ಣಿನ ಮೇಲೆ ಯಾವುದೇ ವಿಶೇಷ ಪಾವಿತ್ರ್ಯದ ಭಾರವನ್ನು ಹೊರಿಸಲು ಹೇಗೆ ಸಾಧ್ಯ? ಅವರು ಧರ್ಮವನ್ನು ಹರಡಿದ ಅರಬ್ ದೇಶ ಮರುಭೂಮಿಯಾದುದರಿಂದ ಅಲ್ಲಿ ಗಂಡಸು ಹೆಂಗಸಿರಿಬ್ಬರೂ ಮರಳಿನಿಂದ ತಮ್ಮ ಕಣ್ಣು ಮೂಗುಗಳ ರಕ್ಷಣೆಗಾಗಿ ತಲೆ ಮೇಲೆ ಉದ್ದನೆಯ ಬಟ್ಟೆ ಹಾಕಿಕೊಳ್ಳುತ್ತಿದ್ದರು. ಆಗಿನ ಆ ಬುಡಕಟ್ಟು ಸಮಾಜ ಅನಾಗರಿಕವಾಗಿದ್ದುದರಿಂದ ಹೆಂಗಸರು ಕೆಟ್ಟ ಗಂಡಸರ ಕಾಮುಕ ದೃಷ್ಟಿಗೆ ಬೀಳದಿರಲೆಂದು ಅವರಿಗೆ ಮನೆ ಬಿಟ್ಟು ಹೊರ ಹೋಗುವಾಗ ಆ ಬಟ್ಟೆಯನ್ನು ಎದೆಯ ಮೇಲೆ ಎಳೆದುಕೊಳ್ಳಲು ಸೂಚಿಸಿದರು. ಆದರೆ ಅದೀಗ ಎಷ್ಟೊಂದು ಅತಿರೇಕಕ್ಕೆ ಹೋಗಿದೆಯೆಂದರೆ ಮುಸ್ಲಿಂ ಹೆಂಗಸರೇನು, ಆರೇಳು ವರ್ಷದ ಹೆಣ್ಣು ಮಕ್ಕಳಿಗೂ ಇಡೀ ದೇಹ ಮುಚ್ಚುವಂತಹ ಬುರ್ಖಾ ತೊಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ವತಃ ಪ್ರವಾದಿಗಳೇ ಮಸೀದಿಯೊಳಗೆ ತಮ್ಮ ಪತ್ನಿಯರನ್ನು ಹಿಂದಿಟ್ಟುಕೊಂಡು ನಮಾಜು ಮಾಡುತ್ತಿದ್ದರಾದರೂ, ಇಂದು ಮಸೀದಿಗಳಿಗೆ ಮಹಿಳೆಯರ ಪ್ರವೇಶಕ್ಕೆ ಅಡ್ಡಿಯುಂಟು ಮಾಡಲಾಗುತ್ತಿದೆ.

ಇಸ್ಲಾಂನಲ್ಲಿ ಮಹಿಳೆಯರನ್ನು ಸಮಾನವಾಗಿ ಕಾಣುವುದಿಲ್ಲ ಎಂಬ ಅಭಿಪ್ರಾಯ ಮೂಡಲು ಮುಖ್ಯ ಕಾರಣ ಈ ಧರ್ಮದ ಪುರೋಹಿತಶಾಹಿ. ಈ ಸಂಬಂಧವಾಗಿ ಮೊದಲಾಗಿ ನಾವು ತಿಳಿಯಬೇಕಾದದ್ದು, ಈ ಪಂಡಿತರು ಮತ್ತು ಮುಲ್ಲಾಗಳು ತಮ್ಮ ಆದೇಶಗಳಿಗಾಗಿ ಉಲ್ಲೇಖಿಸುವ ಪವಿತ್ರ ಖುರಾನ್ ಆಗಲೀ ಹದೀಸ್ ಆಗಲೀ, ಪ್ರವಾದಿಗಳ ಕಾಲದಲ್ಲಿ ರಚಿತವಾದ ಗ್ರಂಥಗಳಲ್ಲ. ಖುರಾನ್ ಪ್ರವಾದಿಗಳು ದೇಹತ್ಯಾಗ ಮಾಡಿದ ಸುಮಾರು ನೂರು ವರ್ಷಗಳ ನಂತರ ರಚಿಸಲ್ಪಟ್ಟರೆ, ಪ್ರಶ್ನೋತ್ತರಗಳ ರೂಪದಲ್ಲಿರುವ ಹದೀಸ್ ರಷ್ಯಾದೇಶದ ಬುಖಾರಿ ಎಂಬುವವರು ನೂರೈವತ್ತು ವರ್ಷಗಳ ನಂತರ ಮೆಕ್ಕಾ–ಮದೀನಾಗಳಿಗೆ ಬಂದು ಪ್ರವಾದಿಗಳ ಬಗ್ಗೆ ಅಲ್ಲಿದ್ದ ನಂತರದ ಐದನೆಯದೋ ಆರನೆಯದೋ ತಲೆಮಾರಿನವರೊಂದಿ ಮಾತಾಡಿ ರಚಿಸಿದ್ದು. ಇವುಗಳಲ್ಲಿರುವ ಹೆಚ್ಚಿನ ಶ್ಲೋಕ/ ನಿಯಮ/ ಪ್ರಶ್ನೋತ್ತರಗಳ ಬಗೆಗಿನ ವ್ಯಾಖ್ಯಾನಗಳ ಬಗ್ಗೆ ಪಂಡಿತರಲ್ಲಿಯೇ ಒಮ್ಮತವಿಲ್ಲ.

ಹೀಗಾಗಿ ಮುಲ್ಲಾಗಳ ವ್ಯಾಖ್ಯಾನಗಳ ಆಧಾರದ ಮೇಲೆ ಇಡೀ ಧರ್ಮದ ಬಗ್ಗೆ ವ್ಯಾಖ್ಯಾನ ಮಾಡಲಾಗದು. ಇಸ್ಲಾಂ ಧರ್ಮದ ಚರಿತ್ರೆಯನ್ನು ಸವಿವರವಾಗಿ ಅಧ್ಯಯನ ಮಾಡಿದಾಗ ಈ ವ್ಯಾಖ್ಯಾನ–ಅಪವ್ಯಾಖ್ಯಾನಗಳ ಮತ್ತು ಇಸ್ಲಾಂನಲ್ಲಿ ಪಂಥೀಯತೆ ಆರಂಭವಾದುದರ ಹಿಂದಿನ ರಾಜಕಾರಣ ಅರ್ಥವಾಗುತ್ತದೆ. ಉದಾಹರಣೆಗೆ ನಾನು ಹುಟ್ಟಿ ಬೆಳೆದ ಕೇರಳದಲ್ಲಿ ಇಸ್ಲಾಂ ಎಷ್ಟು ಉದಾರವಾಗಿತ್ತೆಂದರೆ ಆ ಕಾಲದಲ್ಲೇ ನನಗೆ ಶಿಕ್ಷಣ ಸಾಧ್ಯವಾಯಿತು. ಆದರೀಗ ಅಲ್ಲಿ ಉದಾರವಾದಿ ಮತ್ತು ಪ್ರಗತಿಪರರ ನಡುವೆ ದೊಡ್ಡ ಘರ್ಷಣೆಯೇ ನಡೆದಿದೆ.



**೨. ನೀವು ಮುಸ್ಲಿಂ ಮಹಿಳೆಯರ ಪರವಾಗಿ ಮಾತನಾಡಲು/ ಹೋರಾಡಲು ಹೊರಟಾಗಿನಿಂದ ಈವರೆಗೆ ಮುಸ್ಲಿಂ ಮಹಿಳೆಯರಲ್ಲಿ ಹೆಚ್ಚಿನ ಜಾಗೃತಿ ಉಂಟಾಗಿದೆ ಎಂದು ನೀವು ಭಾವಿಸುವಿರಾ? ಅದಕ್ಕೆ ನೀವು ಕಾಣುವ ಸಾಕ್ಷ್ಯಗಳೇನು?**

ದನಿಯೇ ಇಲ್ಲದಿದ್ದ ಮುಸ್ಲಿಂ ಮಹಿಳೆಗೆ ನಾನು ಸಣ್ಣ ರೀತಿಯಲ್ಲಿ ದನಿ ನೀಡಲು ಪ್ರಯತ್ನ ಪಟ್ಟೆನಷ್ಟೇ ಹೊರತು ಮತ್ತೇನನ್ನೂ ಮಾಡಲಿಲ್ಲ. ನನ್ನ ಪ್ರತಿಭಟನೆ–ಹೋರಾಟಗಳಿಂದ ಕನಿಷ್ಟ ಕರಾವಳಿ ಮುಸ್ಲಿಂ ಮಹಿಳೆಯರಲ್ಲಿ ಒಂದು ಮಟ್ಟದ ಜಾಗೃತಿ ಉಂಟಾಗಿ ಸಾಂಪ್ರದಾಯಿಕ ಕುಟುಂಬಗಳ ಮುಸ್ಲಿಂ ಮಹಿಳೆಯರು ಹೆಚ್ಚಿ ಶಿಕ್ಷಣ ಪಡೆಯಲು ಆರಂಭಿಸಿ ಹೊರಗೆ ಕೆಲಸಗಳಿಗೂ ಹೋಗಲಾರಂಭಿಸಿದ್ದರು. ಆದರೆ ಈಗ 'ಇಸ್ಲಾಂ ಶುದ್ಧೀಕರಣ' ಚಳುವಳಿಯ ಹೆಸರಿನಲ್ಲಿ ವಹಾಬಿ ಮತ್ತು ತಬ್ಲೀಕ್‌ಗಳು ಬಂದು ಅದನ್ನು ಸ್ಥಗಿತಗೊಳಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

**೩. ವಹಾಬಿ ಇಸ್ಲಾಂ ಮತ್ತು ತಬ್ಲಿಕಿ ಆಂದೋಲನ ಶುರುವಾದ ಮೇಲೆ ಇಲ್ಲಿನ ಮುಸ್ಲಿಂ ಸಮುದಾಯದಲ್ಲಿ ಸುಧರಣೆಗಳು ಕಷ್ಟ ಎನ್ನಸುತ್ತಿದೆಯೇ? ಏಕೆ?**

ಈ ಹಿಂದಿನ ಪ್ರಶ್ನೆಗೆ ನೀಡಿದ ಉತ್ತರವನ್ನು ಮುಂದುವರೆಸಿ ಹೇಳುವುದಾದರೆ, ವಹಾಬಿ ಇಸ್ಲಾಂ ಮತ್ತು ತಬ್ಲೀಗ್ ಸಂಘಟನೆ ಪ್ರಾಂಭವಾದ ಮೇಲೆ ಇಲ್ಲಿನ ಮುಸ್ಲಿಂ ಸಮುದಾಯದಲ್ಲಿ ಸುಧಾರಣೆಗ್ಳು ಸಾಧ್ಯವಾಗದಂತೆ ಮಹಿಳೆಯರ ಮೆದುಳನ್ನು ತೊಳೆದಿಟ್ಟಿವೆ. ಯಾರು ಏನು ಹೇಳಿದರೂ ಅವುಗಳೆಡೆಗೆ ಗಮನ ಹರಿಸದಂತಹ ಶೂನ್ಯ ಮನಃಸ್ಥಿತಿಯಲ್ಲಿ ಈ ಮಹಿಳೆಯರನ್ನು ವಶೀಕರಿಸಿಕೊಂಡುಬಿಟ್ಟಿದ್ದಾರೆ. ಪುರುಷರು ಮೇಲಕ್ಕೆ ಕೈ ತೋರಿಸುತ್ತಾ, ಅವರೊಡನೆ ಹೀಗೆನ್ನುತ್ತಾರೆ: " ನೀವು ಈ ಲೋಕದಲ್ಲಿ ಯಾವುದಕ್ಕೂ ಆಸೆ ಪಡಬೇಡಿರಿ. ದೇವರು ನಿಮಗೆ ಎಲ್ಲವನ್ನೂ ಅಲ್ಲಿ ನೀಡುತ್ತಾನೆ. ಇಲ್ಲಿ ನೀವು ನಮಾಜ಼್ ಮಾಡುತ್ತಾ ಮಕ್ಕಳನ್ನು ಸಾಕುತ್ತಾ ಗಂಡನ ಆಜ್ಞಾನುವರ್ತಿಯಾಗಿ ಬದುಕಿದರೆ ಸ್ವರ್ಗ ದೊರೆಯುತ್ತದೆ. ಸ್ವರ್ಗವಿರುವುದು ಮುಸ್ಲಿಮರಿಗೆ ಮಾತ್ರ. ಮುಸ್ಲಿಮೇತರರಿಗೆ ಸ್ವರ್ಗ ದೊರೆಯುವುದಿಲ್ಲ.'

ಈ ಕುರಿತು ಕೇರಳದ ಡಾ. ಖದೀಜಾ ಮುಮ್ತಾಜ್ ಎನ್ನುವವರು ಸೌದಿಯಲ್ಲಿ ವೈದ್ಯರಾಗಿದ್ದ ತಮ್ಮ ಅನುಭವ ಕುರಿತು ಅತ್ಯುತ್ತಮ ಕಾದಂಬರಿ ಬರೆದಿದ್ದಾರೆ. ಇದನ್ನು ನಾನು ಕನ್ನಡಕ್ಕೆ ಅನುವಾದಿಸಿ 'ಮುಂಬೆಳಗು' ಎಂಬ ಹೆಸರಿನಲ್ಲಿ ಹೊರತಂದಿದ್ದೇನೆ. ಓದಿರಿ.

**–ಸಾರಾ ಅಬೂಬಕರ್,**

**ಖ್ಯಾತ ಲೇಖಕಿ ಹಾಗೂ ಹೋರಾಟಗಾರ್ತಿ**

---



**೧.ಕನಾಟಕದಲ್ಲಿ ಬಹಳಷ್ಟು ಮುಸ್ಲಿಂ ಮಕ್ಕಳು ಕನ್ನಡ ಶಾಳೆಗಳಿಗೆ ಸೇರುತ್ತಿಲ್ಲ. ಏಕೆ?**

ಕರ್ನಾಟಕದ ಹೆಚ್ಚಿನ ಮುಸ್ಲಿಮರು ಉರ್ದು ಭಾಷೆಯ ಬಗ್ಗೆ ಇರಿಸಿಕೊಂಡಿರುವ ಗೌರವ ಮತ್ತು ಭಕ್ತಿಗಳು ಕನ್ನಡ ಮಾಧ್ಯಮದ ಆಯ್ಕೆಯ ವಿಷಯದಲ್ಲಿ ತೊಡಕಾಗಿವೆ. ಉರ್ದುವನ್ನು ಮಾತೃಭಾಷೆಯಾಗಿ ಉಪಯೋಗಿಸುತ್ತಿರುವ ಮುಸ್ಲಿಮರು ಮಾತ್ರ ಅದನ್ನು ತಮ್ಮ ಧಾರ್ಮಿಕ ಭಾಷೆ ಎನ್ನುವಷ್ಟರ ಮಟ್ಟಿಗೆ ಒಪ್ಪಿಕೊಂಡಿದ್ದಾರೆ. ಉರ್ದು ಓದಿಕೊಂಡರೆ ಧಾರ್ಮಿಕ ಗ್ರಂಥದ ಕಲಿಕೆ ಸಲೀಸಾಗುತ್ತದೆ ಎಂಬುದು ಅವರ ನಂಬಿಕೆ. ಈ ಕಾರಣಕ್ಕೆ ಮುಸ್ಲಿಂ ಹೆಣ್ಣು ಮಕ್ಕಳು ಒಂದು ಬದ್ಧತೆ ಎಂದು ಭಾವಿಸಿ ಉರ್ದು ಮಾಧ್ಯಮವನ್ನು ಆರಿಸಿಕೊಳ್ಳುತ್ತಿದ್ದಾರೆ. ಧಾರ್ಮಿಕ ಗ್ರಂಥಗಳ ತರ್ಜುಮೆ ಕನ್ನಡದಲ್ಲಿ ಬಂದಿದ್ದರೂ ಅದರ ಭಾಷೆ, ಮತ್ತು ನರೂಪಣೆಗಳು ಗ್ರಹಿಕೆಯ ದೃಷ್ಟಿಯಿಂದ ಅಷ್ಟು ಸುಲಭವಾಗಿಲ್ಲ.

ಉರ್ದು ಭಾಷೆಯ ಲಿಪಿ ನೋಡಲು ಅರಬ್ಬಿ ಭಾಷೆಯಂತೆ ಕಾಣುವುದರಿಂದ ಅದರ ಬಗೆಗೆ ಮುಸ್ಲಿಮರಿಗೆ ಪೂಜ್ಯ ಭಾವನೆಯಿದೆ. ಉರ್ದು ಓದಲು ಬರೆಯಲು ಬಾರದ ಮುಸ್ಲಿಮರೂ ಕೂಡ ಅದನ್ನು ತಮ್ಮ ಧರ್ಮದ ಭಾಷೆ ಎಂದೇ ನಂಬಿದ್ದಾರೆ. ಮಾತೃಭಾಷೆಗೂ, ಧಾರ್ಮಿಕ ಭಾಷೆಗೂ ಇರುವ ಅಂತರವನ್ನು ಅವರು ಗಮನಿಸಿದಂತಿಲ್ಲ.

ಇತ್ತೀಚಿನ ದಿನಗಳಲ್ಲಿ ತೀರಾ ಅತಂತ್ರ ಸ್ಥಿತಿಯಲ್ಲಿರುವ ಉರ್ದು ಶಾಲೆಗಳು ಮತ್ತು ಅದರ ಅಧ್ಯಾಪಕರಗಳು ಮುಸ್ಲಿಮರ ಮನೆಗಳಿಗೆ ತಾವೇ ತೆರಳಿ ಉರ್ದು ಮಾಧ್ಯಮಕ್ಕೆ ತಮ್ಮ ಮಕ್ಕಳನ್ನು ಸೇರಿಸುವಂತೆ ಒತ್ತಾಯವನ್ನೂ ಮಾಡುತ್ತಿದ್ದಾರೆ. ಕನ್ನಡ ಮಾಧ್ಯಮದ ಕಲಿಕೆಯ ಮಹತ್ವ ಅರಿಯದ, ಕನ್ನಡದ ವಾತಾವರಣ ಮನೆಯಲ್ಲಿ ಹೊಂದಿರದ, ಬಡ ಮತ್ತು ಮಧ್ಯಮ ವರ್ಗದ ಮುಸ್ಲಿಮರು ಮಕ್ಕಳನ್ನು ಉರ್ದು ಮಾಧ್ಯಮಕ್ಕೆ ಸೇರಿಸುತ್ತಿದ್ದಾರೆ. ಉರ್ದು ಜೊತೆಗೆ ಒಂದಿಷ್ಟು ಇಂಗ್ಲೀಷ್ ಕಲಿತರೆ ಸಾಕು ಎನ್ನುವ ಭಾವನೆ ಹೆಚ್ಚಿನ ಮುಸ್ಲಿಮರಲ್ಲಿದೆ.

ವ್ಯಾಪಾರವನ್ನು ಹೆಚ್ಚಾಗಿ ಅವಲಂಬಿಸುವ ಸಮುದಾಯಗಳು ಲೆಕ್ಕ ಪತ್ರದ ಭಾಷೆಯ ಬಗ್ಗೆ ಮಾತ್ರ ಹೆಚ್ಚು ತಲೆಕೆಡಿಸಿಕೊಳ್ಳುತ್ತವೆ. ಉಳಿದಂತೆ ಉದ್ಯೋಗ, ಜ್ಞಾನ, ಕಲೆ, ಸಂಸ್ಕೃತಿ, ದೊರಕಿಸುವ ಭಾಷೆಯ ಬಗ್ಗೆ ಅವರು ಕಾಳಜಿ ವಹಿಸುವುದು ಕಡಿಮೆ. ಮುಖ್ಯವಾಗಿ ಅವರ ಸ್ತ್ರೀ ಸಂಕುಲಕ್ಕೆ ಅಗತ್ಯವಾದ ಧಾರ್ಮಿಕ ಪಠಣದ ಒಂದು ಭಾಷೆ ಸಿಕ್ಕರೆ ಸಾಕು ಎಂದು ಅವರು ಭಾವಿಸಿದ್ದಾರೆ. ಹೀಗಾಗಿ, ತಮ್ಮ ಧರ್ಮದ, ಸಂಸ್ಕೃತಿಯ ಸ್ವರೂಪದಂತೆ ಕಾಣುವ ಉರ್ದು ಆ ಜಾಗದಲ್ಲಿ ಗಡದ್ದಾಗಿ ಕೂತಿದೆ. ಇಷ್ಟೆಲ್ಲಾ ಅಡೆತಡೆಗಳ ಬೇಧಿಸಿಕೊಂಡು ಅಲ್ಲಿ ಕನ್ನಡ ಮಾಧ್ಯಮದ ಅರಿವು ನುಸುಳುವುದು ಅಷ್ಟು ಸುಲಭವಲ್ಲ.

ಉರ್ದು ಭಾಷೆ ಅದರ ಸಾಹಿತ್ಯದ ದೃಷ್ಟಿಯಿಂದ ಶ್ರೇಷ್ಠವಾಗಿದ್ದರೂ, ಮಕ್ಕಳಿಗೆ ಕಲಿಕಾ ಮಾಧ್ಯಮದ ದೃಷ್ಟಿಯಿಂದ ಅದು 'ಡೆಡ್ ಎಂಡ್' ಆಗಿಬಿಟ್ಟಿದೆ. ಹೇಗೆಂದರೆ, ಒಂದನೇ ತರಗತಿಯಿಂದ ಉರ್ದು ಮಾಧ್ಯಮದಲ್ಲಿ ಕಲಿಯುವ ಮಗು ಎಸ್ಸೆಸೆಲ್ಸಿ ನಂತರ ಏನು ಮಾಡಬೇಕು ಎಂಬುದಕ್ಕೆ ನಮ್ಮಲ್ಲಿ ಉತ್ತರಗಳಿಲ್ಲ. ಇತ್ತ ಪಿಯುಸಿಯ ಹಂತದಲ್ಲಿ ಉರ್ದು ಮಾಧ್ಯಮ ಎಂಬ ಸಾಧನವೇ ಇಲ್ಲ. ಅಲ್ಲಿಯ ತನಕ ಉರ್ದು ಜೊತೆ ಅವರು ಚೂರುಪಾರು ಕನ್ನಡ ಮತ್ತು ಇಂಗ್ಲೀಷ್ ಕಲಿತಿರುವುದು ನಿಜವಾದರೂ, ಅದು ಅತ್ಯಂತ ಶೋಷನೀಯ ಮಟ್ಟದಲ್ಲೇ ಇರುತ್ತದೆ. ಅತ್ತ ಕಡೆ ಉರ್ದು ಮಾಧ್ಯಮವೂ ಇಲ್ಲ, ಇತ್ತ ಕನ್ನಡ ಮತ್ತು ಇಂಗ್ಲೀಷ್ ಕೂಡ ನೆಟ್ಟಗೆ ಗೊತ್ತಿಲ್ಲದೆ ಮಕ್ಕಳ ಶಿಕ್ಷಣ ಪಿಯುಸಿಯಲ್ಲಿ ಅಕ್ಷರಶಃ ನಿಂತೇ ಹೋಗುತ್ತದೆ.

ಈ ಮಕ್ಕಳು ದಡ್ಡರಲ್ಲ. ಆದರೆ ಓದುವ ಮತ್ತು ಉತ್ತರಿಸುವ ಒಂದು ಭಾಷೆಯೇ ಇವರ ಬಳಿ ಇಲವಲ್ಲ. ಈ ಕಾರಣದಿಂದ ಇವರು ವಿದ್ಯೆಯಲ್ಲಿ, ಜ್ಞಾನದಲ್ಲಿ ಅತಂತ್ರರಾಗುತ್ತಿದ್ದಾರೆ. ಅಗತ್ಯಕ್ಕಿಂತ ಹೆಚ್ಚು ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ ಉರ್ದು ಮಾಧ್ಯಮದ ಬಗ್ಗೆ ನಜಕ್ಕೂ ಗಂಭೀರವಾಗಿ ಚಿಂತಿಸಬೇಕಿದೆ. ಇದನ್ನು ಉರ್ದು ಮಾಧ್ಯಮದ ಮಿತಿ ಎಂದು ತಿಳಿಯಬೇಕೆ ಹೊರತು ಉರ್ದು ಭಾಷೆಯ ಬಗೆಗಿನ ಅಸಡ್ಡೆ ಎಂದು ತಿಳಿಯಬಾರದು. ಉರ್ದು ಒಂದು ಭಾಷೆಯಾಗಿ ಕನ್ನಡ ಮಾಧ್ಯಮದ ಜೊತೆಯಲ್ಲೇ ಕಲಿಯುವ ಸೌಲಭ್ಯ ಇದ್ದರೆ ಕನ್ನಡ ಮಾಧ್ಯಮದ ತೆಕ್ಕೆಗೆ ಮುಸ್ಲಿಮರು ಬರುತ್ತಾರೆ ಎಂಬ ಅಭಿಪ್ರಾಯ ನನ್ನದು.

**೨. ಇವರು ಕನ್ನಡ ಮಾಧ್ಯಮವನ್ನು ಆರಿಸಿಕೊಳ್ಳಬೇಕೆ? ಏಕೆ?.**

ಕನ್ನಡ ಮಾಧ್ಯಮವನ್ನು ಮುಸ್ಲಿಮರು ಆರಿಸಿಕೊಳ್ಳುವುದು ಸೂಕ್ತ ಮತ್ತು ಅಗತ್ಯವೆಂದು ನಾನು ಭಾವಿಸುತ್ತೇನೆ. ಕನ್ನಡದ ಓದು ಮತ್ತು ಬರವಣಿಗೆ ಬಾರದೆ ಮುಸ್ಲಿಮರು ಪಡುತ್ತಿರುವ ಸಂಕಟಗಳು ನೂರಾರಿದ್ದಾವೆ. ಅದು ಒಂದು ಬಸ್ಸಿನ ಬೋರ್ಡು ಓದುವುದರಿಂದ ಹಿಡಿದು ಒಂದು ಕಛೇರಿಗೆ ಅರ್ಜಿ ಬರೆಯುವ ತನಕ ವ್ಯಾಪಕವಾಗಿದೆ. ಕನ್ನಡ ಬಳಕೆಯಲ್ಲಿರುವ ಒಂದು ಪರಿಸರದಲ್ಲಿ ಬಾಳಿ ಬದುಕಬೇಕಾದಾಗ ಕೇವಲ ಮಾತುಕತೆಯ ಮಟ್ಟಿನ ಭಾಷೆ ಕಲಿತರೆ ಏನು ಪ್ರಯೋಜನ?

**–ಕಲೀಮ್ ಉಲ್ಲಾ,**

ಕನ್ನಡ ಉಪನ್ಯಾಸಕರು ಹಾಗೂ ಲೇಖಕರು

೯ನೇ ಪುಟದಿಂದ)

೬. ಪ್ರಪಂಚದ ಅಂಥ ಆಪ್ತ ಅರಿವು ಇನ್ನೂ ವಿನ್ಯಾಸಗೊಳ್ಳದ ರೂಪದಲ್ಲಿ ಒಬ್ಬನಿಗೆ ತಾನು ಮಗುವಾಗಿರುವಾಗಿನಿಂದ ಮಾತೃಭಾಷೆಯ ಘಟಕಗಳ ಮೂಲಕ ಅಲಾಯದವಾದ ದೊರೆಯುತ್ತದೆ. ಹಾಗಾಗಿ ಶಿಕ್ಷಣವೆಂದು ಕರೆಸಿಕೊಳ್ಳುವ ಜ್ಞಾನದ ವಿನ್ಯಾಸ ಮಾತೃಭಾಷೆಯ ಮೂಲಕವೇ ಆಗಬೇಕಾದ್ದು ತಾರ್ಕಿಕವಾಗಿ ಸರಿ.

೭. ಜ್ಞಾನವೆನ್ನುವುದು ಅದರ ಮುಂದಿನ ಹಂತದ ಜಿಜ್ಞಾಸೆಗಳಾದ ವಿಜ್ಞಾನ, ತಂತ್ರಜ್ಞಾನ, ಕಲೆ ಮತ್ತು ಮಾನವಿಕ ವಿಷಯಗಳ ಅಧ್ಯಯನ ಮತ್ತು ಮನನಕ್ಕೆ ಸಾವಯವ ಸಮಗ್ರವಾಗಿರಬೇಕಾಗುತ್ತದೆ ಅದು ಹಾಗಿರಬೇಕಾದಲ್ಲಿ ಅದನ್ನು ಹಾಗೆ ಸಾವಯವಾಗಿ ವಿನ್ಯಾಸಗೊಳಿಸುವುದು ಒಬ್ಬನ 'ಜೀವ ಚೈತನ್ಯ'ದ ಸಾವಯವ ಭಾಗವಾಗಿರುವ ಮಾತೃಭಾಷೆ ಮೂಲಕ ಮಾತ್ರ ಸಾಧ್ಯ.

೮. ಇಂಗ್ಲೀಷ್ ತನ್ನ ಸಾಂಸ್ಕೃತಿಕ ಬೇರುಗಳು ಮತ್ತು ರಚನಾ ವಿನ್ಯಾಸದಲ್ಲಿ ನಮಗೆ ಒಂದು ಅನ್ಯ ಭಾಷೆಯೇ. ಅದು ಕಲಿಕೆಯ ಮೂಲಕ ಸಿದ್ಧಿಸುವ ಭಾಷೆ. ಹಾಗಾಗಿ ಅದನ್ನು ಉನ್ನತ ವ್ಯಾಸಂಗಗಳಂಥ ನಂತರದ ಉದ್ದೇಶಗಳಿಗೆ ಬಳಸಬಹುದೋ ಹೊರತು ಮೂಲ ಶಿಕ್ಷಣಕ್ಕಾಗಿ ಅಲ್ಲ

೯. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಇಂಗ್ಲಿಷ್ ಕಲಿಕೆಯ ನಾನಾ ಪ್ರಯೋಜನಗ್ಳೇನೇ ಇದ್ದರೂ, ಅದು ನಮ್ಮನ್ನು ಗುಲಾಮರನ್ನಾಗಿ ಮಾಡಿದವರ ಭಾಷೆಯಾದ್ದರಿಂದ ಮೂಲ ಶಿಕ್ಷಣದ ಮಾಧ್ಯಮವಾಗಿ ಅದನ್ನು ಬಳಸಿದರೆ, ಆ ಭಾಷೆಗಿಂತ ಸುದೀರ್ಘ ಇತಿಹಾಸವುಳ್ಳ ನಮ್ಮ ದೇಸೀ ಭಾಷೆಗಳ ಸಾಮರ್ಥ್ಯವನ್ನು ಶಿಥಿಲಗೊಳಿಸಿಬಿಡುತ್ತದೆ. ತತ್ಪರಿಣಾಮವಾಗಿ ಇದು ನಮ್ಮ ಪರಂಪರೆಯ ಮೌಲಿಕತೆಯ ಸರ್ವತ್ರ ಅಧೋಗತಿಗೆ ಕಾರಣವಾಗುತ್ತದೆ. ಒಂದು ಸ್ವಾಭಿಮಾನಿ ದೇಶಕ್ಕೆ ಇದು ಒಳ್ಳೆಯದಲ್ಲ. ಭಾರತೀಯನ ವ್ಯಕ್ತಿತ್ವದಲ್ಲಿ ಒಂದು ಕೀಳರಿಮೆಯನ್ನು ಸೃಷ್ಟಿಸಿಬಿಡುವ ವಿದ್ಯಮಾನ ಇದು

೧೦. ಜಾಗತೀಕರಣವೆಂಬುದು ವಿಮರ್ಶಾತೀತವೇನಲ್ಲ. ಅದರ ದುಷ್ಪರಿಣಾಮಗಳ ಬಗ್ಗೆ ಈಗ ವ್ಯಾಪಕ ಚರ್ಚೆ ನಡೆದಿದೆ.

೧೧. ಅದರ ಪ್ರಯೋಜನಶೀಲತೆಯನ್ನೇ ಗಮನಿಸುವುದಾದರೆ ಇಂಗ್ಲೀಷನ್ನು ಒಂದು ಮಾರುಕಟ್ಟೆ ಅಥವಾ ಮಾಹಿತಿ ಸಂಗ್ರಹಣದ ಭಾಷೆಯ ವರ್ಗಕ್ಕೆ ಸೇರಿಸಬಹುದೇ ಹೊರತು ಜ್ಞಾನದ ಭಾಷೆ ಎಂದಾಗಿ ಅಲ್ಲ. ಮಾಹಿತಿ ಮತ್ತು ಜ್ಞಾನದ ನಡುವಿನ ಗೆರೆಯನ್ನು ಮಸಕುಗೊಳಿಸುವ ಯಾವುದೇ ಪ್ರಯತ್ನವೂ ಭಾರತದ ಬೌದ್ಧಿಕ ಪ್ರತಿಭೆಗೆ ಸರಿಪಡಿಸಲಾಗದ ಹಾನಿ ಉಂಟುಮಾಡುತ್ತದೆ

೧೨ ಭಾರತವು ಯಾವಾಗಿನಿಂದಲೂ ಬೇರೆ ಬೇರೆ ಭಾಷಾ ಪ್ರಾಂತ್ಯಗಳ ಸಡಿಲವಾದ ಸಾಂಸ್ಕೃತಿಕ ಒಕ್ಕೂಟವಾಗಿತ್ತು. ಬ್ರಿಟಿಷರು ವಶಪಡಿಸಿಕೊಳ್ಳುವ ಮೊದಲು ಇಲ್ಲಿ ರಾಷ್ಟ್ರೀಯತೆಯೆಂದರರೆ ಭಾಷಾ ರಾಷ್ಟ್ರೀಯತೆ(ಗಳೇ) ಆಗಿತ್ತು. ಆ ಕಾರಣದಿಂದಲೇ ರಾಜ್ಯಗಳ ಪುನರ್ಸಂಘಟನೆ ಭಾಷಾಧಾರಿತವಾಗಿಯೇ ಆಯಿತು. ಭಾರತದ ಏಕತೆಯನ್ನು ಕಲ್ಪಿಸಿಕೊಳ್ಳಬೇಕಾದ್ದು ಅಥವಾ ರಚಿಸಿಕೊಳ್ಳಬೇಕಾದ್ದು ಹೀಗೆಯೇ ಹೊರತು ಹೊರತು ಮೇಲ್ಪದರದ ಏಕತೆಯ ಭ್ರಮೆಯನ್ನಷ್ಟೇ ಉಂಟುಮಾಡುವ ಇಂಗ್ಲೀಷ್‌ನಂಥ ಅನ್ಯ ಭಾಷೆಯ ಮೂಲಕ ಅಲ್ಲ

೧೩. ಭಾಷಾಧಾರಿತವಾಗಿ ಸಂಘಟಿತವಾದ ರಾಜ್ಯಗಳಲ್ಲಿ ಮಾತೃಭಾಷೆ ಮತ್ತು ರಾಜ್ಯ ಭಾಷೆಗಳ ನಡುವೆ ಸಂಘರ್ಷವಿರಲು ಸಾಧ್ಯವಿಲ್ಲ. ಯಾಕೆಂದರೆ ಆಯಾ ರಾಜ್ಯಗಳಲ್ಲಿ ಸಾಕಷ್ಟು ಕಾಲ ವಾಸಿಸಿರುವವರೆಲ್ಲರೂ ಆಯಾ ಭಾಷೆಗಳಲ್ಲಿ ಚೆನ್ನಾಗಿ ಪಳಗಿರುತ್ತಾರಾದ್ದರಿಂದ. ಉದಾಹರಣೆಗೆ, ಕರ್ನಾಟಕದಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಗಳು ದೊಡ್ಡ ಸಂಖ್ಯೆಯಲ್ಲಿ ಶುರುವಾಗುವ ಮೊದಲು ಯಾವುದೇ ಕನ್ನಡೇತರ ಸಮುದಾಯಕ್ಕೂ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡುವುದರ ಕುರಿತು ಸಮಸ್ಯೆಯಿರಲಿಲ್ಲ. ಸಮಸ್ಯೆಯೇನಿದ್ದರೂ ಈಚಿನ ವಲಸಿಗರದ್ದು. ಮತ್ತು ಇಂಗ್ಲೀಷ್ ಶಾಲೆಗಳು ಇರದಿದ್ದ ಪಕ್ಷದಲ್ಲಿ ಅವರೂ ಕೂಡ ತಮ್ಮ ಹಿಂದಿನವರಂತೆ ಕನ್ನಡವನ್ನೇ ಶಿಕ್ಷಣ ಮಾಧ್ಯಮವಾಗಿ ಒಪ್ಪಿಕೊಳ್ಳುತ್ತಿದ್ದರು

> ಪದನಱಿದು ನುಡಿಯಲುಂ ನುಡಿದುದ
> ನಱಿಯಲುಮಾರ್ಪರಾ ನಾಡವರ್ಗಳ್
> ಚದುರರ್ ನಿಜದಿಂ ಕುರಿತೋದದೆಯುಂ
> ಕಾವ್ಯಪ್ರಯೋಗ ಪರಿಣತಮತಿಗಳ್

೧೪. ಈಗಾಲಾದರೂ ಕರ್ನಾಟಕದಲ್ಲಿ ಕನ್ನಡೇತರರ ಸಂಖ್ಯೆ ಸಾಕಷ್ಟಿರುವ ಪ್ರದೇಶಗಳಲ್ಲಿ ಕನ್ನಡವಲ್ಲದ ಇತರೆ ಭಾಷೆಗಳಲ್ಲೇ ಶಿಕ್ಷಣ ನೀಡಲಾಗುತ್ತಿದೆ. ಹೊಸ ಶಿಕ್ಷಣ ಮಾಧ್ಯಮ ನೀತಿ ಜಾರಿಗೊಂಡ ಮೇಲೂ ಇದೇ ನೀತಿಯನ್ನೇ ಮುಂದುವರೆಸಬಹುದು

೧೫. ಇಂಗ್ಲೀಷ್ ಮಾಧ್ಯಮ ಶಾಲೆಗಳ ಕುರಿತಾದ ವ್ಯಾಮೋಹ ಕ್ರಮೇಣ ನಮ್ಮ ಬದುಕು ವ್ಯಾಪಾರೀಕರಣಗೊಳ್ಳುತ್ತಿರುವುದರ ಪರಿಣಾಮವಾಗಿದೆ. ಇದನ್ನು ದೊಡ್ಡ ವ್ಯಾಪಾರಿಗಳು ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಸ್ಥಾಪಿಸಿ ದೊಡ್ಡ ಮೊತ್ತದ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ದೇಶದಲ್ಲಿ ಶಿಕ್ಷಣ ಮತ್ತು ಬದುಕಿನ ಗುಣಾತ್ಮಕತೆಯನ್ನು ರಕ್ಷಿಸುವ ದೃಷ್ಟಿಯಿಂದ ಈ ಪ್ರವೃತ್ತಿಯನ್ನು ತಡೆಗಟ್ಟುವುದು ಪ್ರಭುತ್ವದ ಕರ್ತವ್ಯವಾಗಿದೆ. ಈ ಸಂಬಂಧದಲ್ಲಿ ಮೂಲಭೂತ ಹಕ್ಕುಗಳ ಪ್ರಶ್ನೆಯೆತ್ತುವುದು ಅಸಂಗತವಷ್ಟೇ ಅಲ್ಲ, ಅಸಹನೀಯ ಕೂಡ. ಅದು ನಮ್ಮ ಸಂವಿಧಾನದ ಅಂತರ್ಗತ ಉದ್ದೇಶವೇ ಆದ ರಾಷ್ಟ್ರನಿರ್ಮಾಣ ಪ್ರಕ್ರಿಯೆಗೆ ವಿರುದ್ಧವಾದುದು

೧೬. ಮಾತೃಭಾಷಾ ಶಿಕ್ಷಣ ಮಾಧ್ಯಮದ ವಿರುದ್ಧ ಎದ್ದಿರುವ ಕೂಗು ದೊಡ್ಡ ವ್ಯಾಪಾರಿಗಳ ಕೂಗು ಮಾತ್ರವಾಗಿದ್ದು, ಶಿಕ್ಷಣ ವ್ಯಾಪಾರಿಗಳೆಂದು ಕರೆಯಬಹುದಾದ ಇವರಿಗೆ ನಮ್ಮ ಯುವ ಪೀಳಿಗೆಯ ಶಿಕ್ಷಣ ಅಥವಾ ಬದುಕಿನ ಗುಣಾತ್ಮಕತೆಯ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ

೧೭. ರಾಜ್ಯ ಸರ್ಕಾರ ಪ್ರಸ್ತಾಪಿಸಿರುವ ಮಾತೃಭಾಷಾ ಮಾಧ್ಯಮ ಶಿಕ್ಷಣ ನೀತಿಯ ಪ್ರಕಾರ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೆ ರಾಜ್ಯದಲ್ಲಿ ಯಾವ ನಿಷೇಧವೂ ಇಲ್ಲ. ರಾಜ್ಯದ ಎಲ್ಲಾ ಶಾಲೆಗಳಲ್ಲಿ ಇಂಗ್ಲೀಷ್ ಒಂದು ಭಾಷೆಯಾಗಿ ಕಲಿಸಲ್ಪಡುತ್ತಿದೆ. ಈ ನೀತಿಯು ಸರ್ ಎಂ ವಿಶ್ವೇಶ್ವರಯ್ಯನವರಂಥ ಶ್ರೇಷ್ಟ ಎಂಜಿನಿಯರ್‌ಗಳನ್ನು, ಸಿ. ಎನ್. ಆರ್ ರಾವ್‌ರಂಥ ಶ್ರೇಷ್ಟ ವಿಜ್ಞಾನಿಗಳನ್ನು, ಎನ್ ಆರ್ ನಾರಾಯಣಮೂರ್ತಿಯವರಂಥ ಶ್ರೇಷ್ಟ ಉದ್ಯಮಶೀಲರನ್ನು ಮತ್ತು ಕುವೆಂಪು, ಬೇಂದ್ರೆ, ಶಿವರಾಮ ಕಾರಂತರಂಥ ಶ್ರೇಷ್ಟ ಲೇಖಕರನ್ನು ಸೃಷ್ಟಿಸಿದೆ.

೧೮. ವಾಸ್ತವವಾಗಿ ರಾಜ್ಯ ಸರ್ಕಾರವು ತನ್ನ ಈ ನೀತಿಯನ್ನು ಕೊನೇಪಕ್ಷ ೭ನೆಯ ತರಗತಿಯವರೆಗಾದರೂ ವಿಸ್ತರಿಸುವಂತೆ ಆದೇಶ ನೀಡಲು ಸರ್ವೋನ್ನತ ನ್ಯಾಯಾಲಯಕ್ಕೆ ಇದು ಸೂಕ್ತ ಪ್ರಕರಣವ್ವ ಆಗಿದೆ.

೧೯. ಬ್ರಿಟಿಷರು ಆಳಿದ ದೇಶಗಳನ್ನು ಬಿಟ್ಟು ಬೇರೆ ಯಾವ ದೇಶವೂ ಇಂಗ್ಲೀಷನ್ನು ಶಿಕ್ಷಣ ಮಾಧ್ಯಮವಾಗಿ ಹೊಂದಿಲ್ಲ.

೨೦. ದಯಮಾಡಿ ಮಾತೃಭಾಷೆಯನ್ನು ಕೊಲ್ಲಬೇಡಿ. ಹಾಗೆ ಮಾಡಿದರೆ ಭವಿಷ್ಯಕ್ಕೇ ಮಾರಕವಾದ ರಾಷ್ಟ್ರೀಯ ಅವಘಡವೆನಿಸುತ್ತದೆ ಅದು. ಮಹಾತ್ಮ ಗಾಂಧಿಯವರು ಈ ಕುರಿತು ಪರಿಪರಿಯಾಗಿ ಹೇಳಿದ್ದಾರೆ. ಸದುದ್ದೇಶಪೂರಿತರಾದ ಎಲ್ಲ ಶಿಕ್ಷಣ ತಜ್ಞರು ಮತ್ತು ಮಕ್ಕಳ ಮನಃಶಾಸ್ತ್ರಜ್ಞರು ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನೇ ಬೆಂಬಲಿಸುತ್ತಾರೆ. ಈ ಉದ್ದೇಶಕ್ಕಾಗಿ UNESCO ಕೂಡ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಹೀಗಿರುವಾಗ ಈಗ ಈ ವಿಕ್ಷಿಪ್ತತೆಗೇಕೆ ಅವಕಾಶ ನೀಡುವಿರಿ?**

*

**ಪುಸ್ತಕಾವಲೋಕನ**

ಪು: **ಅಸಮಾನತೆಯ ಬಣ್ಣಗಳು** ಲೇ: **ಹರ್ಷ ಮಂದರ್** ಪ್ರ: **ಅಹರ್ನಿಶಿ ಪ್ರಕಾಶನ**, ಶಿವಮೊಗ್ಗ ಪು: ೧೭೬ ಬೆಲೆ: ರೂ. ೧೬೦/-

## ಮನುಷ್ಯ ಪ್ರೀತಿಯ ಪ್ರಾತ್ಯಕ್ಷಿಕೆಗಳು




**ಚಿಂ**ತಕ ಮತ್ತು ಮಾನವ ಹಕ್ಕುಗಳ ಹೋರಾಟಗಾರ ಹರ್ಷ ಮಂದರ್ ಎರಡು ದಶಕಗಳ ಕಾಲ ಮಧ್ಯಪ್ರದೇಶ ಮತ್ತು ಛತ್ತೀಸಗಢ ರಾಜ್ಯಗಳಲ್ಲಿ ಐ.ಎ.ಎಸ್. ಅಧಿಕಾರಿಯಾಗಿ ಕೆಲಸ ನಿರ್ವಹಿಸಿದವರು. ದೇಶದ ಸಂವಿಧಾನವನ್ನು ಅದರ ನಿಜಾರ್ಥಗಳಲ್ಲಿ ಗ್ರಹಿಸಿ ಗೌರವಿಸಿ ತಾವು ಎದುರುಗೊಂಡ ಅಸಹಾಯಕ ಮನುಷ್ಯರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ತಮ್ಮ ಅಧಿಕಾರವನ್ನು ಪ್ರಜೆಗಳ ಒಳಿತಿಗಾಗಿ ಬಳಸಿದವರು. ೨೦೦೨ರ ಗುಜರಾತ್ ಹತ್ಯಾಕಾಂಡ ವಿರುದ್ಧ 'Cry, the beloved country' ಎಂಬ ಲೇಖನವನ್ನು ನಿರ್ಭೀತಿಯಿಂದ ಬರೆದು ಮುಸ್ಲಿಂ ಸಮುದಾಯಕ್ಕಾದ ಅನ್ಯಾಯಕ್ಕೆ ದನಿ ನೀಡಿದ್ದಷ್ಟೇ ಅಲ್ಲ, ತಮ್ಮ ಕೆಲಸಕ್ಕೂ ರಾಜೀನಾಮೆ ನೀಡಿ ತಮ್ಮ ನೈತಿಕ ನಿಲುವನ್ನು ಸ್ಪಷ್ಟಪಡಿಸಿ ನೋವುಂಡವರ ಪರವಾಗಿ ನಿಂತವರು. ಗಲಭೆಗಳ ನಂತರ ಎರಡು ಸಾವಿರ ಪ್ರಥಮ ಮಾಹಿತಿ ವರದಿಗಳನ್ನು ಸರಿಯಾದ ತನಿಖೆಯಿಲ್ಲದೆ ಮುಚ್ಚಿಹಾಕಿದ್ದರ ವಿರುದ್ಧವಾಗಿ ಸರ್ವೋನ್ನತ ನ್ಯಾಯಾಲಯದಲ್ಲಿ ದಾವೆ ಹೂಡಿ ಗೆದ್ದು ಅವಕ್ಕೆ ಮತ್ತೆ ಜೀವ ತಂದವರು.

ಈ ಕೃತಿ ಹರ್ಷ ಮಂದರ್ 'ದ ಹಿಂದೂ' ಪತ್ರಿಕೆಯಲ್ಲಿ ರವಿವಾರದ ಸಂಚಿಕೆಗಳಲ್ಲಿ ಬರೆದ ಅಂಕಣ ಮಾಲಿಕೆ 'Barefoot' ನಿಂದ ಆಯ್ದ ಲೇಖನಗಳ ಅನುವಾದ ಸಂಗ್ರಹ. ಇದನ್ನು ಜಿ. ರಾಜಶೇಖರ್ ಮತ್ತು ಕೆ. ಫಣಿರಾಜ್ ಒಗ್ಗೂಡಿ ಅರ್ಥಪೂರ್ಣ ಪ್ರಸ್ತಾವನೆ ಬರೆದು ಸಂಪಾದಿಸಿ ಕೊಟ್ಟಿದ್ದಾರೆ. ಸರಿ ಸುಮಾರು ಮುವ್ವತ್ತು ಯುವ ಅನುವಾದಕರ ಪಡೆ ಹರ್ಷ ಮಂದರ್ ಅವರ ಸಂದರ್ಶನವೂ ಸೇರಿದಂತೆ ಒಟ್ಟು ಮುವ್ವತ್ತು ಲೇಖನಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ.

ಈ ವೇಗದ ಯುಗದಲ್ಲಿ ಬರಿಗಾಲಿನಲ್ಲಿ ದೇಶದ ಮೂಲೆ ಮೂಲೆಯನ್ನು ಎಡತಾಕಿ ವ್ಯವಧಾನದಿಂದ ತನ್ನ ಸುತ್ತಣ ಸೂಕ್ಷ್ಮ ಮನಸ್ಸು, ವಿಶಾಲ ನೋಟದಿಂದ ಗಮನಿಸಲು ಹರ್ಷ ಮಂದರ್ ಅವರಿಗೆ ಸಾಧ್ಯವಾದುದರಿಂದಲೇ ಇವರ ಬರಹಗಳು ಬಡತನ, ಸಂಕಟ, ಅಸಹಾಯಕತೆ, ಹಿಂಸೆ, ಕ್ರೌರ್ಯಗಳಿಂದ ತಲ್ಲಣಿಸುತ್ತಿರುವ ದೀನ, ದರಿದ್ರ, ದುಃಖಿ;ಆದರೆ ಭರವಸೆ ಕಳೆದುಕೊಳ್ಳದ ಕಥನಗಳಾಗಿವೆ.

ಹರ್ಷ ಮಂದರ್ ಅವರ ಬರಹಗಳು ಬರಿ ಬಾಯುಪಚಾರದ ಮಾತುಗಳಲ್ಲ. ಜಾತ್ಯತೀತ, ನೆಮ್ಮದಿಯ ಹಾಗೂ ನ್ಯಾಯ ಸಮ್ಮತ ಸಮಾಜಕ್ಕಾಗಿ ಹಾಗೂ ಬೀದಿ ಮಕ್ಕಳು ಮತ್ತು ಸೂರಿಲ್ಲದವರಿಗಾಗಿ 'ದಿಲ್ ಸೆ', 'ಅಮನ್ ಬಿರಾದಾರಿ' ಹಾಗೂ 'ನ್ಯಾಯಾಗ್ರಹ' ಎಂಬ ಹೋರಾಟಗಳನ್ನೂ ಇವರು ಮುನ್ನೆಡೆಸುತ್ತಿದ್ದಾರೆ. ಹಾಗಾಗಿಯೇ, ಈ ಪುಸ್ತಕ ಓದಿ ಮುಗಿಸಿದಾಗ ಬರಿಗಾಲಿನಲ್ಲಿ ನಡೆದ ಮನುಷ್ಯನ ಜೊತೆ ಓದುಗನಿಗೂ ಹೆಜ್ಜೆ ಹಾಕುವ ಮನಸ್ಸಾಗುತ್ತದೆ.

ರಾಜಶೇಖರ್ ಅವರು ತಮ್ಮ ಪ್ರಸ್ತಾವನೆಯಲ್ಲಿ ಗುರುತಿಸಿರುವಂತೆ, ಮಂದರ್ ಅವರ ಲೇಖನಗಳು ಜಾಗತೀಕರಣದ ನಂತರ ಕಳೆದುಹೋಗಿ ಕಕ್ಕಾವಿಕ್ಕಿಯಾಗಿರುವ ದನಿಯಿಲ್ಲದವರ ಸಂಕಟವಾಗಿದೆ.. ಅಲ್ಪಸಂಖ್ಯಾತರು, ಆದಿವಾಸಿಗಳು, ಕೋಮು ಹಿಂಸೆ ಸಂತ್ರಸ್ತರು, ಅಭಿವೃದ್ಧಿ ಯೋಜನೆಗಳಿಗಾಗಿ ಒಕ್ಕಲೆಬ್ಬಿಸಲ್ಪಟ್ಟವರು, ಭಿಕ್ಷುಕರು, ನಿರುದ್ಯೋಗಿಗಳು, ಬಾಲ ಕಾರ್ಮಿಕರು, ಕೊಳಗೇರಿ ನಿವಾಸಿಗಳು, ಅಂಗವಿಕಲರು, ಅನಾಥ ಮಕ್ಕಳು, ಗತಿಗೆಟ್ಟ ಹೆಂಗಸರು, ನಿರ್ಗತಿಕ ಮುದುಕರು, ವಿಚಾರಣಾಪೂರ್ವ ಖೈದಿಗಳು–ಪ್ರಜೆಗಳಾಗಿದ್ದೂ, ಪ್ರಜೆಗಳಿಗೆ ಸಂವಿಧಾನ ಕೊಡಮಾಡಿರುವ ಹಕ್ಕು–ಸ್ವಾತಂತ್ರ್ಯಗಳಿಂದ ವಂಚಿತರಾಗಿ ಈ ಸಮಾಜದ ಅಂಚಿನಿಂದಲೇ ಹೊರದೂಡಲ್ಪಟ್ಟವರ ಕಥನಗಳಾಗಿವೆ. ಜನರ ಬಡತನ–ಸಂಕಟ–ಅಸಹಾಯಕತೆಗಳಿಗೆ ಅವರ ಸುತ್ತಲಿನ ಸಮಾಜ ಮತ್ತು ವ್ಯವಸ್ಥೆಯೇ ಕಾರಣವೆಂದು ಮಂದರ್ ತಮ್ಮ ಬರಹಗಳಲ್ಲಿ ಮತ್ತೆ ಮತ್ತೆ ಪ್ರತಿಪಾದಿಸಿದ್ದಾರೆ. ಇವೊತ್ತಿನ ಇಂಡಿಯಾದಲ್ಲಿ ಹೊಟ್ಟೆ ತುಂಬಿದವರ ಕಷ್ಟ ನಷ್ಟಗಳೇನು ಕಡಿಮೆ ಇವೆಯೇ? ತಣಿಯದ ಬಾಯಾರಿಕೆಯಿಂದ ಬಾಯ್ಬಿಡುತ್ತಿರುವ ಮಧ್ಯಮ ವರ್ಗದವರು ಈ ಕೆಳಕಾಣಿಸಿದ ಬರಹದ ತುಣುಕಿಗೆ ಹೇಗೆ ಪ್ರತಿಕ್ರಿಯಿಸುವರೋ ಎಂಬ ಕುತೂಹಲ ನನಗಿದೆ:

'ಹಸುಳೆಗಳ ಅಳು ಮೇರೆ ಮೀರಿದಾಗ ನಮ್ಮ ಬೆರಳುಗಳನ್ನು ತಂಬಾಕಿನಲ್ಲಿ ಅಥವಾ ಇನ್ನಾವುದೋ ಅಮಲಿನಲ್ಲಿ ಅದ್ದಿ ಅವುಗಳ ಬಾಯಿಗಿಡುತ್ತೇವೆ. ಇದರಿಂದ ಖಾಲಿ ಹೊಟ್ಟೆಯಲ್ಲಿ ನಿದ್ರಿಸಲು ಅವುಗಳಿಗೆ ಸಾಧ್ಯವಾಗುತ್ತದೆ. ಮಕ್ಕಳು ತುಸು ಬೆಳೆದವಾದರೆ, ಅತ್ತು ಅತ್ತು ಸುಸ್ತಾಗುವವರೆಗೂ ಹೊಡೆದು ಮಲಗಿಸುತ್ತೇವೆ. ಹಸಿವಿನಲ್ಲಿ ಬದುಕುವುದರ ಬಗ್ಗೆ ಅವುಗಳಿಗೆ ಪಾಠ ಮಾಡುತ್ತೇವೆ. ಏಕೆಂದರೆ ಅವುಗಳ ಜೀವಿತದ ಕೊನೆಯವರೆಗೂ ಸಂಗಾತಿಯಾಗಿರುವುದು ಹಸಿವೊಂದೇ ತಾನೇ?'

**('ಒಡಲಾಳದ ಕಿಚ್ಚು')**

ಸಮಾಜ ಸುಧಾರಕ ಮತ್ತು ವಿದ್ವಾಂಸ ಅಸ್ಗರ್ ಅಲಿ ಇಂಜಿನಿಯರ್ ಅವರು, ಬೋಹ್ರಾ ಪಂಥದ ಧರ್ಮಗುರು ಸಯ್ಯದ್‌ನ ದಬ್ಬಾಳಿಕೆಯ ವಿರುದ್ಧ ನಡೆಸಿದ ಆಜೀವ ಪ್ರತಿಭಟನೆಗೆ ಅವರು ಪಡೆದ ಇನಾಮನ್ನು ಹರ್ಷ ಮಂದರ್ ವರ್ಣಿಸಿರುವುದು ಹೀಗೆ: ' ಆರು ಬಾರಿ ಇಂಜಿನಿಯರ್ ಅವರ ಮೇಲೆ ದೈಹಿಕ ಹಲ್ಲೆ ನಡೆಯಿತು. ಒಮ್ಮೆ ಅವರ ಮುಖವನ್ನೇ ಆಳವಾಗಿ ಗೀರಿ ಗಾಯಗೊಳಿಸಲಾಯಿತು. ಅವರ ಮನೆಯನ್ನು ಲೂಟಿಗೈದು ಧ್ವಂಸಗೊಳಿಸಿದ್ದೇ ಅಲ್ಲದೆ, ಅವರು ಬಹುವಾಗಿ ಪ್ರೀತಿಸುತ್ತಿದ್ದ ಅವರ ಪುಸ್ತಕ ಸಂಗ್ರಹವನ್ನು ನಾಶ ಮಾಡಿದರು. ತನ್ನ ಸಾವಿನ ನಂತರ ಸಹ ಇಂಜಿನಿಯರ್ ಅವರಿಗೆ ಒಂದು ನೆಲೆ ದೊರೆಯಲಿಲ್ಲ. ಬೋಹ್ರಾಗಳ ಪಾರಂಪರಿಕ ದಹನ ಭೂಮಿಯಲ್ಲಿ ಅವರ ಅಂತಿಮ ಸಂಸ್ಕಾರಕ್ಕೆ ಅನುಮತಿ ದೊರೆಯಲಿಲ್ಲ. ಹಾಗಾಗಿ ಅವರ ಪಾರ್ಥಿವ ಶರೀರವನ್ನು ಸುನ್ನಿ ಮುಸ್ಲಿಮರ ಸ್ಮಶಾನದಲ್ಲಿ ಮಣ್ಣು ಮಾಡಲಾಯಿತು.

**('ದ್ವೇಷಿಸುವ ಜಗತ್ತನ್ನು ಪ್ರೀತಿಸುವ ಧೀರ')**

ಮೇಲಿನ ಮೊದಲ ಉದಾಹರಣೆ ಬದುಕಿನ ಕೌರ್ಯವನ್ನು ಬಿಂಬಿಸಿದರೆ, ಅದನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸುವ ಮನುಷ್ಯನ ಕಾಳಜಿಗಳಿಗೆ 'ನಾಗರಿಕ' ಜಗತ್ತು ತೋರಿಸುವ ಕ್ರೂರ ಪ್ರತಿಕ್ರಿಯೆ ಎರಡನೇ ಉದಾಹರಣೆ ಬಿಂಬಿಸುತ್ತದೆ.

ಈ ಸಂಗ್ರಹದ ಪ್ರತಿಯೊಂದು ಲೇಖನವೂ ಮಾನವೀಯ ಸ್ಪರ್ಶವುಳ್ಳದ್ದಾಗಿದ್ದು, ಜಗತ್ತಿನ ಒಳಿತಿನಲ್ಲೇ ನಿನ್ನ ಒಳಿತೂ ಅಡಗಿದೆ ಎಂಬ ಸಂದೇಶ ನೀಡುವಂತಿದೆ. ಸರ್ಕಾರ, ಸಂಘ–ಸಂಸ್ಥೆಗಳೇ ಎಲ್ಲವನ್ನೂ ಮಾಡಲಾರವು. ಕಂಗೆಟ್ಟಿರುವ ಅಸಹಾಯಕ ಜನರಿಗೆ ತತ್ಕ್ಷಣ ಪ್ರೀತಿಯಿಂದ ಹೆಗಲು ನೀಡುವುದೇ ಕಿಂಚಿತ್ ಪರಿಹಾರವಾಗಬಲ್ಲುದು ಎಂಬ ಸೂಚನೆ ಹರ್ಷ ಮಂದರ್ ಅವರ ಬರಹಗಳುದ್ದಕ್ಕೂ ಸಿಗುತ್ತದೆ.

ಅಚ್ಚ ಕನ್ನಡ ಪುಸ್ತಕವಾಗಿ ರೂಪುಗೊಂಡಿರುವ ಈ ಕೃತಿಯನ್ನು ಪ್ರಕಟಿಸಿರುವ ಶಿವಮೊಗ್ಗೆಯ ಅಹರ್ನಿಶಿ ಪ್ರಕಾಶನದ ಕೆ. ಅಕ್ಷತಾ ಮತ್ತು ಅವರ ಬಳಗ ಅಭಿನಂದನಾರ್ಹರು.

**–ಸವಿತಾ ನಾಗಭೂಷಣ**

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

ಕರ್ಣಾಟಕ ಬ್ಯಾಂಕ್

ಶಿವಾನಂದನಗರ ಶಾಖೆ

ಧಾರವಾಡ

ನಮ್ಮ ಕುಟುಂಬದ ಬ್ಯಾಂಕ್

ಭಾರತದಾದ್ಯಂತ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 30600600

**'ಹೊಸ ಮನುಷ್ಯ'ದ ಓದುಗರಿಗೆ**

**ಹೃತ್ಪೂರ್ವಕ ಶುಭಾಶಯಗಳು**



**–ಚಿ. ಆರುಷ್ ತೇಜಸ್ವಿ**

**ಹಾಗೂ ಚಿ. ಆದಿತಿ**

**ಇವರ ತಾತ ಮತ್ತು ಅಜ್ಜಿ**

## ತಿಂಗಳ ಸಾಲುಗಳು...



ಕುಗ್ಗಿಸಲು ಅದನು ಮೊದಲು ಹಿಗ್ಗಿಸಬೇಕು
ಮಣಿಸಲದನು ಚೆನ್ನಾಗಿ ಬೆಳೆಸಬೇಕು
ಕೆಳಗಿಸಬೇಕಾದರೆ ಮೇಲೇರಿಸಬೇಕು
ಪಡೆಯುವ ಮುನ್ನ ಕೊಟ್ಟಿರಬೇಕು

**–ಲಾವೋತ್ಸೆ**

**ಪತ್ರಿಕೆಗೆ ಶುಭ ಕೋರುತ್ತಾ...**

**ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204 (Karnataka)